ಕಲ್ಯಾಣ ಕಿರಣ

೮



ಕಲ್ಯಾಣ ಕಿರಣ

ಮಾಸಪತ್ರಿಕೆ

ಬಿಡಿ ಪ್ರತಿ
ಒಂದು ರೂಪಾಯಿ
ಡಿಸೆಂಬರ್ : ೧೯೭೮
ಬಸವ ಶಕೆ : ೮೭೨

ವಾರ್ಷಿಕ ಚಂದಾ
ಹನ್ನೆರಡು ರೂಪಾಯಿ
ಸಂಪುಟ : ೪
ಸಂಚಿಕೆ : ೮

ಈ ಬೆಳಕಿನಲ್ಲಿ ಸುಳಿದಾಡಿದಾಗ ?

ಮುಖ ಪುಟ : ವಿಶ್ವವಿಖ್ಯಾತ ಬ್ರಿಟಿಷ್ ಮ್ಯೂಸಿಯಮ್ ಮಹಾದ್ವಾರ
ನಾಲ್ಕನೆ ಹೊದ್ದಿಕೆ : ಮೈಸೂರು ಪ್ರವಚನದ ಉದ್ಘಾಟನೆ

ನುಡಿ-ನೈವೇದ್ಯ

ಮಕ್ಕಳಿಗೆ ಉದಯಗೀತೆ

ಏಳು ಕಂದನೆ ಬೆಳಕು ಹರಿಯಿತು
ಬಾನಿನಂಗಳ ತೆರೆಯಿತು ||ಪ||
ಇಳೆಯ ಕತ್ತಲೆ ಕಳೆಯಲೋಸುಗ
ಬಾಲರವಿ ತಾ ಬಂದಿಹ ||ಅ. ಪ||

ಭುವಿಗೆ ಹೊದಿಸಿಹ ನಿಶೆಯ ಮುಸುಕನು
ಮೆಲ್ಲಮೆಲ್ಲನೆ ಸರಿಸುತ ।
ಜಗದ ಒಡಲನು ಬೆಳಗಲಿಕ್ಕೆ
ಕೋಟಿ ಕಿರಣವ ಹಾಯಿಸಿ ||೧||

ಇರುಳು ಕಾಲದಿ ರವಿಯು ಇರದಿರೆ
ಆಳಿ ಜನರನು ನಡುಗಿಸಿ ।
ಮುದುಡಿ ಮಲಗಿಸಿ ಮುದ್ದೆಮಾಡಿಹ
ಚಳಿಯ ರಾಯನ ಓಡಿಸಿ ||೨||

ಚಿಲಿಯಪಿಲಿಯ ಕೂಹು ರಾಗದ
ಹಕ್ಕಿ ಕಂಠವ ಕಾಯಿಸಿ
ಪ್ರೀತಿಯ ಮಾಡಿ ಹಾಡಲೆಂದು
ವಾದ್ಯಮೇಳವ ಕೂಡಿಸಿ ||೩||

ಮೊಗವ ಮುಚ್ಚಿ ಕಂದಿ ಕುಂದಿಹ
ಕಮಲ ದಳಗಳ ಚುಂಬಿಸಿ
ಕಣ್ಣು ತೆರೆಯಿಸಿ ನಕ್ಕು ನಲಿಸುತ ।
ಲೋಕವೆಲ್ಲವ ಎಬ್ಬಿಸಿ ||೪||

ಏಳು, ಬಾಳಿದು ಬಿಡದೆ ಸಾಗುವ
ಹರಿವ ನದಿಯೊಲು ಇಪ್ಪುದು
ಹಾಳುಮಾಡದೆ ಹೊನ್ನ ಚಣಗಳ
ತಂದೆ ಬಸವನ ಸ್ಮರಿಸುತ ||೫||

—ಮಾತಾಜಿ

ನಿಮ್ಮ ಅನಿಸಿಕೆ

ಕಲ್ಯಾಣ ಕಿರಣ ಪತ್ರಿಕೆ ಹೊರಬಂದು ಅನೇಕ ತಿಂಗಳಿಂದ ಓದುತ್ತಲಿರುವೆ. ಒಂದು ಹೂವು. ತನ್ನ ಮಡಿಲಿನೊಳಗೆ ಮಕರಂದವನ್ನು ತುಂಬಿಕೊಂಡು ದುಂಬಿಗೆ ಹೇಗೆ ನೀಡುತ್ತದೆಯೋ ಹಾಗೆ ಈ ಕಲ್ಯಾಣಕಿರಣ ಪತ್ರಿಕೆಯು ತನ್ನ ಮಡಿಲಿನೊಳಗೆ ಮಾತಾಜಿಯವರ ನುಡಿನೈವೇದ್ಯ, ದೃಷ್ಟಾಂತ ಕಥೆ, ವಚನ ನವನೀತ ಇತ್ಯಾದಿಗಳನ್ನು ತುಂಬಿಕೊಂಡು ಓದುಗರೆಂಬ ದುಂಬಿಗಳಿಗೆ ನೀಡಿ, ಅವರ ಮನವನ್ನು ತಣಿಸುತ್ತಿದೆ. ಪತ್ರಿಕೆಯ ಬರವನ್ನು ಚಾತಕ ಪಕ್ಷಿಯಂತೆ ಕಾಯುತ್ತೇವೆ. ಇದು ನಾಡನ್ನು ಬೆಳಗುವ ಕಿರಣವಾಗಲೆಂದು ಹಾರೈಸುತ್ತೇವೆ. **ಹೆಚ್. ಎಂ. ಗಿರಿಜಾ,** ಹರೋಸಾಗರ


ನವೆಂಬರ್ ಕಲ್ಯಾಣಕಿರಣ ಅಮೃತದ ಆರೋಗಣೆ. 'ನನಸಾದ ಕನಸು' ಬಸವ ಗಂಗೋತ್ರಿಯ ಆರಂಭ ಅನೇಕರ ಕನಸು ನನಸಾದ ಪ್ರಸಂಗ. ಬಹುಮುಖದ ಯೋಜನೆಗಳನ್ನು ಹಾಕಿಕೊಂಡು ಸಾಹಸದಿಂದ ಹೆಜ್ಜೆ ಇರಿಸುವ ತಮ್ಮ ಧೀಮಂತ ವ್ಯಕ್ತಿತ್ವಕ್ಕೆ ನಮೋನಮಃ. ಹಲವಾರು ವರುಷಗಳಲ್ಲೇ ಮಾಮರದಂತೆ ಅದು ಬೃಹತ್ತಾಗಿ ಬೆಳೆದು ಅಸಂಖ್ಯಾತರಿಗೆ ನೆಮ್ಮದಿ ನೀಡುವ ತಾಣವಾಗಲಿ ಎಂದು ದೇವನಲ್ಲಿ ನಮ್ಮ ಪ್ರಾರ್ಥನೆ. **ಗೊ. ರು. ಪರಮೇಶ್ವರಪ್ಪ,** ಗೊರೂರು.

ಪೂಜ್ಯ ಸ್ವಾಮೀಜಿಯವರ ವಚನ ನವನೀತ ಹೊತ್ತು ತಂದ 'ಅಜ್ಞಾನವೆಂಬ ತೊಟ್ಟಿಲೊಳಗೆ' ವಚನದ ವ್ಯಾಖ್ಯಾನ ಸಾಹಿತ್ಯದ ಒಂದು ಅದ್ಭುತ ವಸ್ತು. ಶರಣರ ವಚನಗಳ ವಿರಾಟ್ ರೂಪದರ್ಶನವಾಗುತ್ತಿದೆ ಒಂದೊಂದು ವ್ಯಾಖ್ಯಾನಗಳಲ್ಲೂ. ವಚನ ಭಾಂಡಾರದ, ಕೋಶಾಗಾರದ ರಹಸ್ಯದ್ವಾರದಂತಿದೆ ವಚನ ನವನೀತ. ಅನರ್ಘ್ಯ ವಚನ ರತ್ನಗಳ ಸಂದರ್ಶನವನ್ನಿದು ಮಾಡಿಸುತ್ತಿದೆ.

ರವಿಶಂಕರ, ಮುಳಗಾಂವ

"ಆನು ಒಲಿದಂತೆ ಹಾಡುವೆ" ವಿಭಾಗ ಓದುತ್ತ ಗೌರಿಶಂಕರದ ಮುಂದೆ ನಿಟ್ಟು ನೋಡುವ ಬಾಲಕರಂತೆ ನಾವು ಮುಗ್ಧ ಭಾವ ತಾಳುತ್ತೇವೆ. ತ್ರಿಲೋಕ ಸುಂದರಿಗೆ ಆಭರಣ ತೊಡಿಸಿದಾಗ ಆಭರಣದಿಂದ ಆಕೆಯ ಚೆಲುವು ವರ್ಧಿಸುವುದೋ ಅಥವಾ ಆಕೆಯಿಂದ ಆಭರಣದ ಕಾಂತಿ ವರ್ಧಿಸುವುದೋ ಎಂಬ ಸಂದಿಗ್ಧಕ್ಕೆ ಪ್ರೇಕ್ಷಕರು ಒಳಗಾಗುವರಷ್ಟೆ. ಅದೇ ರೀತಿ ತಮ್ಮ ಲೇಖನಿಯಿಂದ ವ್ಯಾಖ್ಯಾನ ಮೂಡಿಬಂದುದಕ್ಕೆ ವಚನಗಳು ಜೀವಂತಿಕೆ ತಾಳಿವೆಯೋ ಅಥವಾ ವಚನಗಳು ಅಷ್ಟು ಸತ್ವಪೂರ್ಣ, ಅರ್ಥಗರ್ಭಿತವಾಗಿವೆಯೆಂದು ತಾವು ಸಮರ್ಥವಾಗಿ ಬರೆಯಬಲ್ಲಿರೋ ಎನಿಸುತ್ತಿದೆ. ಓದುತ್ತಾ ಆನಂದದ ಸರಸಿಯಲ್ಲಿ ತೇಲಾಡಿದಂತೆ ಆಗುತ್ತದೆ.

ಮಹಾಂತೇಶ ಪಾಟೀಲ್, ಧಾರವಾಡ.



ದೂಷಣೆಗೆ ಪಾತ್ರರಾರು ?

ಬೆಂಗಳೂರಿನ ಒಂದು ಸಂಪ್ರದಾಯಸ್ಥರ ಕುಟುಂಬ: ಒಳ್ಳೆಯ ನೈತಿಕ ಮೌಲ್ಯಗಳ ಚೌಕಟ್ಟಿನಲ್ಲಿಯೇ ಮಕ್ಕಳನ್ನು ಬೆಳೆಸಿದ ಸಭ್ಯ ಗೃಹಸ್ಥರು. ಅವರ ಮಗಳೊಬ್ಬಳು ಅಂತರ್‌ಜಾತೀಯ ವಿವಾಹ ಮಾಡಿಕೊಂಡಳು. ಅದೂ ವೈಪರೀತ್ಯದ ವಿವಾಹವೆಂಬಂತೆ, ಹಿಂದೂಗಳಲ್ಲಿ ಒಂದು ಜಾತಿಯಲ್ಲಲ್ಲ, ಆಕೆ ಜನ್ಮತಃ ಹಿಂದು; ಮದುವೆಯಾದುದು ಮುಸ್ಲೀಮನೊಬ್ಬನನ್ನು. ಇದು ಸಮಾಜಕ್ಕೆ ಸಹಿಸಲಾರದ ದಳ್ಳುರಿ. ಅಸಹನೆಯ ಕಿಚ್ಚಿದ್ದು ದಹಿಸಿತು. ಯಾರನ್ನು? ವಿವಾಹವಾಗಿ ಹೋದವರು ಎತ್ತಲೋ ಹೋದರು. ಹೆತ್ತವರನ್ನು ನಿಂದಿಸಿ, ಸಮಾಜ ಕಟಕಿಯಾಡತೊಡಗಿತು. "ವಿವಾಹವಾದುದು ತಪ್ಪೋ ಒಪ್ಪೋ ? ಎಲ್ಲರೂ ಮನುಷ್ಯರಲ್ಲವೇ ?" ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುವ ಗೋಜಿಗೆ ಈಗ ನಾನು ಹೋಗುವುದಿಲ್ಲ. 'ಮಕ್ಕಳು ಮಾಡಿದ ಅಪರಾಧಕ್ಕೆ ಹೆತ್ತವರನ್ನು ಹೊಣೆ ಮಾಡುವುದು ಎಷ್ಟರಮಟ್ಟಿಗೆ ಸರಿ' ಎಂಬುದರ ಆಲೋಚನೆಗೆ ತೊಡಗುವೆ.

ಸಾಮಾನ್ಯವಾಗಿ ತಮ್ಮ ಮಕ್ಕಳು ಜಾತಿ ಬಿಟ್ಟು ಮದುವೆಯಾಗುವುದನ್ನು ಯಾವ ತಾಯಿತಂದೆಯರೂ ಸಹಿಸರು. ಅದರಲ್ಲೂ ಮುಸ್ಲಿಂ ಸಮಾಜದೊಳಗೆ ತಮ್ಮ ಕನ್ಯೆ ಪ್ರವೇಶಿಸುವುದನ್ನಂತೂ ಕನಸುಮನಸಿನಲ್ಲಿಯೂ ಅನುಮೋದಿಸಲಾರರು. ಹೆತ್ತವರ ಕೈಮೀರಿಯೇ ಇಂಥ ಪ್ರಸಂಗಗಳು ಸಂಭವಿಸಿರುತ್ತವೆ. ತಮ್ಮೊಂದು ಒಳಪಂಗಡವನ್ನು ದಾಟಿ ಮದುವೆಯಾಗಲಿಕ್ಕೇ ಕಳವಳಗೊಳ್ಳುವ ಸಂಪ್ರದಾಯಬದ್ಧ ಸಮಾಜದ ತಾಯಿ ತಂದೆಯರು ತೀರಾ ಭಿನ್ನವಾದ ಸಂಸ್ಕಾರಕ್ಕೆ ಮಕ್ಕಳನ್ನು ಪ್ರೋತ್ಸಾಹಿಸುವರೆ? ಹೀಗಿದ್ದಾಗ ಆಕಸ್ಮಿಕವಾಗಿ ಅಂಥ ಪ್ರಸಂಗಗಳು ನಡೆದಾಗ ಹೆತ್ತವರನ್ನು ದೂಷಿಸುವುದು ಸರಿಯೇ ?

"ನಿಮ್ಮ ಮಕ್ಕಳನ್ನು ಸರಿಯಾಗಿ ಬೆಳೆಸಲಿಲ್ಲ .." ಎಂದು ಒಂದು ಆರೋಪ. ಬೆಳೆಸುವ ವಿಧಾನದಲ್ಲಿ ತಪ್ಪಿದ್ದರೆ ಉಳಿದ ಮಕ್ಕಳೂ ಅದೇ ದಾರಿ ಹಿಡಿಯಬೇಕಿತ್ತು ತಾನೆ. ಉಳಿದವರೆಲ್ಲ ತಾಯಿ ತಂದೆಯರ ವಾಕ್‌ಪಥದಲ್ಲೇ ನಡೆದಾಗ ಒಬ್ಬ ವ್ಯಕ್ತಿ ಅದರಿಂದ ದೂರಸರಿದರೆ ಅದು ತೀರಾ ವೈಯಕ್ತಿಕ ಮತ್ತು ಆಕಸ್ಮಿಕವಷ್ಟೆ. "ಇಷ್ಟೆಲ್ಲ ಮುಂದು ವರಿಯಲಿಕ್ಕೆ ಅಸ್ಪದ ಕೊಟ್ಟುದು ನಿನ್ನ ತಪ್ಪು..." ಇನ್ನೊಬ್ಬರ ಚುಚ್ಚುಮಾತು ತಾಯಿಗೆ. ತಾಯಿಗೆ ಗೊತ್ತಾಗುವಷ್ಟು ದಡ್ಡತನದಿಂದ ಹುಡುಗಿಯರು ಪ್ರೇಮ ಪ್ರಕರಣ ನಡೆಸುವರೆ? "ನೀವು ಆ ಮಗಳನ್ನು ಗುಂಡು ಹಾಕಿ ಕೊಲ್ಲಬೇಕಿತ್ತು. ಬಿಟ್ಟು, ನಮ್ಮ ಸಮಾಜಕ್ಕೆ ಅಪಮಾನ ಮಾಡಿದಿರಿ." ಎಂದು ತಾಯಿತಂದೆಯರಿಗೆ ಇನ್ನೊಬ್ಬರಿಂದ ಉಗ್ರರೂಪಿ ಬುದ್ಧಿವಾದ. ಇದು ಎಷ್ಟು ಅವಿವೇಕ ರಮಣೀಯ! ಒಂದು ವೇಳೆ ಈ ತಾಯಿತಂದೆಯರು ದುಡುಕಿ ಅಂಥ ಕೆಲಸ ಮಾಡಿಬಿಟ್ಟಿದ್ದರೆ, ಮನೋದ್ವೇಗಕ್ಕೆ ಬಲಿಯಾದರೆ, ನಂತರ ಎದುರಿಸಬೇಕಾದ ಪ್ರಸಂಗಗಳಿಗೆ 'ಬುದ್ಧಿ ಹೇಳುವ' ಈ ಶುದ್ಧ. ಮಡಿವಂತರು ಹೊಣೆಗಾರರಾದಾರೆ? ಯಾರಾದರೇನು ಉದ್ವಿಗ್ನರಾಗಿ ಹೊಡೆದು ಬಡಿದು ಕೊಲೆಪಾತಕತನವನ್ನೆಸಗಿದರೆ ಕಾರಾಗೃಹ ಕಾಣುವವರು ಹೇಳಿಕೊಟ್ಟವರೆ? ಮಕ್ಕಳ ಅವಿವೇಕವನ್ನು ಕಾಲಾನಂತರದಲ್ಲಿ ಮರೆತು ತಾಯಿತಂದೆ ನೆಮ್ಮದಿಯಾಗಿದ್ದಾರು. ಉದ್ವೇಗದ ಕೈಗೆ ತಮ್ಮನ್ನು ತಾವು ಬಲಿಗೊಟ್ಟವರು ಜೀವನ ಪರ್ಯಂತರ ಕ್ಲೇಶದಲ್ಲಿ ಕೊಳಲಬೇಕಾದೀತಷ್ಟೆ. ಅಲ್ಲದೆ Marriages are done in heaven ಎಂಬಂತೆ ಪೂರ್ವ ಸಂಸ್ಕಾರದಿಂದ ಒಂದು ವ್ಯಕ್ತಿ ಯಾವುದೋ ದಾರಿಗೆ ಹೋದರೆ ಆ ಘಟನೆಗೆ ತಾಯಿ-ತಂದೆ ಹೇಗೆ ಹೊಣೆಯಾದಾರು?

"ಇಂಥ ಮಕ್ಕಳನ್ನು ಹೆತ್ತ ಕಾರಣ, ಇವರನ್ನು ಸಮಾಜ ಬಿಟ್ಟೇ ಹೊರಗೆ ಹಾಕಬೇಕು. ಅವರೊಡನೆ ವ್ಯವಹರಿಸಬಾರದು ಯಾವ ವಿಧದಲ್ಲೂ...." ಹೀಗೆ ಸಮಾಜದ ಕೆಲವು ಜನರು ಸಹ ಆಲೋಚಿಸಿದರಂತೆ. ಇದನ್ನೆಲ್ಲ ಮನನಿಸಿದಾಗ ಸಮಾಜ ಎಂದರೇನು? ಎಂದಾಗ, 'ಸಮ + ಅಜ, ಅಂದರೆ ಆಡಿನ ಹಿಂಡಿಗೆ ಸಮಾನವಾದ ಸಮುದಾಯ' ಎಂದು ಒಬ್ಬರು ಲೇಖನವೊಂದರಲ್ಲಿ ಉಲ್ಲೇಖಿಸಿದ ನೆನಪು ಬರುತ್ತದೆ. ಸಾಮಾನ್ಯವಾಗಿ ತಮ್ಮ ಸಮಾಜ, ಬಾಂಧವರು ಎಂದು ವ್ಯವಹರಿಸುವ ಜನ ಇನ್ನೂ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಕೆಲವು ನೈತಿಕ ಮೌಲ್ಯಗಳ ಅಡಿಪಾಯದ ಮೇಲೇ ಬಾಳುವವರು. ಇಂಥವರನ್ನಷ್ಟೇ ತನ್ನ 'ಸಮಾಜ' ಬಿಟ್ಟು ಹೊರಹಾಕುವ ಆಲೋಚನೆಯನ್ನು ಆ ಸಮಾಜ ಮಾಡುತ್ತದೆ ವಿನಾ ನೀತಿ ನಿಯಮ, ಹಂಗು ಹರಿಯಿಲ್ಲದೆ ಸಮಾಜದ ಕಟ್ಟನ್ನು ಎಂದೋ ಹರಿದುಕೊಂಡು ಸ್ವೇಚ್ಛಾಚಾರಕ್ಕೆ ಇಳಿದವರನ್ನು ನಿಂದಿಸದು, ಬುದ್ಧಿ ಹೇಳದು. ಬುದ್ಧಿ ಹೇಳಲು ಈ ಸಮಾಜದ ಕೈಗೆ ಆ ಜನ ಸಿಕ್ಕರೇ ತಾನೆ?

ಮಗಳೊಬ್ಬಳು ಅನ್ಯರನ್ನು ವಿವಾಹವಾಗಿ ಹೋದರೆ ತಾಯಿತಂದೆಯರನ್ನೇಕೆ ಸಮಾಜ ಬಹಿಷ್ಕರಿಸಬೇಕು. ತಾವು ಹೆತ್ತು-ಹೊತ್ತು, ಬೆಳೆಸಿ-ಪೋಷಿಸಿದ ಮಕ್ಕಳು ತಮ್ಮಿಂದ ಹೊರಗಾದ ಮಾನಸಿಕ ವೇದನೆಯೇ ಅವರನ್ನು ಸಾಕಷ್ಟು ತಿನ್ನುತ್ತಿರುವಾಗ ಸಮಾಜವೂ ಹಿಂಸಿಸಿದರೆ ಎಂಥಾ ಅಮಾನುಷವರ್ತನೆ ಇದಾದೀತು? 'ಬೆಂದ ಹುಣ್ಣು ಕಂಬಿಯಿಂದ ಕೀಸುವ, ಗಾಯಕ್ಕೆ ಉಪ್ಪೆರಚುವ' ಭಯಾನಕ ವರ್ತನೆಯಲ್ಲವೇ ಸಮಾಜದ್ದು? ನೊಂದವರನ್ನು ಸಾಂತ್ವನಿಸುವ, ದಿಗ್ಭ್ರಾಂತರಿಗೆ ದಿಗ್ದರ್ಶನನೀವ ಮಾನವೀಯ ಸೇವೆಗಾಗಿ ಸಮಾಜ, ಸಂಘ ಸಂಸ್ಥೆಗಳಿರಬೇಕೇ ವಿನಾ 'ತೋಳ ಕೂಳಿಗೆ ಬಿದ್ದಾಗ ಆಳಿಗೊಂದು ಕಲ್ಲೆಸೆಯುವ,' 'ಎಡವಿದವರ ಕಾಲು ಕತ್ತರಿಸುವ' ಕ್ರೂರ ನಿಂದೆ ಮಾಡಲಿಕ್ಕಲ್ಲ.

ಇನ್ನೊಂದು ಪ್ರಸಂಗ. ವಾತಾವರಣ ಪೂರ್ಣ ಬೇರೆ. ಒಬ್ಬ ಬಾಲಕನನ್ನು ಮಠಾಧಿಪತಿಯನ್ನಾಗಿ ಆರಿಸಲು ವಟುವನ್ನಾಗಿ ಮಾಡಿ ಸಹಸ್ರಾರು ರೂಪಾಯಿಗಳ ಖರ್ಚಿನಿಂದ ಇಲ್ಲಿಯ ಶಾಲೆಗಳಲ್ಲಿ, ನಂತರ ಕಾಶಿಯಲ್ಲಿ ಓದಿಸಿದ್ದಾಯಿತು. ಇಪ್ಪತ್ತು ವರುಷಗಳ ವಿದ್ಯಾಭ್ಯಾಸಕ್ಕೆ ಎಷ್ಟು ವೆಚ್ಚ ತಗುಲಿದ್ದೀತು ಮಠದಿಂದ! ಅಲ್ಲಿಂದ ಬಂದ ಮಹಾನುಭಾವ ನೇರವಾಗಿ ಮಠಾಧೀಶನಾಗಲು ಬರಲಿಲ್ಲ, ಅಕ್ಕನ ಮಗಳನ್ನು ಲಗ್ನವಾಗಲು. ಇಂಥವೇ ಪರಿಸರದ ಮತ್ತೊಬ್ಬ, ಗುರುಗಳಿಗೇ ತಿರುಗಿ ಬಿದ್ದ. ಆಗ ಗುರುಗಳು ಏನು ಮಾಡಬೇಕು? ಮಠದಿಂದ ವೆಚ್ಚಮಾಡಿದ್ದಾಗಿದೆ ಎಂದು ಅವನಿಚ್ಛೆಗೆ ವಿರುದ್ಧವಾಗಿ ಹಿಡಿತರಿಸಿ ಮಠಾಧೀಶನನ್ನು ಮಾಡಬೇಕೆ? ಅಥವಾ ಅವನ ದಾರಿಗೆ ಅವನನ್ನು ಬಿಟ್ಟರೆ ಭರವಸೆಯಿಂದ ಓದಿಸಿ, ವ್ಯಯಿಸಿ, ಸಮಾಜದ ಹಣವನ್ನು ವಿನಿಯೋಗಿಸಿ ಅವನನ್ನು ವೈಯಕ್ತಿಕ ಸುಖ ಜೀವನಕ್ಕೆ ಬಿಟ್ಟ ಪಾಪ ಇವರದಾದೀತೆ? ಇಂತಹ ಸಂದಿಗ್ಧ ಪರಿಸ್ಥಿತಿಗಳಲ್ಲಿ ಸಮಾಜ ಬಹಳ ಸಹಾನುಭೂತಿಯಿಂದ ಆ ಮಠಾಧೀಶರನ್ನು ಕಾಣಬೇಕೇ ವಿನಾ, ಅವರ ಆಯ್ಕೆ ತಪ್ಪಾದ್ದಕ್ಕೆ ನೊಂದಿರುವ, ಅವರ ಭರವಸೆ ವ್ಯರ್ಥವಾದದಕ್ಕೆ ಹತಾಶರಾಗಿರುವವರನ್ನು ಕುಕ್ಕಿ ತಿನ್ನಬಾರದು.

ತಾನೇ ಸಾಕಿ ಬೆಳೆಸಿದ, ವ್ಯಯಿಸಿ ಓದಿಸಿದವನಾದರೂ ತಿರುಗಿಬಿದ್ದವನನ್ನು ಆರಿಸಬಾರದು. ಏಕೆಂದರೆ, ಅನ್ನ ಪವಿತ್ರ, ಜ್ಞಾನ ಇನ್ನೂ ಪವಿತ್ರ, ಸ್ಥಾನ-ಮಾನ ಇನ್ನೂ ದೊಡ್ಡದು. ಈ ಮೂರನ್ನೂ ಕೊಟ್ಟ ಗುರುವಿಗೇ ತಿರುಗಿಬಿದ್ದ ದ್ರೋಹಿ ಸಮಾಜಕ್ಕೆ ದ್ರೋಹ ಮಾಡನೆಂಬುದಕ್ಕೆ ಏನು ಸಾಕ್ಷಿ. ಅವನು ಪಾಪ ಭೀರುವೆಂದೂ ಆಗಿರನು. ಇನ್ನು ಕೆಲವರು, 'ಇಂಥ ಕೆಲವು ಕೆಟ್ಟ ಹುಳುಗಳು ಹೊರಗೆ ಹೋದರೆ ತೊಂದರೆ ಕೊಟ್ಟಾವು, ಅಪಪ್ರಚಾರ ಮಾಡಿಯಾವು' ಎಂದು ಸಹಿಸಿಕೊಂಡು, ತಮ್ಮಲ್ಲೇ ಇರಿಸಿಕೊಂಡು ತಾಳ್ಮೆ ವಹಿಸುವರು. ಈ ಅಧೈರ್ಯ ಅವರನ್ನು ಖಂಡಿತಾ ತಿಂದು

ಹಾಕುವುದು. ಏಕೆಂದರೆ ಧೂರ್ತರಿಗೆ, ದ್ರೋಹಿಗಳಿಗೆ, ಕುಹಕಿಗಳಿಗೆ ಹೆದರಿಕೊಂಡು ಮಠದಲ್ಲಿ ಮೇಯಿಸಿದರೆ ಹೊರಗೆ ನಿಂತು ಮಾಡಬಹುದಾದ ಕೆಡಕುಗಳಿಗಿಂತ ಒಳಗಿದ್ದು ಹೆಚ್ಚಿನ ಕೆಡುಕು ಮಾಡುವರವರು. ಆಗ ಸಜ್ಜನರು, ಸಹೃದಯರೂ ಆದ ಸಾತ್ವಿಕ ಭಕ್ತರು ಈ ಜೂಲು ನಾಯಿಗಳಿಗೆದರಿ ಮಠಕ್ಕೆ ಬರಲಾರರು. "ಒತ್ತಿ ಹೊಸೆದ ಕಿಚ್ಚಿಂದು ಅಂಗೈಯಲ್ಲಿ ಬೆಂಕಿಯನ್ನು ಇರಿಸಿಕೊಂಡರೆ" ಎಷ್ಟು ಅಪಾಯವೋ, ಮನೆಯಲ್ಲೇ ಹುಟ್ಟಿದ ಇಲಿಯೆಂದು ಸುಂಡಿಲಿಯನ್ನು ಸಹಿಸಿಕೊಳ್ಳುವುದು ಎಷ್ಟು ಅಪಾಯವೋ, ಅಷ್ಟೇ ಅಪಾಯಕರ ತಾನೇ ಬೆಳೆಸಿದವನೆಂದು ದುರ್ಜನರಾದವರನ್ನು ಸಂರಕ್ಷಿಸುವುದು. ಅದರಲ್ಲಿಯೂ ಒಂದು ಮನೆ, ಬಂಧು-ಬಳಗನಾದರೆ ಅಷ್ಟೇ ಹಾಳಾದೀತು ದುರ್ಜನರಿಂದ. ಮಠ-ಮಾನ್ಯ, ಸಂಘ-ಸಂಸ್ಥೆಗಳಂತಹ ಸಾರ್ವಜನಿಕ ಸಮುದಾಯಗಳಲ್ಲಿ ದುಷ್ಟರು ಒಳಹೊಕ್ಕರಂತೂ ವ್ಯಾಪಕ ಹಾನಿ ಮಾಡುವರು. "ಕಾಲೊಳಗಣ ಆಣಿ, ಕಣ್ಣೊಳಗಣ ಕಸ" ಎಷ್ಟು ಬೇಗ ತೆಗೆದರಷ್ಟು ಒಳ್ಳಿತೆಂಬಂತೆ ದ್ರೋಹಿಗಳನ್ನು ದೂರವಿರಿಸುವುದು ಲೇಸು. ಅವರು ಒದರಿಕೊಳ್ಳುತ್ತ ಹೋಗುವುದು ತೀರಾ ಸಹಜವೇ! ಓರ್ವ ಹುಡುಗಿ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲವೆಂದು ವರನೊಬ್ಬ ನಿರಾಕರಿಸಿದರೆ ಆ ಕನ್ಯೆ ಸ್ವಾಭಾವಿಕವಾಗಿ ಹೇಳುವುದು 'ಅವನು ನನಗೆ ಒಪ್ಪಿಗೆಯಾಗಲಿಲ್ಲ' ಎಂದೇ. ಇದು ಮಾನವ ಸಹಜ ಸ್ವಭಾವ, ಒಬ್ಬ ಸಾತ್ವಿಕನಾದ ಗುರು ಸಾಧಕನಲ್ಲಿ ತಪ್ಪುಗಳನ್ನು ಕಂಡು ಬುದ್ಧಿ ಹೇಳಿ, ಕೇಳದಾಗ ಹೊರಗೆ ಹಾಕಿದರೆ, ಆತ ತನ್ನ ತಪ್ಪನ್ನು ತಿದ್ದಿಕೊಂಡರೆ ಮುಂದೆ ನಿಜಕ್ಕೂ ಸಂತನಾಗುವನು. ಹಾಗೆ ಮಾಡದೆ ಧೂರ್ತನಾಗಿ ಗುರುವನ್ನೇ ನಿಂದಿಸುತ್ತ ಹೊರಟರೆ ನಾಲ್ಕು ದಿನ ಕತ್ತರಿಸಿ ಹಾಕಿದ ಹಾವಿನ ಹೆಡೆಯಂತೆ ಜಿಗಿದಾಡಿ, ನಂತರ ತಣ್ಣಗಾಗುವನು. ಇಂಥ ಪ್ರಸಂಗಗಳಲ್ಲಿ ಗುರುವಿಗೆ ಮಾತ್ರ ನಿರ್ಮೋಹ, ಸಮಷ್ಟಿ ಪ್ರಜ್ಞೆ, ಧೈರ್ಯ ಇರಬೇಕು. 'ನಾನು ಪೋಷಿಸಿದವನಾದರೇನು, ದುಷ್ಟನನ್ನು ದೂರಮಾಡಬೇಕು' ಎಂದು ಮೋಹರಹಿತನಾಗಿ ವರ್ತಿಸಬೇಕು. "ಇಂಥವನನ್ನು ಅಧಿಕಾರಕ್ಕೆ ತಂದು ಸಮಾಜಕ್ಕೆ ಕೆಡುಕು ಮಾಡಬಾರದು' ಎಂಬ ಸಮಾಜ ಪ್ರಜ್ಞೆ ಇರಬೇಕು. 'ಇವನು ಕೆಡುಕು ಮಾಡಿದರೇನು, ನಿಂದಿಸಿದರೇನು, ಮುಂದೆ ಆಗಬಹುದಾದ ದೊಡ್ಡ ಅನಾಹುತ ತಪ್ಪಿಸಲು ಸಣ್ಣ ಕಷ್ಟ ಈಗ ಒದಗಿದರೂ ಚಿಂತೆಯಿಲ್ಲ' ಎಂಬ ಧೈರ್ಯವಿರಬೇಕು.

ಇಂಥದೊಂದು ಪ್ರಸಂಗದಲ್ಲಿ ಧೈರ್ಯದಿಂದ ಧೂರ್ತ ಜಾತಿವಾದಿ ಮರಿಯನ್ನು ನಿರಾಕರಿಸಿ ಮಠದ ಭಕ್ತರ ಒಂದು ಗುಂಪಿನ ವಿರೋಧ ಕಟ್ಟಿಕೊಂಡ ನಿಸ್ಪೃಹ ಸ್ವಾಮಿಗಳವರಿಗೆ ನಾವು ಅಭಿನಂದನೆಗೈದೆವು: "ನಿಮ್ಮ ನಿರ್ಧಾರ ಸ್ತುತ್ಯ. ಇಟ್ಟ ಹೆಜ್ಜೆ ದಿಟ್ಟ. ಕೆಲವೊಮ್ಮೆ ನಾವು ಪ್ರಯತ್ನಿಸಿ ಬೆಳೆಸಿದ ಮರಿಗಳು ಬಾವುಗಗಳಾಗಿ ಗುರ್ರೆನ್ನಬಹುದು. ದೇವನೇ ಸಂಕಲ್ಪಿಸಿ ಕಳಿಸಿದ ಮುಮುಕ್ಷುಗಳೆಂಬ ಧೇನುಗಳು ಲೋಕ

ಕಮ್ಮಟದಲ್ಲೇ ತಯಾರಾಗಿ ಬಂದು ತ್ಯಾಗ ಮಾಡಿ ಮಠವನ್ನು ಅಭಿವೃದ್ಧಿಗೊಳಿಸಬಹುದು. ದೇವನ ಪಾಲಿಗೆ ಬಿಡಿರಿ". ನಮ್ಮ ಹಾರೈಕೆ ನಿಜವೇ ಆಯಿತು. ಅಂಥ ಸೂಕ್ತ ವ್ಯಕ್ತಿಯೇ ಬಂದು ಮಠದ ನೊಗವನ್ನು ಹೊತ್ತ. ಆದರೆ, ಒಂದು ನಿರ್ದಿಷ್ಟ ನಿರ್ಧಾರ ತೆಗೆದುಕೊಂಡು ಸಮಾಜ-ಮಠಗಳ ಕಲ್ಯಾಣಕ್ಕಾಗಿ ವೈಯಕ್ತಿಕ ಹಿತ ಮರೆಯುವ, ದಿಟ್ಟರನ್ನು ಸಾಂತ್ವನಗೊಳಿಸುವ, ಪ್ರೋತ್ಸಾಹಿಸುವ ವಿವೇಚನಾ ಪ್ರಜ್ಞೆ ಸಮಾಜಕ್ಕೆ ಇರಬೇಕು, ಬರಬೇಕು. ಹೀಗಲ್ಲದೆ, ಮಗಳು ಅಂತರ್ಜಾತೀಯ ವಿವಾಹ ಮಾಡಿಕೊಂಡರೆ ತಾಯಿತಂದೆಯರನ್ನು ದೂಷಿಸಿದರೆ, ಸಾಕಿದ ವಟುವೊಬ್ಬ ಓಡಿ ಹೋಗಿ ಮದುವೆ ಮಾಡಿಕೊಂಡರೆ ಗುರುವನ್ನೇ ದೂಷಿಸುವ ವಿವೇಕ ರಹಿತ ಪ್ರಜ್ಞೆ ಬೆಳೆಸಿಕೊಂಡರೆ ಅದು ಸಮಾಜವಲ್ಲ, 'ಸಮ ಅಜ'.

—ಜಗದ್ಗುರು ಮಾತೆ ಮಹಾದೇವಿ


ದಿಗಂಬರದ ದಿವ್ಯಾಂಬರೆ

ಓ ಅಕ್ಕ ಅಕ್ಕಾ
ಮಹಾದೇವಿ ಅಕ್ಕಾ
ನೀನೇಕೆ ನಡೆದೆ
ಅರಮನೆಯ ಬಿಟ್ಟು?
ಮನಸ್ಸಾಗಲಿಲ್ಲವೆ ನಿಂಗೆ
ಮಹಾರಾಣಿ ಪಟ್ಟ?
ಕೌಶಿಕನ ಕೈ ಕೊಸರಿ
ವಸ್ತ್ರವನು ಬಿಸುಟಿ
ನೀನೇಕೆ ನಡೆದೆ?
ಒಬ್ಬಳೇ ಮಗಳು
ಮೇಲಾಗಿ ಚಿಕ್ಕವಳು
ಕೇಳಿಸಲಿಲ್ಲವೆ
ಹೆತ್ತ ಕರುಳಿನ ಕರೆಯು?
ಆವದು ನಿನ್ನ ಬಾಳಿನ ಗುರಿಯು?
ಬಸವ ಹೃದಯವು ಬಾ ಎಂದಿತೆ?
ಕಲ್ಯಾಣ ನಗರವು
ಕೈಬೀಸಿ ಕರೆಯಿತೆ?

ಸಿರಿಭೋಗವ ತುಳಿದು
ಸಾವು-ಕೆಡುವಂತಹ
ಗಂಡರೊಲ್ಲೆಂದು ವೈರಾಗ್ಯ ತೊಟ್ಟೆ.
ಮಲ್ಲಿಕಾರ್ಜುನನೇ
ಗಂಡನಾಗಬೇಕೆಂದು ಹಟವ ಸಾಧಿಸಿದೆ.
ಅನುಭವ ಮಂಟಪದಲಿ
ಪ್ರಭುವಿನ ಪ್ರಶ್ನೆಗೆ
ದಿಟ್ಟ ಉತ್ತರವಿತ್ತು
ವಿರಾಗಿಣಿ ಎನಿಸಿದೆ.
ನೀ ನಡೆದ ದಾರಿಯು
ಮಾನವ ಕುಲಕೋಟಿಗೆ
ಜ್ಞಾನ ದೀವಿಗೆಯು.
ನೀ ನುಡಿದ ವಾಣಿಯು
ಮನ ನಿರ್ಮಲಗೊಳಿಸುವ
ಶಾರದೆಯು ವೀಣೆಯು.
ಮಹಿಳಾ ಲೋಕದ
ಪರಮ ವೈರಾಗಿಣಿಯೆ

ಅಶೋಕ ಬಸ್ತವಾಡೆ ಬಿ. ಎ. ಅಂತಿಮ.

ದೂಷಣೆಗೆ ಪಾತ್ರರಾರು?



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ನೋಡಿರೆ ನೋಡಿರೆ ಒಂದು ವಿಚಿತ್ರವ,
ಶ್ರೀ ಗುರುವೆಂಬ ಗಂಡನು ಶಿಷ್ಯನೆಂಬ ಹೆಂಡತಿಯ
ಹಸ್ತ ಮಸ್ತಕ ಸಂಯೋಗವೆಂಬ ಕೂಟವ ಕೂಡಲು, ಜಿಹ್ವೆಯೆಂಬ ಮೇಢ್ರದಲ್ಲಿ
ಷಡಕ್ಷರ ಮಂತ್ರವೆಂಬ ವೀರ್ಯವು ಚಲನೆಯಾಗಿ
ಆ ಶಿಷ್ಯನ ಕರ್ಣವೆಂಬ ಗರ್ಭವ ಪ್ರವೇಶಿಸಲು
ಮನ ಬಸುರಾಗಿ, ಕಂಗಳೆಂಬ ಯೋನಿಯಲ್ಲಿ
ಲಿಂಗವೆಂಬ ಮಗನ ಹಡೆದು
ಅಂಗೈಯೆಂಬ ತೊಟ್ಟಿಲಲ್ಲಿಕ್ಕಿ ಮಂಗಳಸೂತ್ರವೆಂಬ
ಜೋಗುಳವ ಹಾಡಿ, ಅಖಂಡೇಶ್ವರನೆಂಬ ಹೆಸರಿಟ್ಟರು ನೋಡಾ.
ಇದು ಕಾರಣ ನೀವೀಗ ಎನಗೆ ಮಗನಾದಿರಿ
ನಾ ನಿಮಗೆ ತಾಯಾದೆನಯ್ಯ ಅಖಂಡೇಶ್ವರಾ.

ದೇವ- ಭಕ್ತರ ಸಂಬಂಧ ಪತಿ- ಪತ್ನಿ, ತಾಯಿ-ಮಗು, ಸ್ನೇಹಿತ ಮುಂತಾಗಿ ಬಹುವಿಧ ನಾಳೆಯಲ್ಲಿ ಹರಿಯುವುದು. ಅನುಭಾವ ಸಾಹಿತ್ಯ (Mystic literature) ಕಾಣುವ ಬಗೆಗಣ್ಣು ವರ್ಣವೈವಿಧ್ಯ. ಈ ವಚನದಲ್ಲಿ ಅನುಭಾವಿ ಹೊಂದುವ ಆತ್ಯಂತಿಕ ದೈವೀ ಆನಂದವನ್ನು ಅತ್ಯಂತ ಲೌಕಿಕ ಉದಾಹರಣೆಯ ಮೂಲಕ ಚಿತ್ರಿಸ ಹೊರಟಿರುವುದು ಇಲ್ಲಿ ತೀರಾ ವಿಲಕ್ಷಣ ಎನ್ನಿಸುವುದು.

ಪರಿಪಕ್ವ ಹೃದಯದಿಂದ ದೈವೀಕರುಣೆಯನ್ನು ಸ್ವೀಕರಿಸಲು ಸಿದ್ಧನಾಗಿರುವ ಮುಮುಕ್ಷುವಾದ ಶಿಷ್ಯ. ಆ ಶಿಷ್ಯನ ಪರಿಪಕ್ವತೆಯನ್ನು ಗಮನಿಸಿ ತನ್ನ ತಪಸ್ ಶಕ್ತಿಯನ್ನು ಧಾರೆಯೆರೆಯಲು ಸಿದ್ಧನಾಗಿರುವ ಸದ್ಗುರು. ಎಂತಹ ಅರ್ಥಗರ್ಭಿತ ಸನ್ನಿವೇಶ: ಜ್ಞಾನ-ಭಕ್ತಿ-ವೈರಾಗ್ಯಗಳಿಂದ ತೊಳಗಿ ಬೆಳಗುವ ಸದ್ಗುರು ಶಿಷ್ಯನ ಮಸ್ತಕದ ಮೇಲೆ ಹಸ್ತವನ್ನಿಡುತ್ತಲೇ ಮಿಂಚಿನ ಸಂಚಾರ ; ನಂತರ ಓಂಕಾರದ ಝೇಂಕಾರ. ಸದ್ಗುರುವಿನ ತಪಸ್‌ಶಕ್ತಿ ಹಸ್ತಮುಖೇನ ಹರಿವಾಗ, ನಾಲಿಗೆ ತುದಿಯಲಾಡುವ ಷಡಕ್ಷರ ಮಂತ್ರದ ಪ್ರವೇಶ ಶಿಷ್ಯನ ಕರ್ಣಮುಖಾಂತರ. ಸ್ವಾತಿ ಹನಿಯನ್ನು ಇಂಬಿಟ್ಟುಕೊಂಡ ಕಪ್ಪೆ ಚಿಪ್ಪಿನಂತೆ, ಬೀಜವನ್ನು ಅಡಗಿಸಿಕೊಂಡು ಮುಚ್ಚಲ್ಪಟ್ಟ ಭೂಮಿಯಂತೆ ಶಿಷ್ಯನ ಅಂತರಂಗ. ಮನಸ್ಸು ಗಂಭೀರಗೊಂಡು "ಬೆಸಲಾಗುತ್ತದೆ." ಅಲ್ಲಿ ಶಿವಜ್ಞಾನದ ಮೊಳಕೆ ಬೆಳೆಯತೊಡಗುತ್ತದೆ. ಮನಸ್ಸಿನ ಪರಿಪಕ್ವತೆ ಕಂಗಳ ಮೂಲಕ ಗಂಭೀರವಾದ ಕಾಂತಿಯಾಗಿ ಹೊರಸೂಸುತ್ತದೆ, ಹರಿದು ನಿಲ್ಲುತ್ತದೆ. ಎಲ್ಲಿ ? ಗುರುವು ಚಿತ್ಕಳೆಯ ತುಂಬಿ ನೀಡಿರುವ ಇಷ್ಟಲಿಂಗದ ಮೇಲೆ. ಗುರುವಿನ ಶಕ್ತಿ, ಶಿಷ್ಯನ ಭಕ್ತಿ-ಈ ಎರಡರ ಪ್ರತೀಕವಾದ ಇಷ್ಟಲಿಂಗ ಶಿಶು ಅಂಗೈ ತೊಟ್ಟಿಲಲ್ಲಿ ವಿನೂತನ ಕಾಂತಿಯಿಂದ ಪ್ರಜ್ವಲಿಸುತ್ತಿರುವಾಗ, ಆ ಶಿಶುವ ನೋಡಲು 'ತಾಯಿ' (ಶಿಷ್ಯ)ಗೆ ಆನಂದವೆಷ್ಟು! ಆಡಿ ಆಡಿ ಕಾಲು ದಣಿಯವು, ನೋಡಿ ನೋಡಿ ಕಣ್ಣು ದಣಿಯವು, ಹಾಡಿ ಹಾಡಿ ನಾಲಿಗೆ ದಣಿಯದು" ಎಂಬ ಉತ್ಕಟ ಭಾವಾವೇಶ. ಆಗ ನಾಲಿಗೆ ಹಾಡುತ್ತದೆ, ಹೃದಯ ಶ್ರುತಿ ಹಿಡಿಯುತ್ತದೆ. ನಿರಂತರವಾಗಿ ಸಾಗುತ್ತದೆ "ಲಿಂಗ ಜೋಗುಳ". ತಾಯಿ (ಸಾಧಕ) ಹಾಡುವ ಜೋಗುಳ ಕೇಳಿ ಮಗುವಿ (ಲಿಂಗಯ್ಯ)ನಲ್ಲಿ ತನ್ಮಯತೆ; ಮಗುವಿನ ಚೆಲುವ ಕಂಡು ತಾಯಿಗೆ ನಿಸ್ಸೀಮ ಪರವಶತೆ. ಇವರಿಬ್ಬರಲ್ಲಿ ಯಾರು ಹೆಚ್ಚೀಗ? ತಾಯಿಗೆ ಅಮೃತ ಸಮಾನ ಆನಂದ ನೀಡಿದ ಮಗನೋ! ಅಥವಾ ಮಗನನ್ನಾಡಿಸಬಲ್ಲ ತಾಯಿಯೋ! ವಿಲಕ್ಷಣ ಅನುಭವ, ವಿಚಿತ್ರ ಪ್ರಶ್ನೆ!

ಲಿಂಗಾಂಗಿ ಹೊಂದುವ ದೀಕ್ಷೆಯ ಸೊಬಗಿದು; ದೀಕ್ಷಾಸಂಸ್ಕಾರ ಬಸವ ಧರ್ಮ ನೀಡುವ ಅನುಭಾವದ ರಸಧಾರೆ. ದೀಕ್ಷೆಯಲ್ಲಿ ಮೂರು ಅಂಶ, ವೇಧಾ, ಮಂತ್ರ, ಕ್ರಿಯೆ. ಶಿಷ್ಯನ ಮಸ್ತಕದ ಮೇಲೆ ಹಸ್ತವನ್ನಿರಿಸಿ ಗುರುವು ದೈವೀಶಕ್ತಿಯನ್ನು ವೇಧಿಸುವ (ಅಳವಡಿಸುವ) ವೇಧಾದೀಕ್ಷೆ. ಮಂತ್ರವನ್ನು ಕಿವಿಯಲ್ಲಿ ಉಸುರಿ ಭವದ ಶತ್ರುವ ಓಡಿಸುವ ಮಂತ್ರದೀಕ್ಷೆ. ಅಂಗಕ್ಕೆ ಇಷ್ಟಲಿಂಗ ನೀಡಿ ಉದ್ಧರಿಸುವ ಕ್ರಿಯಾದೀಕ್ಷೆ. ವರ್ಷಾಕಾಲದ ದಿನ, ಮೋಡಗಳು ಒಂದಕ್ಕೊಂದು, ತಾಕಲಾಡಿದಾಗ ಮಿಂಚಿನ ಹೊಳಪು ಇದು ಸೂಕ್ಷ್ಮಾತಿಸೂಕ್ಷ್ಮ, ತ್ವರಿತ ಮಿಂಚಿನ ನಂತರ ಗುಡುಗಿನ ಶಬ್ದ. ಬಳಿಕ ಧಾರಾಕಾರದ ವರ್ಷಾಧಾರೆ. ಸದ್ಗುರು ವೇಧಾದೀಕ್ಷೆಯ ಮೂಲಕ ಸಹಸ್ರಾರದಲ್ಲಿರುವ ಶಕ್ತಿಯನ್ನು ಕೆದಕುವನು. ಆಗ ಮಿಂಚಿನ ಸಂಚಾರದ ಸೂಕ್ಷ್ಮಾನುಭವ. ಬಳಿಕ ಮಂತ್ರದ

ಗುಡುಗು ಶಿಷ್ಯನಲ್ಲಿ ಮೊರೆಯುವುದು. ಮಿಂಚು-ಗುಡುಗುಗಳೆರಡೂ ಕೈಗೆ ಸಿಕ್ಕದ ವಸ್ತುಗಳಾದರೆ ನೀರು ಸಂಗ್ರಹಗೊಳ್ಳುವ ಸ್ಪರ್ಶಿಸಬಹುದಾದ ವಸ್ತು. ಹಾಗೆ ಶಕ್ತಿಧಾರೆ, ಮಂತ್ರದ ಶಬ್ದ ಅನುಭವಕ್ಕೊಳಗಾದರೂ ಸ್ಪರ್ಶಕ್ಕತೀತ. ಶಾಶ್ವತವಾಗಿ ನೆಲೆಸಬಲ್ಲ ವಸ್ತು ಇಷ್ಟಲಿಂಗ.

ತೊಟ್ಟಿಲ ಶಿಶುವಿಂಗೆ ಜೋಗುಳವಲ್ಲದೆ
ಹೊಟ್ಟೆಯ ಶಿಶುವಿಂಗೆ ಜೋಗುಳವುಂಟೆ?
ಬಯಲಾಸೆ ಹಾಸ್ಯವಾಯಿತ್ತು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ.

ಹೊಟ್ಟೆಯ ಶಿಶು ಜೋಗುಳ ಹಾಡಿಸಿಕೊಳ್ಳಲಾರದೆಂತೋ ಅಂತೇ ಇರುವುದು ಆತ್ಮಲಿಂಗ. ಅದನ್ನು ಅರ್ಚಿಸಲು, ಪ್ರಾರ್ಥಿಸಲು ಬಾರದು. ಆ ಆತ್ಮಲಿಂಗ ಇಷ್ಟಲಿಂಗವಾಗಿ ಚುಳುಕಾಗಿ ಸಾಕಾರಗೊಂಡು ಬಂದಾಗಲೇ ಆರಾಧನೆಯು ಅಳವಿಗೆ ಬರುವುದು. ಹೀಗೆ ಬಯಲಿಗೆ ಒಂದು ರೂಪವಿತ್ತು, ಅದರಲ್ಲಿ ಚಿತ್ಕಳೆ ತುಂಬಿ ನೀಡುವವನು ಸದ್ಗುರುವು, ಸ್ವೀಕರಿಸಿ ತನ್ಮೂಲಕ ಪರಮಾನಂದ ಸುಧೆಯನ್ನು ಪಡೆಯುವವನು ಮುಮುಕ್ಷು.

ಸುಡಿ ಮುತ್ತುಗಳು

ನಾನೆಂದಾದರೂ ಶಿಕ್ಷಕಿಯಾಗುವುದಾದರೆ ಅದು ಕಲಿಯಲೇ ವಿನಾ ಕಲಿಸಲು ಅಲ್ಲ.

—ನೇಡಂ ಡಿಲೂಜ

ವಿಶ್ವವೆಲ್ಲಾ ಭಗವಂತನ ಪ್ರತೀಕ, ಹಿಂದಿರುವ ಸತ್ಯವೇ ಭಗವಂತ.

—ಸ್ವಾಮಿ ವಿವೇಕಾನಂದ

ಗಣಿಯೊಳಗೆ ಹೊಕ್ಕು ಅಗೆಯದೆ, ಶಕ್ತಿಯಿಂದ ಪರೀಕ್ಷೆಗೊಳಪಡಿಸದೆ, ತೂಗಿ ಬೆಲೆ ಕಟ್ಟದೆ, ಕೊರೆದು ನೂಲಿ ಮಾಡದೆ ಇರುವ ಅಪರೂಪವಾದ ಗುಣವೆಂಬ ಮಣಿಯಿಂದ ಅಲಂಕೃತನಾದವನೇ ನಿಜವಾದ ಮಹಾತ್ಮ.

—ನೇಮಿಚಂದ್ರ

ಸಮಸ್ಯೆ! ಸಮಾಧಾನ!

—ಅಶೋಕ ಬಸ್ತವಾಡೆ, ಸಂಕೇಶ್ವರ.

★ ಜಗಜ್ಯೋತಿ ಬಸವಣ್ಣನವರು ಒಂದು ವೇಳೆ ಈ ಹೊತ್ತು ಬದುಕಿದ್ದರೆ ಹಾವನೂರು ವರದಿಯ ಬಗ್ಗೆ ಏನು ಹೇಳುತ್ತಿದ್ದರು ?

* ೧. 'ಹುಟ್ಟುತ್ತ ಪಡೆದಿದ್ದ ಬ್ರಾಹ್ಮಣಿಕೆಯ ಸೌಲಭ್ಯಬಿಟ್ಟು, ಹರಿದು ಹಂಚಿ ಹೋಗಿರುವ ಸಮಾಜವನ್ನೊಂದುಗೂಡಿಸಲೆಂದು ನಾನೆಷ್ಟು ವಿಶಾಲ ಭಾವನೆಯಿಂದ ಹೋರಾಡಿದ ನಾಡಿನಲ್ಲಿ ಸಮಾಜವನ್ನು ಛಿದ್ರಗೊಳಿಸುವ ಜಾತಿವಾದದ ವಿಷಗಳ್ಳಿ ನೆಟ್ಟೆಯಲ್ಲ ಪುಣ್ಯಾತ್ಮ' ಎಂದು ನುಮ್ಮಲ ಮರುಗುತ್ತಿದ್ದರು ೨. 'ನಾವು ಕೀಳು, ಪಾಪಯೋನಿಜರು' ಎಂದು ನಂಬಿದ್ದ, ಶೋಷಿಸಲ್ಪಟ್ಟ ಜನಾಂಗವನ್ನು ಮೇಲೆತ್ತಿ 'ನಾವೂ ಇತರರಂತೆ ಸಮಾನರು' ಎಂಬ ಆತ್ಮವಿಶ್ವಾಸ ತಾಳುವಂತೆ ಮಾಡಲು ಎಷ್ಟು ಶ್ರಮಿಸಿದ್ದೆ ನಾನು. ಈಗ 'ನಾವು ಕೀಳು, ಹಿಂದುಳಿದವರು' ಎಂದು ಬಿರುದು ಹೊರಲು ಹೋರಾಡುವಂತೆ ಜನಗಳನ್ನು ಪ್ರೋತ್ಸಾಹಿಸುತ್ತಿರುವಿರಲ್ಲಾ ಹಾವನೂರರೇ ಎಂದು ವಿಷಾದಿಸುತ್ತಿದ್ದರು.

೩. "ಓಡಲಾರದೇ ಹಿಂದುಳಿದ ದುರ್ಬಲನಿಗೆ ಪ್ರೋತ್ಸಾಹ, ತಾಕತ್ತು ನೀಡಿ ಮುಂದೆ ಓಡುವವನ ಬೆನ್ನಟ್ಟುವ ಆತ್ಮವಿದ್ಯೆ ನಾ ಕಲಿಸಿದರೆ, ಮುಂದೆ ಓಡುವವನನ್ನು ಜಗ್ಗಿ ನಿಲ್ಲಿಸಿ ಹಿಂದೆ ನಿಂತವನ ಜೊತೆಗೆ ನಿಲ್ಲಿಸುವ ಅವಿದ್ಯೆಯನ್ನು ಪ್ರೋತ್ಸಾಹಿಸುತ್ತಿರುವಿರಿ" ಎಂದು ಹಾವನೂರರನ್ನು ಕೊಂಡಾಡದಿರರು.

—ಎಂ. ಗುರುಮಲ್ಲಪ್ಪ, ಉಮ್ಮತ್ತೂರು

★ ವೀರಶೈವರಲ್ಲಿ ಒಂದು ಸಂಪ್ರದಾಯವಿದೆ. ಗುರು-ಜಂಗಮರು ತಮ್ಮದೇ ಪಾದೋದಕವನ್ನು ತಮ್ಮ ಇಷ್ಟಲಿಂಗದ ಮೇಲೆ ಎರೆದು ಆ ಲಿಂಗತೀರ್ಥವನ್ನು ತಾವು ಸ್ವೀಕರಿಸುತ್ತಾರೆ. ಮತ್ತು ಅದನ್ನು ಭಕ್ತರೂ ಸ್ವೀಕರಿಸುತ್ತಾರೆ. ಪರಮಾತ್ಮನ ಕುರುಹಾದ ಇಷ್ಟಲಿಂಗದ ಮೇಲೆ, ಅವರ ಗುರು ಅನುಗ್ರಹಿಸಿ ಕೊಟ್ಟ ವಸ್ತುವಿನ ಮೇಲೆ ತಮ್ಮ ಪಾದೋದಕ ಎರೆದುಕೊಳ್ಳುವ ಆಚರಣೆ ಧರ್ಮಸಮ್ಮತವೆ ?

* ೧. ಈ ಪ್ರಶ್ನೆ ಅನೇಕ ಬಾರಿ ಅನೇಕರು ಪ್ರಸ್ತಾಪಿಸಿದ್ದಾರೆ. ಬಸವಣ್ಣನವರ ಕಾಲದ ಶುದ್ಧ ಆಚರಣೆ ಏನಿತ್ತೋ, ಏನು ವಿಧಿಸಲ್ಪಟ್ಟಿತ್ತೋ ಗೊತ್ತಾಗುತ್ತಲೇ ಇಲ್ಲ. ನಮ್ಮ ಸಾಮಾನ್ಯ ಜ್ಞಾನ (Common Sense) ಮತ್ತು ನಿತ್ಯಾನಿತ್ಯ ವಿವೇಕ ಜ್ಞಾನದಿಂದ ಇದು ತಪ್ಪು ಎಂದು ಹೇಳಬಹುದು. ಹೇಗೆಂದರೆ 'ಶಕ್ತಿಕುಂಡ', 'ಶಕ್ತಿಕೇಂದ್ರ' ವಾದ ಇಷ್ಟಲಿಂಗವನ್ನು ಆರಾಧಿಸುವುದು ತಮ್ಮ ಆತ್ಮಶಕ್ತಿಯನ್ನು ಉದ್ದೀಪಿಸಲೋಸುಗ. ಅಂತಹ ಇಷ್ಟಲಿಂಗದ ಮೇಲೆ ತಮ್ಮ ಪಾದೋದಕವನ್ನು ಎರೆದುಕೊಳ್ಳುವುದು ಅರ್ಥರಹಿತ ಮತ್ತು ತುಸು ದುರಹಂಕಾರವಾದೀತು (ಇದರಲ್ಲಿ ಏನಾದರೂ ವಿಶೇಷ ಅರ್ಥವಿದ್ದರೆ ಆಚರಿಸುವವರು ಹೇಳಲಿ) ಇನ್ನು ಗುರು-ಜಂಗಮರ ಪಾದೋದಕ ಭಕ್ತ ಎರೆದುಕೊಳ್ಳಬಹುದೆ ? ಎಂಬುದು ಮತ್ತೊಂದು ಪ್ರಶ್ನೆ. ಸಾಧನಾ ಮಾರ್ಗದಲ್ಲಿ ಸಾಗುವ ಸಾಧಕ ಗುರು, ಸಂತ, ಅನುಭಾವಿಗಳ ಕರುಣೆ ಪಡೆಯಲೋಸುಗ ತನ್ನ ಇಷ್ಟಲಿಂಗದ ಮೇಲೆ ಅವರ ಪಾದೋದಕ ಎರೆದು ಸ್ವೀಕರಿಸುವನು. ಶಕ್ತಿಪಾತ ಕ್ರಿಯೆಯ ಮೂಲಕ ಅವರ ತಪಸ್ಸು, ಕರುಣೆ ಇವನಿಗೆ ಇಳಿದು ಬರುವುದೆಂಬ ಸಿದ್ಧಾಂತದೊಡನೆ ಆ ಅವತರಣಶಕ್ತಿ ಇಷ್ಟಲಿಂಗದಲ್ಲಿ ಅವರೋಹಿಸಿ ಸಾಧಕನ ಅಧ್ಯಾತ್ಮಿಕ ಆರೋಹಣಕ್ಕೆ ಸಹಕಾರಿಯೂ ಆಗುತ್ತದೆ ಎಂದು ನಮ್ಮ ಅನುಭವ. ಅದು ಇಷ್ಟಲಿಂಗವನ್ನು Activate (ಉದ್ದೀಪನೆ) ಮಾಡುತ್ತದೆ ; ಬ್ಯಾಟರಿಯನ್ನು (Recharge) ಪುನರ್‌ನವೀಕರಣ ಮಾಡಿದಂತೆ ಇದು. ಆದರೆ ಪಾದೋದಕ ಕೊಡುವವರಲ್ಲಿ ಭಕ್ತಿ, ಅಧ್ಯಾತ್ಮ, ಜ್ಞಾನ, ತಪಸ್‌ಶಕ್ತಿ ಇರಬೇಕು. ಕೊಡುವವರಲ್ಲಿ ಅದು ಇದೆ ಎಂಬ ವಿಶ್ವಾಸ ಭಕ್ತನಲ್ಲಿರಬೇಕು. ಅದು ಬಿಟ್ಟು, ಉರಿಯದ ದೀಪದಿಂದ ತನ್ನ ಅಂತರಂಗವನ್ನು ಹೊತ್ತಿಸಿ ಕೊಳ್ಳುವ ಪ್ರಯತ್ನ, ಬರಿದಾದ ಕೊಡದಿಂದ ತನ್ನ ಕೊಡಕ್ಕೆ ನೀರೆರೆದು ಕೊಳ್ಳುವ ಯತ್ನದಂತೆ ಹಾಸ್ಯಾಸ್ಪದ ಎನ್ನಿಸದಿರದು, ಹುಸಿಯೂ ಆಗದಿರದು.

೨. "ತ್ರಿಮೂರ್ತಿಗಳಲ್ಲೊಬ್ಬನಾದ ಶಿವನ ಪ್ರತೀಕವೇ ಲಿಂಗ" ಎಂದು ಎಲ್ಲಾ ಪುರಾಣಗಳಲ್ಲೂ ಹೇಳಲ್ಪಟ್ಟಿದೆ. ಇಷ್ಟಲಿಂಗವೂ ಆ ಪ್ರತೀಕವೇ ತಾನೆ ? ಅಂದಾಗ ಇಷ್ಟಲಿಂಗ, ಶಿವಲಿಂಗಗಳಲ್ಲಿ ಭೇದವೆಲ್ಲಿದೆ ?

* "ತ್ರಿಮೂರ್ತಿಗಳಲ್ಲೊಬ್ಬನಾದ ಶಿವನ ಪ್ರತೀಕ ಲಿಂಗ" ಎಂಬುದು ಪೌರಾಣಿಕ ಕಲ್ಪನೆ ನಿಜ. ಇಷ್ಟೇ ಅಲ್ಲ, ಕೆಲವು ಶೈವವಿರೋಧಿ ವಿಚಾರಗಳ ಪ್ರಕಾರ ಅದು ಅವನ ಜನನೇಂದ್ರಿಯದ ಪೂಜೆ (Phallic Worsip). ಲಿಂಗಾಯತ ಧರ್ಮದ ಪ್ರಕಾರ ಇವೆರಡೂ ಅಲ್ಲ. ಇಷ್ಟಲಿಂಗ ಪರಮಾತ್ಮನ (Absolute Reality) ಪೂಜೆ. ಇಷ್ಟಲಿಂಗ ನಿರಾಕಾರ ಪರವಸ್ತುವಿನ ಕುರುಹು, ಸ್ಥಾವರಲಿಂಗ ಸಾಕಾರಾತ್ಮಕ ಐತಿಹಾಸಿಕ ಶಿವನ ಕುರುಹು. ಇಷ್ಟಲಿಂಗ ಜೀವಾತ್ಮ-ಪರಮಾತ್ಮರು ಅಭಿನ್ನರೆಂಬ ತತ್ತ್ವದ ಕುರುಹು, ವ್ಯಕ್ತಿಯ ಕುರುಹಲ್ಲ.

—ಚಂದ್ರಕಾಂತ, [illegible]

★ ಅಂತರಂಗದಲ್ಲಿ ಅಧ್ಯಾತ್ಮ ಸಾಧನೆ ಮಾಡುತ್ತಲಿರುವ ನನಗೆ, ತಾಯಿತಂದೆ ಮುಂತಾದವರ ಮಧ್ಯೆ ಇರುವುದು ಬೇಡವಾಗಿದೆ. ಆಶ್ರಮವೊಂದನ್ನು ಪ್ರವೇಶಿಸುವ ಅಪೇಕ್ಷೆಯುಂಟು. ನಮ್ಮನ್ನು ತೊರೆಯಬೇಡ ಎಂದು ಹೆತ್ತವರು ಗೋಗರೆಯುತ್ತಾರೆ. ಮುಂದುವರಿಯದೆ ಆತ್ಮಶಾಂತಿ ನನಗಿಲ್ಲ. ದಯಮಾಡಿ ದಾರಿ ತೋರಿರಿ.

* ಜನ್ಮಕೊಡಲಿಕ್ಕಷ್ಟೇ ತಾಯಿತಂದೆ. ಸಾಯುವಾಗ ಹಿಂಬಾಲಿಸರು. ಅಂದಾಗ ಮುಕ್ತಿಪಥದಲ್ಲಿ ಹಿಂಬಾಲಿಸಬಲ್ಲರೆ ? ಆತ್ಮೋದ್ಧಾರದ ದಾರಿ ಇಕ್ಕಟ್ಟಾದುದು. ತಾವೇ ಧೈರ್ಯದಿಂದ-ದಿಟ್ಟತನದಿಂದ ಮುಂದುವರಿಯಬೇಕು.

—ಸಿದ್ಧವೀರಯ್ಯ, ಮೈಸೂರು.

★ ವ್ಯಕ್ತಿಗಳು ತೀರಿಕೊಂಡಾಗ ಅನೇಕ ಪದಗಳನ್ನು ಬಳಸುವರು. ಕೈಲಾಸವಾಸಿಯಾಗು, ಬಯಲಾಗು, ಲಿಂಗೈಕ್ಯವಾಗು ಇತ್ಯಾದಿ. ಲಿಂಗಾಯತ ಧರ್ಮದ ಪ್ರಕಾರ ಯಾವುದು ಸೂಕ್ತ ?

* ಪ್ರತಿಯೊಂದು ಧರ್ಮದ ತಾತ್ತ್ವಿಕ ಹಿನ್ನೆಲೆಯಲ್ಲೇ ಈ ಶಬ್ದಗಳು ಉಪಯೋಗವಾಗುತ್ತವೆ. ದ್ವೈತವನ್ನು ಒಪ್ಪಿ ದೇವರ ಸನ್ನಿಧಿಯಲ್ಲಿ ಮುಕ್ತಾತ್ಮನು ಇರುವನೆಂಬುವವರು ಮಾತ್ರವೇ ವೈಕುಂಠವಾಸಿ, ಕೈಲಾಸವಾಸಿ ಶಬ್ದ ಬಳಸುವರು. ಲಿಂಗಾಯತ ಧರ್ಮದ ಪ್ರಕಾರ ಮುಕ್ತಾತ್ಮ ದೇವನಲ್ಲಿ ಒಡವೆರೆದು ಒಂದಾಗುವ ಕಾರಣ, ಉರಿಯುಂಡ ಕರ್ಪೂರದಂತೆ ಸಮರಸವಾಗುವ ಕಾರಣ ಕೈಲಾಸವಾಸಿ ಎಂಬ ಶಬ್ದ ಬಳಸದೆ ಲಿಂಗೈಕ್ಯ, ಬಯಲಾಗು ಎಂದು ಬಳಸಬೇಕು.

೨. ಮಠದ ಆದಿಗುರುಗಳ ಅಥವಾ ಶರಣರ "ಪುಣ್ಯತಿಥಿ" ಮಾಡಬಹುದೆ ? ವಾರ್ಷಿಕ ಪುಣ್ಯತಿಥಿ ಅಂತ ಮಾಡುವರಲ್ಲ ಇದು ಸರಿಯೆ ?

* ಬಸವ ಧರ್ಮದ ಪ್ರಕಾರ "ಪುಣ್ಯ ತಿಥಿ', ತಪ್ಪು ಲಿಂಗದಲ್ಲಿ ಲೀಯವಾದ ಶರಣನ ಪುಣ್ಯತಿಥಿ ಮಾಡಲು ಹೇಗೆ ಸಾಧ್ಯ ? "ಗಣಾರಾಧನೆ" ಮಾಡಬಹುದು ಗಣ= ಸಮುದಾಯ. ಸಮಾಜಧ ಬಂಧುಗಳನ್ನು ಆಮಂತ್ರಿಸಿ, ಹಿರಿಯರನ್ನು ಸ್ಮರಿಸಿಕೊಳ್ಳಬಹುದು. ಅಥವಾ ಹಿರಿಯರ ಹೆಸರಿನಲ್ಲಿ ಯಾರಿಗಾದರೂ ಸಹಾಯ ಸಲ್ಲಿಸಬಹುದು ಅಂದು.

೩. ನಮ್ಮಗಳಲ್ಲಿ ಹಿರೇಶ ಹಬ್ಬ ಎಂದು ಮಾಡುವುದುಂಟು. ತಂಬಿಗೆ, ಕಳಸಗಳನ್ನಿಟ್ಟು ಅವಕ್ಕೆ ಬಟ್ಟೆ ಉಡಿಸಿ ಅಲಂಕರಿಸಿ ಪೂಜಿಸಿ, ಪ್ರಸಾದ ಎಡೆಮಾಡುವುದುಂಟು. ಇದು ಸರಿಯೆ ?

* ಇದೂ ಸಹ ತಪ್ಪು. ಏಕೆಂದರೆ ಈ ಧರ್ಮದ ಅನುಯಾಯಿಯಾದ ಲಿಂಗವಂತ ಶರಣನು ದೇವನಲ್ಲಿ ಒಂದಾಗುವನೆಂಬ ನಂಬಿಕೆ ಇರುವುದರಿಂದ, ಅವನು ಬೇರೆಯಾಗಿ ಕರೆದರೆ ಬರುವುದಿಲ್ಲವಾದ ಕಾರಣ, ಬೇರೆ ಇಟ್ಟು ಪೂಜಿಸುವುದು ತಪ್ಪು. ಹಿರಿಯರನ್ನು ಸ್ಮರಿಸಿಕೊಳ್ಳುವ ಆಸೆ ಇದ್ದವರು ವರ್ಷದ 'ಅಂದು' ಅವರ ಭಾವಚಿತ್ರವನ್ನಿರಿಸಿ "ಲಿಂಗೈಕ್ಯ ದಿನಾಚರಣೆ" ಮಾಡಬಹುದು ; ಅವರ ಹೆಸರಿನಲ್ಲಿ ಸಿಹಿ ಅಡಿಗೆ ಮಾಡಿ ಉಣ್ಣಬಹುದು, ಹಂಚಬಹುದು.

—ಬಸವರಾಜ ಸಂಗಮದ, ಬೀದರ

★ ಇಷ್ಟಲಿಂಗವನ್ನು ದೇಹದಿಂದ ಅಗಲಿಸಿ ಹೊರಗೆ ಪೀಠದ ಮೇಲೆ ಇಟು ಸೂತ್ರವನ್ನು ಧರಿಸಿ ಪೂಜಿಸುವುದು ಧರ್ಮಸಮ್ಮತವೆ ?.

ದೇಹದಿಂದ ಅಗಲಿಸಿ ಹೊರಗೆ ಇಡುತ್ತಿದ್ದಂತೆಯೇ ಅದು ಸ್ಥಾವರಾರ್ಚನೆಯಾಗುವುದು ಇಷ್ಟಲಿಂಗಾರ್ಚನೆ ಎನಿಸದು. ಆದ್ದರಿಂದ, ಅಂಗೈಯೊಳಗಿರಿಸಿ ಆನಂದದಿಂದ ಪೂಜಿಸುವುದೇ ಧರ್ಮಸಮ್ಮತ.

—ಲಿಂಗಪ್ಪ ಊರುಬೇಡ

★ ಉತ್ತಮ ಕಾರ್ಯಗಳನ್ನು ಮಾಡುತ್ತ ಮಹೋನ್ನತ ಧ್ಯೇಯಗಳನ್ನಿಟ್ಟುಕೊಂಡು ಮುಂದೆ ಸಾಗುವ ನಿಮ್ಮ ಸಂಸ್ಥೆಯ ಬಗ್ಗೆ ಟೀಕಾಕಾರ ಮಿತ್ರನೊಬ್ಬನಿಗೆ ಸರಿಯಾಗಿ ಮನವರಿಕೆ ಮಾಡಿಕೊಡಲು ಬಹಳ ಶ್ರಮಪಡುತ್ತಿರುವೆ. ಅವನು ಬದಲಾಗುತ್ತಲೇ ಇಲ್ಲ. ಏಕೆ ?

* ಮಲಗಿದೋರನ್ನ ಎಬ್ಬಿಸಬಹುದು ; ನಿದ್ದೆ ಸೋಗು ಹಾಕಿದವರನ್ನು ಎಬ್ಬಿಸುವುದು ಕಷ್ಟಕರ. ಹಾವಿನದು ಕಡಿಯೋದೆ ಸ್ವಭಾವ. ಹಲ್ಲು ಕಿತ್ತನಂತರವೂ ಕಡಿಯಲಾಗದಿದ್ದರೂ ಬುಸ್ ಅನ್ನೋದು ಬಿಡದು. ಆ ರಕ್ತಗತ ಗುಣ ತೆಗೆಯಲು ಯಾವ ಬ್ರಹ್ಮನಿಗೂ ಸಾಧ್ಯವಿಲ್ಲ. ನಿಮ್ಮ ದಾರಿಯಲ್ಲಿ ನೀವು ಸಾಗಿರಿ; ಕಾಲ ಹರಣ ಮಾಡಬೇಡಿ.

—ಮಾಣಿಕಪ್ಪ, ಬೀದರ.

★ ಕ್ರೈಸ್ತ ಸನ್ಯಾಸಿನಿಯರನ್ನು ಸ್ವಯಂಸ್ಫೂರ್ತಿಯಿಂದ ತಾಯಿ-ತಂದೆ ಬಿಟ್ಟುಕೊಡುವಂತೆ ನನ್ನ ಮಗಳನ್ನೂ ಬಸವ ತತ್ತ್ವ ಪ್ರಚಾರದ ದಾರಿಯಲ್ಲಿ ಬಿಡುವ ಅಪೇಕ್ಷೆ ಅದಮ್ಯವಾಗಿದೆ. ನೆರೆಹೊರೆಯವರು ನೆಂಟರಿಷ್ಟರು ಬೇಡವೆನ್ನುತ್ತಿದ್ದಾರೆ. ಏನು ಮಾಡಲಿ ?

★ ಅಧ್ಯಾತ್ಮ ಪಥದಲ್ಲಿ ಸಲ್ಲುವ ಪುಣ್ಯಜೀವಿಯನ್ನು ಹೆರಲು ಎಷ್ಟೋ ಪುಣ್ಯ ಮಾಡಿರಬೇಕು. ಅಂಥ ಮಕ್ಕಳನ್ನು ಪ್ರೋತ್ಸಾಹಿಸಿ, ಧರ್ಮ ಮಾರ್ಗಕ್ಕೆ ಕಳಿಸಿ ಕೀರ್ತಿಶಾಲಿ ತಂದೆಯಾಗಿರಿ. ಕಷ್ಟ ಸುಖಕ್ಕಿಲ್ಲದ ಸುತ್ತಲಿನವರ ಮಾತು ಕೇಳದಿರಿ. ಭವದ ಬಂಧನ ಹರಿಸುವವರು ನೆರೆಹೊರೆಯವರಲ್ಲ.

———

ಬಾ ಬಾ ಗುಬ್ಬಿ

ಬಾಬಾ ಗುಬ್ಬಿ ಮುದ್ದಿನ ಗುಬ್ಬಿ
ಅಂದದ ಗುಬ್ಬಿ ಚಿನ್ನದ ಗುಬ್ಬಿ
    ತಿನ್ನಲು ಕೊಡಿಸುವೆ ತಿಂಡಿಯ ತಿನಿಸುವೆ
    ಹಾರುತ ಬಾ ಹಾಡುತ ಬಾ

ಗೆಳೆಯರು ಆಡಲು ಯಾರೂ ಇಲ್ಲ
ನಿನ್ನಯ ಸ್ನೆಹಕೆ ಕಾದಿರುವೆನಲ್ಲಾ
    ತಮ್ಮನು ಇಲ್ಲ ತಂಗಿಯು ಇಲ್ಲ
    ಹಾಡನು ಕಲಿಸು ಹಾರಲು ಕಲಿಸು

ನನ್ನಯ ಜೊತೆಗೆ ಹಾಡುವರಿಲ್ಲಾ
ಪ್ರೀತಿಯ ಮಾತನು ನುಡಿಯುವರಿಲ್ಲಾ
    ನನ್ನಯ ಪಕ್ಕಕೆ ರೆಕ್ಕೆಯ ಹಚ್ಚು
    ಮುಗಿಲಿನ ಕಡೆಗೆ ಹಾರಲು ಹಚ್ಚು

ಹಾಡುತ ನಲಿವೆ, ಹಾರುತ ನಲಿವೆ
ಬಾ ಬಾ ಗುಬ್ಬಿ ಮುದ್ದಿನ ಗುಬ್ಬಿ.

—ಎಚ್. ಬಸವರಾಜು, ಬೀದರ್

ವಿಶ್ವಧರ್ಮ ಮತ್ತು ಬಸವಣ್ಣ

—ಕೃಷ್ಣಮೂರ್ತಿ, ಜನಸೇವಾ ವಿದ್ಯಾಕೇಂದ್ರ ಚನ್ನೇನಹಳ್ಳಿ,

ಮಾನವ ಜೀವನದ ಇತಿಹಾಸದಲ್ಲಿ ಅವನ ಭಾವನೆಗಳ ವಿಕಾಸದ ಗೌರೀಶಂಕರವೇ ಧರ್ಮ. ಮಾನವನನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸಿರುವ ಪ್ರೇಮ ಧರ್ಮದಿಂದಲೇ ಉದಯಿಸಿದೆ. ಧರ್ಮ ಮಾನವನ ಹೃದಯವನ್ನು ಮೃದು ಮಾಡಿದಂತೆ ಬೇರೆ ಯಾವ ಶಕ್ತಿಯೂ ಮಾಡಿಲ್ಲ. ಆದರೆ ಅದೇ ಧರ್ಮ ಮಾನವನನ್ನು ಅತ್ಯಂತ ಕ್ರೂರಪ್ರಾಣಿಗಳಿಗಿಂತಲೂ ಕ್ರೂರಿಯನ್ನಾಗಿ ಮಾಡಿದೆ. ಅವನ ಹೃದಯವನ್ನು ಕಗ್ಗಲ್ಲಾಗಿ ಪರಿವರ್ತಿಸಿದೆ. ಕಡು ದ್ವೇಷ ಧರ್ಮದಿಂದಲೇ ಜನ್ಯವಾಗಿದೆ. ಇಂದಂತೂ ಹಲವು ಧರ್ಮಗಳ ತಿಕ್ಕಾಟ, ಗೊಂದಲ, ದ್ವೇಷಾಸೂಯೆಗಳು ಹಿಂದೆಂದೂ ಕಾಣದಷ್ಟು ತೀವ್ರವಾಗಿದೆ. ಆದ್ದರಿಂದ ಎಂದಿಗಿಂತಲೂ ಇಂದು—ಈಗ—ಇಡೀ ಪ್ರಪಂಚ ಆಲಿಸುವಂತಹ, ಪಾಲಿಸುವಂತಹ, ಶಾಂತಿ- ಸೌಹಾರ್ದಗಳ ಧರ್ಮಾಮೃತದ ಆವಶ್ಯಕತೆಯಿದೆ. ಧಾರ್ಮಿಕ ಆಂದೋಳನಾ ಕ್ಷೇತ್ರದಲ್ಲಿ ಅಖಂಡ ಸೌಹಾರ್ದದ ತಾಂಡವದ ಅಗತ್ಯವಿದೆ. ಪ್ರಪಂಚದಲ್ಲಿ ಶಾಂತಿ ನೆಲಸುವಂತೆ ಮಾಡಲು ವಿಶ್ವಧರ್ಮದ ಉದಯಕ್ಕೆ ಕಾಲ ಪಕ್ವವಾಗಿದೆ. ವಿಶ್ವಧರ್ಮದ ಅರುಣರಾಗದೊಡನೆ ವಿಶ್ವಕಲ್ಯಾಣದ ಉದಯರವಿ ತನ್ನ ಕಿರಣಗಳಿಂದ ಪ್ರಪಂಚಕ್ಕೆ ಅಮೃತಸೇಚನೆ ಮಾಡಲು ಸಕಾಲವಿದಾಗಿದೆ.

ವಿಶ್ವಬಾಂಧವ್ಯ ಎಂಬ ಪದ ಸಾಕಷ್ಟು ಸವಕಲಾಗಿದೆ. ವಿಶ್ವಬಾಂಧವ್ಯ, ಸಮಾನತೆ ಈ ಪದಗಳನ್ನು ಬಳಸದ ಕಾರ್ಮಿಕ ನಾಯಕರಾಗಲಿ, ರಾಜಕಾರಣಿಗಳಾಗಲಿ, ಧರ್ಮ ಗುರುಗಳಾಗಲಿ ವಿರಳ. ಆದರೂ ವಿಶ್ವಬಾಂಧವ್ಯ ಮರಳುಗಾಡಿನ ಮರೀಚಿಕೆಯಾಗಿದೆ. ಏಕೆಂದರೆ ಮುಂಗಾರಿಯಲ್ಲಿ ಮೋಡಗಳು ಸೇರಿದರೆ ಆಗುವುದು ಮಿಂಚು-ಗುಡುಗಿನ ಆರ್ಭಟವೇ ಹೊರತು ಒಂದು ಹನಿ ಮಳೆಯಲ್ಲ. ಪರ್ವತದಷ್ಟು ಮಾತು, ಗುಲಗಂಜಿಯಷ್ಟು ಕ್ರಿಯೆ.

ವಿಶ್ವಧರ್ಮ ಉದಯಿಸಲು ಇರುವ ದೊಡ್ಡ ಅಡ್ಡಿಯೆಂದರೆ ಎಲ್ಲಿ ಧರ್ಮಗಳಿಗೂ ಅನ್ವಯಿಸಲು ಸಾಧ್ಯವಾಗುವ ಒಂದು ಸಾರ್ವಭೌಮಿಕ ನಿಯಮದ ಕೊರತೆ. ವಿಶ್ವಬಾಂಧವ್ಯ, ಸಮಾನತೆ—ಈ ಪದಗಳನ್ನು ಉಚ್ಚರಿಸಲು, ಕೇಳಲು ಬಹಳ ಹಿತ. ಆದರೆ ಸಮಾನತೆ ಸಾಧಿಸಲು ಸಾಧ್ಯವೆ ? ಹೌದು ಮತ್ತು ಇಲ್ಲ. ಒಬ್ಬ ಕಪ್ಪು, ಇನ್ನೊಬ್ಬ ಬಿಳಿ. ಒಬ್ಬ ಮನುಷ್ಯ ಇನ್ನೊಬ್ಬನಿಗಿಂತ ಬಲಶಾಲಿ, ಮತ್ತೊಬ್ಬ ಮಗುದೊಬ್ಬನಿ

ಗಿಂತ ಬುದ್ಧಿಶಾಲಿ. ಆದರೂ ಈ ಎಲ್ಲಾ ವ್ಯತ್ಯಾಸಗಳ ನಡುವೆಯೂ ಒಂದು ಸಮಾನ ಅಂಶ ಇರಲೇಬೇಕು. ಇದೆ. ಅದೇ ಮಾನವೀಯತೆ, ದಯೆ, ಅನುಕಂಪ. ಆದ್ದರಿಂದ ಯಾವುದೇ ಒಂದು ಧರ್ಮ ವಿಶ್ವಧರ್ಮವಾಗಬೇಕಾದರೆ ಅದರಲ್ಲಿ ದಯೆ ಮೂಲಭೂತ ಗುಣವಾಗಬೇಕು.

ವೈವಿಧ್ಯತೆಯೇ ಜೀವನದ ನಿಯಮವಾದರೆ ಈ ವೈವಿಧ್ಯದಲ್ಲಿ ಏಕತೆಯೇ ವಿಶ್ವಧರ್ಮದ ನಿಯಮ. ಎಲ್ಲಿಯವರೆಗೂ ನಾವು ವ್ಯಕ್ತಿಗಳಾಗಿ (Individuals)ಉಳಿದು, ವ್ಯಕ್ತಿಗತ ಆಲೋಚನೆಗಳನ್ನು ಹೊಂದಿರುತ್ತೇವೆಯೋ ಅಲ್ಲಿಯವರೆಗೂ ಸಮಾನತೆ ಬರಲಾರದು. ಆದರೆ ನಾವು ವ್ಯಕ್ತಿಗಳಾಗಿ ಉಳಿಯದೆ ಪ್ರಗತಿಯಾಗಲಾರದು. ಈ ಸಮಸ್ಯೆಗೆ ಪರಿಹಾರ ವ್ಯಷ್ಟಿಯ ಪ್ರಗತಿಯ ಜೊತೆ ಜೊತೆಗೇ ಸಮಷ್ಟಿಯ ಉದ್ಧಾರವನ್ನೂ ಹೊಂದಿಸುವುದರಲ್ಲಿದೆ.

ಹಾಗಾದರೆ ನಾವು ಯಾವ ಆದರ್ಶವನ್ನು ವಿಶ್ವಧರ್ಮದ ಆದರ್ಶವೆಂದು ತೆಗೆದುಕೊಳ್ಳುವುದು ? ಹೇಗೆ ವೈವಿಧ್ಯದಲ್ಲಿ ಏಕತೆಯಿದೆ ಎಂದು ಒಪ್ಪಿಕೊಂಡೆವೋ ಹಾಗೆಯೇ ಸತ್ಯಕ್ಕೆ ಸಾವಿರ ಹಾದಿ ಎಂಬುದನ್ನೂ ಒಪ್ಪಿಕೊಳ್ಳಬೇಕು. ನಾವು ಯಾವ ದಿಕ್ಕಿನಿಂದ ಬಂದರೂ ಕೊನೆಗೆ ಮುಟ್ಟುವುದು ಇರುವ ಪರಮ ಸತ್ಯವೊಂದನ್ನೇ. ಸತ್ಯ ಬೇರೆ ಬೇರೆ ಆಕಾರಗಳ ಪಾತ್ರೆಯಲ್ಲಿರುವ ನೀರಿನಂತೆ. ಪ್ರತಿಯೊಂದು ಪಾತ್ರೆಯಲ್ಲಿರುವುದೂ ಸತ್ಯವೇ. ಇದೇ ವಿಶ್ವಧರ್ಮದ ಆದರ್ಶ.

ಆದರ್ಶವೇನೋ ಸರಿ. ಆದರೆ ಇದು ಅನುಷ್ಠಾನ ಯೋಗ್ಯವೇ ? ವಿಭಿನ್ನ ಧರ್ಮಗಳ ಸಿದ್ಧಾಂತವೆಲ್ಲ ಸತ್ಯವೇ ಎಂದು ಒಪ್ಪಿಕೊಂಡ ಭಾವನೆ ಬಹಳ ಪುರಾತನ. ಆದರೆ ಈ ಎಲ್ಲಾ ಧರ್ಮಗಳಲ್ಲಿಯೂ ಸಾಮರಸ್ಯವನ್ನು ತರಲು ಇಂದಿಗೂ ಸಾಧ್ಯವಾಗಿಲ್ಲ. ಅದಕ್ಕೆ ಕಾರಣ ಬಹುಶಃ ಯಾವುದೇ ಧರ್ಮದಲ್ಲಿ ಸಮಾಜದಲ್ಲಿನ ಎಲ್ಲ ವಿಭಿನ್ನ ಪ್ರಕೃತಿಯ, ಭಿನ್ನ ಸ್ವಭಾವದ ವ್ಯಕ್ತಿಗಳಿಗೆ ಸ್ಥಾನವನ್ನು ನೀಡದೇ ಇದ್ದುದು ಎಂದು ತೋರುತ್ತದೆ.

ಸಮಾಜದ ವ್ಯಕ್ತಿಗಳನ್ನು ನಾವು ಸ್ಥೂಲವಾಗಿ ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು. ಮೊದಲು ಕರ್ಮಯೋಗಿ. ಕರ್ಮ ಇವನ ಗುರಿ. 'ಪರೋಪಕಾರಾಯ ಇದಂ ಶರೀರಂ' ಎಂದು ತಿಳಿದಿರುವವನು. ನಿಷ್ಕಾಮಕರ್ಮಿ. ಬೇರೇನೂ ಇವನ ಗಮನಕ್ಕೆ ಬರುವುದಿಲ್ಲ. ಎರಡನೆಯವನು ಭಕ್ತಿಯೋಗಿ. ಇವನು ಸುಂದರವಾದುದನ್ನು, ಭವ್ಯವಾದದನ್ನು ಪ್ರೀತಿಸುವನು. ದೇವರು ಇವನಿಗೆ ಪ್ರೇಮರೂಪಿ, ತರ್ಕ ಇವನಿಗೆ ಅನಾವಶ್ಯಕ ಹೊರೆ. ವೈರಾಗ್ಯಮೂರ್ತಿ, ಭಾವಜೀವಿ. ಮೂರನೆಯವನು

ರಾಜಯೋಗಿ. ತನ್ನ ಮನಸ್ಸಿನ ವಿಶ್ಲೇಷಣೆ, ಅದರ ಕಾರ್ಯಾಚರಣೆಯ ರಹಸ್ಯ ಭೇದನೆಯೇ ಇವನ ಗುರಿ. ಶರೀರವನ್ನು ಈ ಗುರಿಯ ಸಾಧನ ಎಂದು ತಿಳಿದವನು ವಿಜ್ಞಾನಿ. ಕೊನೆಗೆ ಜ್ಞಾನಯೋಗಿ. ವಿಮರ್ಶಾತ್ಮಕ ಬುದ್ಧಿಯುಳ್ಳವನು. ತೀಕ್ಷ್ಣಮತಿ. ದ್ವಂದ್ವಗಳನ್ನು ಏಕವಾಗಬೇಕೆನ್ನುವನು. ತತ್ವಶಾಸ್ತ್ರಗಳಿಗೂ ಅತೀತವಾದುದನ್ನು ಸ್ವರೂಪ ಚಿಂತನೆಯ ಮೂಲಕ ತಿಳಿಯಲಿಚ್ಛಿಸುವವನು. ಬಯಲಾಗಬಯಸುವವನು.

ಯಾವ ಧರ್ಮದ ಶ್ವೇತ ಛತ್ರ ಈ ನಾಲ್ಕು ಬಗೆಯ ಜನರಿಗೆ ನೆರಳನ್ನೀಯುವುದೋ ಅದು ವಿಶ್ವಧರ್ಮವಾಗಲು ಯೋಗ್ಯವಾದದ್ದು. ಅಂದರೆ ಈ ನಾಲ್ಕೂ ವರ್ಗಗಳ ಸಿದ್ಧಾಂತವನ್ನು ಒಪ್ಪಿಕೊಳ್ಳುವುದೇ ಧರ್ಮ ಎಂದರ್ಥವಲ್ಲ. ಅವುಗಳ ಚಿಂತನ, ಮಂಥನವಾಗಬೇಕು. ಸಾಕ್ಷಾತ್ಕಾರದ ನವನೀತ ಹೊರ ಹೊಮ್ಮಬೇಕು. ಆಗ ಅದು ನಿಜವಾದ ವಿಶ್ವಧರ್ಮ. ಏಕೆಂದರೆ ಧರ್ಮ ಬರಿಯ ಮಾತಲ್ಲ, ಸಿದ್ಧಾಂತವಲ್ಲ, ನಂಬಿಕೆಯಲ್ಲ, ಧರ್ಮ ಎಂದರೆ 'ಇರುವುದು'. [To be] ಧರ್ಮಕ್ಕೆ ಹುಟ್ಟು-ಸಾವುಗಳಿಲ್ಲ. ಅದು ಚಿರನೂತನ, ಚಿರಂತನ.

ಅನುಷ್ಠಾನ ಯೋಗ್ಯವಾದ ಆದರ್ಶ ವಿಶ್ವಧರ್ಮದ ಸ್ಥೂಲ ಸ್ವರೂಪವನ್ನು ವಿವರಿಸಿದ ನಾವು ಇಂತಹ ಧರ್ಮ ಹಿಂದೆಂದಾದರೂ ಇದ್ದಿತೇ, ಮುಂದೆ ಇರಲಾದೀತೆ ಎಂಬುದನ್ನು ವಿವೇಚಿಸೋಣ. ಸುಮಾರು 800 ವರ್ಷಗಳಷ್ಟು ಹಿಂದೆಯೇ ಈ ಆದರ್ಶ ವಿಶ್ವಧರ್ಮದ ಕನಸು ನನಸಾಗಿತ್ತೆಂದರೆ ನಮಗೆ ಆಶ್ಚರ್ಯವಾಗಬಹುದು. ಕರ್ನಾಟಕದಲ್ಲಿ ಅಷ್ಟೇ ಏಕೆ ಇಡೀ ಭಾರತದಲ್ಲೇ ಆಗಿ ಹೋದ ವಿಭೂತಿ ಪುರುಷರಲ್ಲಿ ಅಗ್ರಗಣ್ಯರಾದ ಬಸವೇಶ್ವರರ ಕಾಲದಲ್ಲಿ ವಿಶ್ವಧರ್ಮ ನೆಲೆಗೊಂಡಿತ್ತು. 'ದಯೆಯೇ ಧರ್ಮದ ಮೂಲ' ಎಂಬ ಪರಮ ಸತ್ಯವನ್ನು ಕಂಡ ದ್ರಷ್ಟಾರ ಬಸವಣ್ಣನವರು. ಅವರ ಕಾಲದ 'ಅನುಭವ ಮಂಟಪ' ವಿಶ್ವಧರ್ಮದ ವೇದಿಕೆಯಾಗಿತ್ತು. 'ಕಾಯಕವೇ ಕೈಲಾಸ' ಎಂದು ಸಾರಿದ ಅಪ್ರತಿಮ ಕರ್ಮಯೋಗಿ ಬಸವಣ್ಣ. ಅಷ್ಟೇ ಅಲ್ಲದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಕಾಯವನ್ನೇ ಕೈಲಾಸ' ವನ್ನಾಗಿ ಮಾಡಿಕೊಂಡು ವ್ಯಕ್ತಿಯ ಹಿತದ ಜೊತೆ ಜೊತೆ ಸಮಷ್ಟಿಯ ಹಿತ, ಪ್ರಗತಿಯನ್ನೂ ಸಾಧಿಸಿದರು. ತಮ್ಮ ಲಿಂಗಾಯತ ಧರ್ಮದ ಶ್ವೇತಛತ್ರದ ಅಡಿಯಲ್ಲಿ ಕರ್ಮಯೋಗಿ ಸೊನ್ನಲಿಗೆ ಸಿದ್ಧರಾಮ, ಅನುಪಮ ವೈರಾಗ್ಯಮೂರ್ತಿ, ಭಕ್ತಿಯೋಗಿಣಿ ಅಕ್ಕಮಹಾದೇವಿ, ಜ್ಞಾನಯೋಗಿ ಅಲ್ಲಮಪ್ರಭು, ಮತ್ತು ರಾಜಯೋಗಿ ಗೋರಕ್ಷ-ಇವರಿಗೆಲ್ಲ ಸ್ಥಾನವಿತ್ತಿದ್ದ ಬಸವಣ್ಣನವರು ವಿಶ್ವಧರ್ಮದ ಕಲ್ಪನೆಯನ್ನು ಸಾಕಾರಗೊಳಿಸಿದ್ದರು. ಸ್ವತಃ ಪೂರ್ಣಯೋಗಿಯಾದ ಬಸವಣ್ಣನವರು ಇವೆಲ್ಲದರ ಸಂಗಮದಂತಿದ್ದರು.

ಬಸವಣ್ಣನವರ ತತ್ವಗಳು, ಜೀವನ ವಿಶ್ವಧರ್ಮದ ಕನಸು ಕಾಣುವ ಯಾರಿಗೇ ಆಗಲಿ ದಾರಿದೀಪವಾಗಬಲ್ಲದು. ಒಮ್ಮೆ ಈ ದಿಶೆಯಲ್ಲಿ ವಿಶ್ವಕ್ಕೇ ಮಾರ್ಗದರ್ಶಿಯಾಗಿದ್ದ ಭಾರತ ಇನ್ನೊಮ್ಮೆ ತನ್ನ ಜ್ಞಾನ ತೈಲದಿಂದ ವಿಶ್ವಧರ್ಮದ ಸೊಡರನ್ನು ಬೆಳಗಬಹುದು. ಭುವಿಯನ್ನು ನಂದನವನ್ನಾಗಿಸಬಹುದು. ಬಸವಣ್ಣನವರು ಬರೀ ಬೋಧಕರಲ್ಲ, ಸಾಧಕರು. ಬಸವಣ್ಣನವರು ಕೇವಲ ಒಂದು ವಿಶ್ವಧರ್ಮವನ್ನು ಸ್ಥಾಪಿಸಲಿಲ್ಲ; ಅವರೇ ಒಂದು ವಿಶ್ವಧರ್ಮವಾಗಿದ್ದರು.

———

ನ ಗೆ ಹ ನಿ

೧. ಅಧ್ಯಾಪಕ ವಿದ್ಯಾರ್ಥಿಗೆ ಕೇಳುತ್ತಾನೆ :— ಮಣ್ಣು ಮತ್ತು ನೀರಿಲ್ಲದೆ ಬೆಳೆಯುವ ಬೆಳೆ ಯಾವದು ?

ವಿದ್ಯಾರ್ಥಿ :— ತಮ್ಮ ಗಡ್ಡ ಸಾರ್ !

೨. ವಕೀಲನು ತನ್ನ ಮಗನಿಗೆ ಹೇಳುತ್ತಾನೆ:— ನೀನು ಸುಳ್ಳು ಹೇಳಿರುತ್ತಿ. ಆದ್ದರಿಂದ ನಿನಗೆ ಮಿಠಾಯಿ ಕೊಡುವದಿಲ್ಲ.

ಮಗು :— ತಾವು ತುಂಬಿದ ನ್ಯಾಯಾಲಯದಲ್ಲಿ ಸುಳ್ಳು ಹೇಳಿದರೂ ತಮಗೆ ರೂಪಾಯಿ ಸಿಗುತ್ತವೆ. ಆದರೆ ನನಗೆ ಮಿಠಾಯಿಯಾದರೂ ಸಿಗಲಾರದೇ ?

—ಅಶೋಕ ಜಿ. ಸಾಬಾದಿ

ಮೈಸೂರಿನಲ್ಲಿ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ.

ಮೈಸೂರು ನಗರದ ಪುರಸಭೆಯ ಆವರಣದಲ್ಲಿ ೨೨-೧೦-೭೮ ರಿಂದ ಪೂಜ್ಯ ಶ್ರೀ ಜಗದ್ಗುರು ಮಾತೆಮಹಾದೇವಿಯವರು ವಿಶ್ವಧರ್ಮ ಪ್ರವಚನ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಸಮಾರಂಭದ ಉದ್ಘಾಟನೆಯನ್ನು ಶಾಸಕರಾದ ಹೆಚ್. ಗಂಗಾಧರನ್‌ರವರು ನೆರವೇರಿಸಿದರು. ಅಂದಿನ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿ ಮೈಸೂರು ವಿಶ್ವವಿದ್ಯಾಲಯದ ಅಂಚೆ-ತೆರಪಿನ ಸಂಸ್ಥೆಯ ಮುಖ್ಯಸ್ಥರಾದ ಪಿ. ಮಲ್ಲಿಕಾರ್ಜುನಯ್ಯನವರು ಆಗಮಿಸಿದ್ದರು. ಮೊದಲನೆ ದಿನವಾದ ಅಂದು, ನಿರೀಕ್ಷೆಗೆ ಮೀರಿ ಜನರು ಸೇರಿದ್ದರು. ಪೂಜ್ಯ ಮಾತಾಜಿಯವರು ನಡೆಸುತ್ತಿರುವ ಜ್ಞಾನದಾಸೋಹದಲ್ಲಿ ಪಾಲ್ಗೊಂಡು ಪುನೀತರಾಗಲುಜನ ಹರ್ಷದಿಂದ ಬಂದು ನೆರೆಯುತ್ತಿದ್ದಾರೆ. ದಿನದಿನಕ್ಕೆ ವೃದ್ಧಿಗೊಂಡು ಪುರಭವನ ಮೈದಾನದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನೆರೆಯುತ್ತಿದ್ದಾರೆ.

೯-೧೦-೭೮ ರಂದು ಬೆಳಿಗ್ಗೆ ೧೦ ಗಂಟೆಗೆ ಪೂಜ್ಯ ಮಾತಾಜಿಯವರು ಶಾರದಾ ಮಹಿಳಾ ಸಮಾಜದವರ ಆದರದ ಆಮಂತ್ರಣ ಸ್ವೀಕರಿಸಿ ಭಾಷಣ ಮಾಡಿದರು. ಮಹಿಳೆಯರಿಂದ ನಮ್ಮ ಸಮಾಜವನ್ನು ಹೇಗೆ ತಿದ್ದಲು ಸಾಧ್ಯ ? ಸಾಹಿತ್ಯ, ಧರ್ಮ, ಸಂಸ್ಕೃತಿಗಳ ರಕ್ಷಣೆಯಲ್ಲಿ ಅವರಿಂದ ಆಗಬೇಕಾದ ಕಾರ್ಯಗಳೇನು ? ಎಂಬ ಬಗ್ಗೆ ವಿವರವಾಗಿ ಭಾಷಣ ಮಾಡಿದರು.

೧-೧೧.೭೮ ರಂದು ಪಿರಿಯಾಪಟ್ಟಣದ ಜೂನಿಯರ್ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮಕ್ಕೆ ಮುಖ್ಯ ಭಾಷಣಕಾರರನ್ನಾಗಿ ಪೂಜ್ಯ ಮಾತಾಜಿಯವರನ್ನು ಆಮಂತ್ರಿಸಿದ್ದರು. ಅಂದಿನ ಕಾರ್ಯಕ್ರಮದ ಅಧ್ಯಕ್ಷರಾಗಿ ಶ್ರೀಮಾನ್. ರಾಮರಾಜೇ ಅರಸ್‌ರವರು ಆಗಮಿಸಿದ್ದರು. ಕನ್ನಡ ರಾಜ್ಯೋತ್ಸವ ಆಚರಿಸುವ ಉದ್ದೇಶ, ಶಿಕ್ಷಣದ ಮಟ್ಟ ಹೇಗಿರಬೇಕು ಎಂದು ಪೂಜ್ಯ ಮಾತಾಜಿಯವರು ವಿವರಿಸಿದ ನಂತರ, ರಾಷ್ಟ್ರಗೀತೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಶಿಕ್ಷಕ ತರಬೇತಿ ಕೇಂದ್ರದ ಮುಖ್ಯಸ್ಥರು 'ಶೂನ್ಯಸಂಪಾದನೆ'ಯ ಬಗ್ಗೆ ೬, ೭, ಲನೇ ತಾರೀಖಿನಂದು ಉಪನ್ಯಾಸ ಮಾಡಬೇಕೆಂದು ಆದರದಿಂದ ಆಮಂತ್ರಿಸಿದ್ದರು. ಪೂಜ್ಯ ಮಾತಾಜಿಯವರು ವಚನ ಸಾಹಿತ್ಯದ ವೈಶಿಷ್ಟ್ಯ, ಶೂನ್ಯಸಂಪಾದನೆಯಲ್ಲಿ

ಪ್ರಭುದೇವರ ವ್ಯಕ್ತಿತ್ವ ಮತ್ತು ಮುಕ್ತಾಯಕ್ಕ-ಸಿದ್ಧರಾಮರ ಸಂಪಾದನೆಯಲ್ಲಿ ಬರುವ ತಾತ್ತ್ವಿಕ ವಿಷಯಗಳ ಬಗ್ಗೆ ಮೂರು ದಿನಗಳು ಸುಮಾರು ೨ ತಾಸು ಪ್ರವಚನ ಮಾಡಿದರು. ವಿದ್ಯಾವಂತರು-ಬುದ್ಧಿವಂತರಾದ ಶ್ರೋತೃಗಳು ಪೂಜ್ಯ ಮಾತಾಜಿಯವರ ಭಾಷಣವನ್ನು ಕೇಳಿ ತುಂಬಾ ಆನಂದ ವ್ಯಕ್ತಪಡಿಸಿದರು.

೧೨-೧೧-೭೮ ರಂದು ಬೆಳಿಗ್ಗೆ ೧೦-೩೦ಕ್ಕೆ ಆನಂದವಿಹಾರ ಕಲ್ಯಾಣ ಮಂದಿರದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸಿದರು. ಪ್ರಾರ್ಥನೆ ಎಂದರೇನು ? ಪ್ರಾರ್ಥನೆಯ ಮಹತ್ವ ಎಲ್ಲವನ್ನು ಕುರಿತು ವಿವರಿಸಿದ ಬಳಿಕ ಪೂ. ಮಾತಾಜಿಯವರು ನೆರೆದಿದ್ದ ಅಸಂಖ್ಯಾತರಿಗೆ ಪ್ರಾರ್ಥನೆ ಮತ್ತು ಸಾಮೂಹಿಕ ಜಪ ಮಾಡಿಸಿದರು. ಪ್ರಾರ್ಥನೆಯ ನಂತರ ಪ್ರವಚನ ಮಾಡಿ ಮಂಗಲದೊಡನೆ ಕಾರ್ಯಕ್ರಮ ಮುಕ್ತಾಯಗೊಳಿಸಿದರು.

೨೦-೧೧-೭೮ ರಂದು ಮೆಡಿಕಲ್ ಕಾಲೇಜಿನಲ್ಲಿ ಕನ್ನಡ ಸಂಘದ ಪ್ರಾರಂಭೋತ್ಸವವನ್ನು ಪೂ. ಮಾತಾಜಿಯವರು ನೆರವೇರಿಸಿದರು. ಕನ್ನಡ ಸಂಸ್ಕೃತಿ-ಸಾಹಿತ್ಯದ ಉಳಿವು ಬೆಳವಣಿಗೆ ಬಗೆ ಮನನೀಯವಾಗಿ ಭಾಷಣ ಮಾಡಿ, ನಾಡ ವೈದ್ಯಕೀಯ ಶಾಸ್ತ್ರದಲ್ಲಿ ಹುದುಗಿರುವ ವಿಜ್ಞಾನವನ್ನು ಅರಿತುಕೊಳ್ಳುವಲ್ಲಿ ಅಧ್ಯಯನ ಸಾಗಬೇಕೆಂದು ತಿಳಿಸಿದರು. ಸಾಹಿತಿಗಳಾದ ತ. ರಾ. ಸುಬ್ಬರಾಯರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಡಾ|| ಏಕಾಂತಪ್ಪನವರು ಮುಖ್ಯ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿದರು.

೨೦-೧೧-೭೮ ರಂದು ಕನ್ನಡ ಚಳುವಳಿಗಾರರು ಏರ್ಪಡಿಸಿದ್ದ ರಾಜ್ಯೋತ್ಸವ ಉತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

—ವರದಿ : **ಸೋದರಿ ಕುಮುದ**

ನುಡಿಮುತ್ತುಗಳು.

೧. ಧರ್ಮವಿಲ್ಲದ ಮನಷ್ಯನು ಚುಕ್ಕಾಣಿಯಿಲ್ಲದ ಹಡಗಿನಂತೆ.

ಗಾಂಧಿಜೀ.

೨. ಸಮಾಜಸೇವೆಯಲ್ಲಿ ನಿರತವಾಗಿರುವ ಒಂದು ಹಸ್ತವು ಭಗವಂತನ ಪ್ರಾರ್ಥನೆಯಲ್ಲಿ ನಿರತವಾಗಿರುವ ಎರಡು ಹಸ್ತಗಳಿಗಿಂತ ಮೇಲು.

ಸುಭಾಷಿತ.

೩. ಎಷ್ಟಿದೆಯೋ ಅಷ್ಟರಲ್ಲಿಯೇ ತೃಪ್ತಿಪಡಬೇಕು. ಆದರೆ ನಾವು ಹೇಗಿದ್ದೇವೋ ಹಾಗಿರುವುದರಲ್ಲೇ ತೃಪ್ತಿಪಡಬಾರದು.

ಸುಭಾಷಿತ.

(ಸಂಗ್ರಹ) **ಸುಶೀಲಾ.**

ಬೋಳುಬಸವನ ಬೊಂತೆ—೧೦.

ಮಿಣುಕು ತುಣುಕು_೧.

ನಗುವುದುಂ ನಗಿಸುವುದು ಮಾನವಗೆ ಸಹಜಗುಣ
ನಗದಿರಲು ನರನೊಮ್ಮೆ ಸಾಯ್ವವರೆಗೆ
ಜಗದೊಳಗೆ ಘೋರತರ ಪಾಪಕೃತ್ಯವನೆಸಗೆ
ಬಗೆಯದಿರಲಾರ ತಿಳಿ—ಬೋಳುಬಸವ ॥ ೧ ॥

ಲೇಸಿಸಿಂ ಬರೆದೋದಿ ವಿದ್ಯೆಯನ್ನಾರ್ಜಿಸದೆ
"ಸೀಸಿ" ಹೊಡೆಯುತ ತನ್ನ "ಪ್ರೊಫೆಸರ"ನ್ನು
"ಕ್ಲಾಸ" ಗಿಟ್ಟಿಸಿ "ಪಾಸು" ಮಾಡುವಾತನ ಹಿಡಿದು
ಪಾಶಕ್ಕೆ ಹಾಕು ನೀ_ಬೋಳುಬಸವ ॥ ೨ ॥

ಕಂಡವರ ಸೊತ್ತುಗಳನಪಹರಿಸಿ ಉಂಡುಂಡು
ಭಂಡತನದಲಿ ಅಲೆವ ಪೋಲಿಜನರ
ಖಂಡಿಸುತ ಜನರೆದುರು ಖಂಡರಿಸಿ ರುಂಡಗಳ
ಚೆಂಡಾಟವಾಡು ನೀ_ಬೋಳುಬಸವ ॥ ೩ ॥

ಕಂಡ ಹೊಲಗಳ ನುಗ್ಗಿ ತೊಂಡುಮೇವನು ಮೇದು
ಭಂಡತನದಲಿ ಕಾಲಕಳೆಯುತಿರುವವ
ಪುಂಡುಜನಗೂಳಿಗಳ ದಂಡಿಸುವ ಬಹುವಾಗಿ
ಕೊಂಡಿಗೆಯ ಸಲಿಹೇರು__ಬೋಳುಬಸವ ॥ ೪ ॥

ತಪ್ಪನೆಸಗುವುದೊಂದು ಸಹಜಗುಣ ಮಾನವಗೆ
ಒಪ್ಪುವನು ತಪ್ಪುಗಳ ಗುಣವಂತನು
ತಪ್ಪುಗೈದಿದ್ದರೂ ವಾದಿಸುವ ಕೊನೆತನಕ
ಒಪ್ಪೆಂದು ಕಡುಮೂರ್ಖ_ಬೋಳುಬಸವ ॥ ೫ ॥

ಪರವೀರ್ಯಪೌದಾರ್ಯ ಪ್ರಿಯವೆನಿಪ ಭಾಷಣವು
ಸರಿದೂಗಿ ಹಿತವಿದಹಿತವೆನುವರಿವು

ನರನೊಳೀ ನಾಲ್ಕುಗುಣ ಸಹಜವಾಗಿಲ್ಲದಿರೆ
ದೊರೆಯವಭ್ಯಾಸದಿಂ_ಬೋಳುಬಸವ ॥ ೬ ॥

ಮನಬಂದ ರೀತಿಯಲಿ ರಾಜ್ಯವಾಳುವ ಮಂತ್ರಿ
ತನಗೇನು ಎನುವಂಥ ಮೂಕಪ್ರಜೆಯು
ತನಗಿಷ್ಟಬಂದಂತೆ ನಡೆಯುವಧಿಕಾರಿಯಿರೆ
ಜನತಂತ್ರಕುಳಿವೆಲ್ಲಿ_ಬೋಳುಬಸವ ॥ ೭ ॥

ಮನೆಜಬಾಬ್ದಾರಿಯನು ಹೊರಲಿಚ್ಛಿಸದ ತಂದೆ
ತನಗಿಷ್ಟಬಂದಂತೆ ನಡೆವ ತಾಯಿ
ಮನಬಂದ ರೀತಿಯೊಳ್ ವ್ಯಯಗೈವ ಮಗನಿರಲು
ಮನೆಯ ಗತಿಯೆಂತಯ್ಯ_ಬೋಳುಬಸವ ॥ ೮ ॥

ಪಳತೆಲ್ಲ ಒಳಿತಲ್ಲ. ಪೊಸತೆಲ್ಲ ಪೊಳ್ಳಲ್ಲ
ಅಳೆಯಬೇಕವನು ಸರಿಯಾಗಿ ತೂಗಿ
ಒಳಹೊಕ್ಕು ನೋಡದಲೆ ಬರಿದೆ ಹಳಿಯುವ ಜನರ
ಅಳಿಬುದ್ಧಿಗೇನೆಂಬೆ_ಬೋಳುಬಸವ ॥ ೯ ॥

ಮಿಗೆ ಸುಭಿಕ್ಷವಿರತಿಖಡವ ತಾನೆನಿಸುವುದು
ತಗದ ನಾಚಿಕೆಗೇಡು ಪಂಭಾವಿಸೆ
ಜಗದಿ ದುರ್ಭಿಕ್ಷವಿರೆ ತಾನೋರ್ವ ಧನಿಕನೆನೆ
ಮಿಗಿಲು ನಾಚಿಕೆಗೇಡು_ಬೋಳುಬಸವ ॥ ೧೦ ॥

ರಾಜಕಾರಣದಲ್ಲಿ ವೈರ ಶಾಶ್ವತವಲ್ಲ
ನೈಜಸ್ನೇಹವು ಕೂಡ ಚಿರವಲ್ಲವು
ಮೋಜಿನಿಂ ಮೆರೆಯಲಿಕೆ ಬೇಕಾದ ಸಂಚು ತಾ
ಸಾಜದಿಂ ಶಾಶ್ವತವು_ಬೋಳುಬಸವ ॥ ೧೧ ॥

ಗುಣಗಳಿರೆ ನೂರಾರು ದೋಷವೊಂದನು ಕುರಿತು
ಗೊಣಗದಲೆ ಸಜ್ಜನರ ಗುಣವ ಗ್ರಹಿಸು
ತಣಿವನಕ ನಿನ್ನ ಮನ ಬೆಳ್ದಿಂಗಳೀಂಟದಲೆ
ಎಣಿಸಲೇಂ ಪೆರೆಕಲೆಯ_ಬೋಳುಬಸವ ॥ ೧೨ ॥

ಪಿ. ಬಸವಣ್ಣ

ಮಾತು ಜ್ಯೋತಿರ್ಲಿಂಗ

ಸಂಗ್ರಹ : **ಸೋದರಿ ಕುಮುದ**

೧. ಪ್ರಪಂಚದಲ್ಲಿ ಪ್ರತಿಯೊಬ್ಬ ಮಾನವನಿಗೂ ಕುಡಿಯಲು ಒಂದು ಲೋಟ ಹಾಲು ಸಿಕ್ಕರೆ ಗುಡಿಸಲುಗಳೆಲ್ಲಾ ಅರಮನೆಗಳಾಗಬಹುದು.

—ಸುಭಾಷಿತ

೨. ಅತ್ತು ಕಳೆವ ನೋವ ಹಾಡಿ ಕಳೆಯಲೇಕಯ್ಯಾ

—ಶರಣೆ ಸತ್ಯಕ್ಕ

೩. ಪುನರ್ಜನ್ಮದಲ್ಲಿ ನನಗೆ ನಂಬಿಕೆಯಿದೆ. ನಮ್ಮ ಹಿಂದಿನ ಜನ್ಮದಿಂದ ತೆಗೆದು ಕೊಂಡು ಬಂದ ಸಂಸ್ಕಾರಗಳ ಫಲವೇ ನಮ್ಮ ಎಲ್ಲ ಋಣಾನುಬಂಧಗಳು.

—ಗಾಂಧೀಜಿ

೪. ಭಕ್ತಿಯೆಂಬುದ ಮಾಡಬಾರದು ; ಕರಗಸದಂತೆ ಹೋಗುತ್ತ ಕೊಯ್ವುದು ಬರುತ್ತ ಕೊಯ್ವುದು!

—ಬಸವಣ್ಣ

೫. ಶಿವನಿಗಾಗಿ ಮಾಡುವ ಕಾಯಕವು ದೇಹದಿಂದ ಮಾಡುವ ಪ್ರಾರ್ಥನೆ.

—ಶ್ರೀಮಾತೆಯವರು

೬. ಸಿರಿಯು ಸತಿ-ಸುತಕಿಂತಲು ನಿಜವೆಂದು ನೆರೆನಂಬಿ ಬರಿದೆ ಮೈ ಮರೆತು ಕೆಡದಿರು ಮಂದ ಮನುಜಾ.

—ನಿಜಗುಣ ಶಿವಯೋಗಿ

೭. ಧ್ಯಾನದಲ್ಲಿ ಮಗ್ನರಾಗಲು ಮನಸ್ಸಿನ ಅಶಾಂತಿ ಅಳಿಯಬೇಕು. ಬುದ್ಧಿ ನಿಸ್ತರಂಗ ಸಮುದ್ರದಂತೆ ಶಾಂತವಾಗಬೇಕು. ಧ್ಯಾನದ ವೈಶಿಷ್ಟ್ಯವೆಂದರೆ ಜ್ಞೇಯ ವಸ್ತುವಿನ ಮೇಲೆ ಜ್ಞಾನದ ಪ್ರಭಾವವನ್ನು ಬೀರುವುದು.

—ಶ್ರೀ ಅರವಿಂದರು

೮. ಭಕ್ತಿಯಿಲ್ಲದ ಬೌದ್ಧಿಕತೆ ಮರುಭೂಮಿಯ ಸುಡುಬಿಸಿಲಿನಂತೆ ; ಬೌದ್ಧಿಕತೆಯಿಲ್ಲದ ಭಕ್ತಿ ಅಂಧಕಾರಮಯ ಗವಿಯಂತೆ. ತಲೆಯಲ್ಲಿ ಮೆರೆಯುವ ವಿಚಾರ ಭಾನುಕಿರಣವೊಡನೆ, ಹೃದಯದ ಭಕ್ತಿಗಂಗೆಯು ಬೆರೆದಾಗ ಅದು ಸುಂದರ ವ್ಯಕ್ತಿತ್ವ.

—ಜಗದ್ಗುರು ಮಾತಜಿ

೯. ಅಂತರಂಗ ಶುದ್ಧವಿಲ್ಲದವರ ಸಂಗವು ಸಿಂಗಿ ಕಾಳಕೂಟ ವಿಷವು.

—ಬಸವಣ್ಣ

೧೦. ವೀರತ್ವವಿಲ್ಲದ ವಿನಯ ಹೇಡಿತನ, ವಿನಯವಿಲ್ಲದ ವೀರತ್ವ ಕ್ರೂರತನ.

—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಜ್ಞಾನಮೂರ್ತಿ ಚನ್ನಬಸವಣ್ಣ

—ಎಸ್. ಬಸವರಾಜು ಎಂ.ಎ.

ಕಿರಿಯರಾದಡೇನು, ಹಿರಿಯರಾದಡೇನು ?
ಅರಿವಿಂಗೆ ಹಿರಿದು ಕಿರಿದುಂಟೆ ?
ಆದಿ ಅನಾದಿಯಿಲ್ಲದಂದು ಅಜಾಂಡ ಬ್ರಹ್ಮಾಂಡ ಕೋಟಿಗಳುದಯ
ವಾಗದಂದು,
ಗುಹೇಶ್ವರಲಿಂಗದಲ್ಲಿ 'ನೀನೊಬ್ಬನೆ ಮಹಾಜ್ಞಾನಿ' ಯೆಂಬುದು,
ಕಾಣಬಂದಿತ್ತು ನೋಡಾ ಚನ್ನಬಸವಣ್ಣಾ.

ಅನುಭವಮೇರುವಾದ, ಜ್ಞಾನವಾರಿಧಿಯಾದ ಅಲ್ಲಮಪ್ರಭುವು ಚನ್ನಬಸವಣ್ಣನ ಬಗ್ಗೆ ಹೃದಯ ತುಂಬಿ ಹಾಡಿರುವ ವಚನವಿದು. ಚನ್ನಬಸವಣ್ಣನ ವಯಸ್ಸು ಕಿರಿದಾದರೂ, ಅವನ ಜ್ಞಾನ-ಅನುಭವಗಳೇನೂ ಕಿರಿದಲ್ಲ. 'ಪ್ರಾಯ ಕೂಸಾದರೆ ಅಭಿಪ್ರಾಯವೂ ಕೂಸಾಗುತ್ತದೆಯೇ' ? ಚನ್ನಬಸವಣ್ಣ ವಯಸ್ಸಿನಲ್ಲಿ ಕಿರಿಯನಾದರೂ, ಅತ್ಯುನ್ನತವಾದ ಅನುಭಾವದ ನಿಲುವಿಗೇರಿ ಸಮಕಾಲೀನ ಹಿರಿಯ-ಕಿರಿಯ ಅನುಭಾವಿಗಳೆಲ್ಲರಿಂದಲೂ 'ನಮೋ ನಮೋ' ಎನ್ನಿಸಿ ಕೊಂಡವನು. 'ಷಟ್‌ಸ್ಥಲಸ್ಥಾಪನಾಚಾರ್ಯ', 'ಷಟ್‌ಸ್ಥಲಬ್ರಹ್ಮವಾದಿ', 'ಶಿವದತ್ತಾನುಭವಸಂಸಿದ್ಧ', 'ವೀರಶೈವಾಚಾರ್ಯ' 'ಸಮ್ಯಕ್‌ಜ್ಞಾನಿ' ಎಂದು ಮುಂತಾಗಿ ಶರಣರ ಹೊಗಳಿಕೆಗೆ ಪಾತ್ರನಾದವನು. ಎಲ್ಲ ವೀರಶೈವ ಕವಿಗಳ ಸಂಕೀರ್ತನೆಗೆ ಭಾಜನನಾದವನು.

ಚನ್ನಬಸವಣ್ಣ ಬಸವಣ್ಣನವರ ಅಕ್ಕ ನಾಗಲಾಂಬಿಕೆಯ ಮಗ. ಬಸವಣ್ಣನವರ ಸೋದರಳಿಯ ಹಾಗೂ ಶಿಷ್ಯ. ಆದರೆ ಗುರುವನ್ನೂ ಮೀರಿಸಿದ ಅರಿವು ಆತನದು. ಅವನ ಅರಿವು-ಅನುಭಾವಗಳ ಬಗ್ಗೆ ಬೆಟ್ಟದಷ್ಟು ತಿಳಿದುಬಂದರೂ, ಅವನ ಹುಟ್ಟು-ಬೆಳವಣಿಗೆಯ ಬಗ್ಗೆ ಅಷ್ಟೇನೂ ತಿಳಿದು ಬರುವುದಿಲ್ಲ. ತಿಳಿದು ಬರುವ ಅಷ್ಟಿಷ್ಟೂ ವಿಶ್ವಾಸ ದೂರವಾದುದು- ಪವಾಡಸದೃಶವಾದುದು.

ವೀರಶೈವ ಪುರಾಣಗಳ ಪ್ರಕಾರ ಚನ್ನಬಸವಣ್ಣ ಪ್ರಸಾದಜನಿತ. ಅಂದರೆ ಶರಣ ಪ್ರಸಾದದಿಂದ ಹುಟ್ಟಿದವನು. ಇಂತಹವರ ಪ್ರಸಾದದಿಂದ ಎಂಬ ಬಗೆಗೂ ಭಿನ್ನಾಭಿಪ್ರಾಯವಿದೆ. ಶರಣ ಡೋಹರ ಕಕ್ಕಯ್ಯನ ಪ್ರಸಾದದಿಂದ ಎಂದು ಪ್ರೌಢದೇವರಾಯನ

ಕಾವ್ಯದಿಂದಲೂ, ಶಿವನ ಪ್ರಸಾದದಿಂದ ಎಂದು ವಿರೂಪಾಕ್ಷಪಂಡಿತನ ಚನ್ನಬಸವ ಪುರಾಣದಿಂದಲೂ, ಬಸವಣ್ಣನವರ ಪ್ರಸಾದದಿಂದ ಎಂದು ಚಾಮರಸನ ಪ್ರಭುಲಿಂಗ ಲೀಲೆಯಿಂದಲೂ ತಿಳಿದುಬರುತ್ತದೆ. 'ಪರಶಿವನ ಚಿತ್‌ಶಕ್ತಿಯ ಅವತಾರ' ವೇ ಚನ್ನ ಬಸವಣ್ಣ ಎಂದು ಶೂನ್ಯ ಸಂಪಾದನೆಯಲ್ಲಿ ಹೇಳಿದೆ[1]. ಶರಣರನೇಕರು ಇವನನ್ನು 'ಷಣ್ಮುಖನ ಅವತಾರ' ವೆಂದಿದ್ದಾರೆ. ವೀರಶೈವ ಕವಿಗಳೆಲ್ಲ ತಮ್ಮ ತಮ್ಮ 'ಕಾವ್ಯ-ಪುರಾಣ' ಗಳಲ್ಲಿ ಶರಣರನ್ನೆಲ್ಲ ಅವತಾರಪುರುಷರೆಂದು ಕರೆದು, ಅವರ ಜನನಕ್ಕೆ ಮಹಿಮಂತಿಕೆಯ ಸಾಂಕೇತಿಕ ಅರ್ಥವನ್ನು ಕೊಡಲು ಪ್ರಯತ್ನಿಸಿದ್ದಾರೆ ಎಂಬುದು ಎಲ್ಲರೂ ಬಲ್ಲ ಸಂಗತಿ. ಕೇವಲ ಶರಣರ ಬಗ್ಗೆ ಮಾತ್ರವಲ್ಲ ಪ್ರಸಿದ್ಧಪ್ರವಾದಿಗಳ ಹಾಗೂ ಎಷ್ಟೋ ರಾಜವಂಶಗಳ ಮೂಲಪುರುಷರ ಬಗೆಗೂ ಇಂತಹವೇ ದಂತಕಥೆಗಳು ಪ್ರಚಲಿತವಾಗಿವೆ. ಆದರೆ ಸಿಂಗಿರಾಜ ಪುರಾಣದಲ್ಲಿ ನಾಗಲಾಂಬಿಕೆಯ ಪತಿ 'ಶಿವಸ್ವಾಮಿ' 'ಶಿವದೇವ' ಎಂದು ಹೇಳಿದೆ. ಬಸವಣ್ಣನವರು ಅತಿಮಾನವರಾದರೂ ಪ್ರಕೃತಿ ಧರ್ಮವನ್ನು ಅರಿತಿದ್ದರು, ವೈಜ್ಞಾನಿಕ ದೃಷ್ಟಿಯುಳ್ಳವರು. ಇದಕ್ಕೆ ಅವರ ಈ ವಚನವೇ ಸಾಕ್ಷಿ.

"ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ...............
ಕರ್ಣದಲಿ ಜನಿಸಿದವರುಂಟೆ ?"

ಆದ ಕಾರಣ ನಾಗಲಾಂಬಿಕೆಗೆ ಮದುವೆಯಾಗಿತ್ತೆಂದೂ, ಚನ್ನಬಸವಣ್ಣ ಎಲ್ಲ ಮಾನವರಂತೆ ನಾಗಲಾಂಬಿಕೆ ಶಿವದೇವರ ಸಂಗದಿಂದ ಹುಟ್ಟಿದ ಯೋನಿಸಂಭವನೆಂಬ ತೀರ್ಮಾನವೇ ಯುಕ್ತವಾದುದು.

ಚನ್ನಬಸವಣ್ಣ ಬಸವಣ್ಣನ 'ಕರುಣದ ಶಿಶು'. ಅವರ ಮಹಾಮನೆಯ ಲೌಕಿಕ ಹಾಗೂ ಆಧ್ಯಾತ್ಮಿಕ ಕೃಪಾವಲಯದಲ್ಲಿ ಬೆಳೆದು ನಿಂತ 'ಅರಿವಿನ ಕಲ್ಪತರು'. ಅವರ ಒಳ-ಹೊರಗಿನ ಮಂತ್ರಿ-ಕಾರ್ಯತಂತ್ರಿ. ಬಸವಣ್ಣ ಹೊತ್ತ ಧಾರ್ಮಿಕ ಹಾಗೂ ರಾಜಕೀಯ ಹೊಣೆಯಲ್ಲಿ ಚನ್ನಬಸವಣ್ಣನ ಪಾಲೂ ಇತ್ತು-ಅದು ಅನಿವಾರ್ಯವೂ ಆಗಿತ್ತು. ಬಸವಣ್ಣ 'ದಣ್ಣಾಯಕ'-ಚನ್ನಬಸವಣ್ಣ 'ಚಿಕ್ಕದಣ್ಣಾಯಕ'. ಚನ್ನಬಸವ ಪುರಾಣದಲ್ಲಿ ದೊರೆ ಬಿಜ್ಜಳನಿಗೆ ಚನ್ನಬಸವಣ್ಣ ರಾಜನೀತಿಯನ್ನು ಬೋಧಿಸಿದಂತೆ ತಿಳಿದು ಬರುತ್ತದೆ. ಅಂದಮೇಲೆ ಬಿಜ್ಜಳನಿಗೆ ಬಸವಣ್ಣನ ಬಗೆಗೆ ಎಷ್ಟು ಪ್ರೀತಿ-ಗೌರವವಿತ್ತೋ,

1. ಶೂನ್ಯಸಂಪಾದನೆಗಳು ನಾಲ್ಕು-ಅದರಲ್ಲಿ ಕೊನೆಯ ಎರಡಾದ ಗುಮ್ಮಳಾಪುರದ ಸಿದ್ಧಲಿಂಗಯತಿ ಮತ್ತು ಗೂಳೂರು ಸಿದ್ಧವೀರಣಾಚಾರ್ಯರ ಸಂಪಾದನೆಗಳಲ್ಲಿ ಈ ಅಭಿಪ್ರಾಯವಿದೆ.

ಚನ್ನಬಸವಣ್ಣನ ಬಗೆಗೂ ಅಷ್ಟೇ ಇದ್ದಿತೆಂದು ಭಾವಿಸಬಹುದು. ಬಸವಣ್ಣನವರ ಕೈ ಹಗುರಮಾಡಲು ದೊರೆಯ ಅನುಮತಿಯ ಮೇರೆಗೆ ಚನ್ನಬಸವಣ್ಣ ಹೆಗಲು ಕೊಟ್ಟಿರಬೇಕು. ಬಸವಣ್ಣನ ಅಧಿಕಾರಾವಧಿಯಲ್ಲಿಯೇ ಚನ್ನಬಸವಣ್ಣ 'ಚಿಕ್ಕದಣ್ಣಾಯಕ'ನೆಂದು ಕರೆಸಿಕೊಂಡಿರಬೇಕು. ಆದರೆ ಬಸವಣ್ಣನ ಬಳಿಕ, ಅವನ ಸ್ಥಾನದಲ್ಲಿ ನಿಂತು ರಾಜಕೀಯ ಹೊಣೆಯನ್ನು ನಿರ್ವಹಿಸಿದ್ದರಿಂದ 'ಚಿಕ್ಕದಣ್ಣಾಯಕ' ಎಂದು ಕರೆಯಲ್ಪಟ್ಟಿರಬೇಕು-ಎಂಬುದು ಅಷ್ಟು ಸೂಕ್ತವಾಗಿ ಕಾಣದು.

ಚನ್ನಬಸವಣ್ಣ ವೈರಾಗ್ಯಮೂರ್ತಿ. ಆದರೆ ಅವನದು ಅಭಾವವೈರಾಗ್ಯವಲ್ಲ-ಸ್ವಭಾವ ವೈರಾಗ್ಯ. ಅವನಿಗೆ ಸುಂದರರೂಪು, ಬಂಧುರ ಅಂಗಸೌಷ್ಠವ ಎಲ್ಲವೂ ಇದ್ದಂತೆ ತಿಳಿದುಬರುತ್ತದೆ. ಆದರೂ ಏರುಂಜವ್ವನದ ಹೊಸ್ತಿಲಲ್ಲಿದ್ದ ಚನ್ನಬಸವಣ್ಣ ಸಾವ ಕೆಡುವ ಅಂಗನೆಯರ 'ಅಂಗಸುಖ' ಕ್ಕೆ ಕಾತರಿಸಲಿಲ್ಲ-ತಳಮಳಿಸಲಿಲ್ಲ. ಸಾವಿಲ್ಲದ ಕೇಡಿಲ್ಲದ ನಿರಂಜನ 'ಲಿಂಗಸುಖ' ವನ್ನೇ ಬಯಸಿದ; ಅರಿವಿನ ಸಾಕಾರವಾಗಿ ಬೆಳೆದ; ಸಮರಸದ ಪರಿಪೂರ್ಣ ಸ್ಥಿತಿಯಲ್ಲಿ ನೆಲೆಗೊಂಡ.

ಇನ್ನು, ವಚನಕಾರರ ವಚನಪುಷ್ಪಗಳಿಂದ ಕಟ್ಟಿರುವ ಹೂಮಾಲೆಯಾದ ಶೂನ್ಯ ಸಂಪಾದನೆಯಿಂದ ಚನ್ನಬಸವಣ್ಣನ ಅರಿವು-ಅನುಭಾವಗಳು ಬಣ್ಣವೇರುವ ಸನ್ನಿವೇಶಗಳನ್ನು ನೋಡಬಹುದು.

ಪ್ರಭು ಸಿದ್ಧರಾಮನೊಂದಿಗೆ ಕಲ್ಯಾಣಕ್ಕೆ ಬಂದ ಸನ್ನಿವೇಶ: ಅಲ್ಲಮ ಸಿದ್ಧರಾಮನೊಂದಿಗೆ ಬಂದು, ಬಸವಣ್ಣನವರ ಮಹಾಮನೆಯ ಮುಂದೆ ನಿಂತಿದ್ದಾನೆ. ಇತ್ತ ಬಸವಣ್ಣನವರು ಲಿಂಗಾರ್ಚನೆಯಲ್ಲಿ ಮಗ್ನರಾಗಿದ್ದಾರೆ. ಶರಣರ ಆಗಮನವನ್ನು ಕಂಡ ಹಡಪದ ಅಪ್ಪಣ್ಣ, ಬಸವಣ್ಣನವರಿಗೆ ವಿಚಾರವನ್ನು ತಿಳಿಸುತ್ತಾನೆ. ಬಸವಣ್ಣ ಅವರನ್ನು ಕರೆತರಲು ಹೇಳುತ್ತಾನೆ. ಅಪ್ಪಣ್ಣ ಹೋಗಿ ಅವರನ್ನು ಆಹ್ವಾನಿಸುತ್ತಾನೆ. ಆದರೆ ಬಡಪೆಟ್ಟಿಗೆ ಬಗ್ಗದ ಪ್ರಭು, ಒಳಬರಲು ಒಪ್ಪುವುದಿಲ್ಲ. ಆಗ ಅಪ್ಪಣ್ಣ ಬಸವಣ್ಣನವರ ಬಳಿಗೆ ಮತ್ತೆ ಹೋಗಿ, ಪ್ರಭುವಿನಲ್ಲಿಗೆ ಮತ್ತೆ ಬಂದು ಅಣ್ಣನ ನಿರೂಪವನ್ನು ಪ್ರಭುವಿಗೆ ನಿವೇದಿಸುತ್ತಾನೆ. ಪ್ರಭು ಹುಸಿ ಮುನಿಸಿನಿಂದ,

"............ಬಂದವರಾರೆಂದರಿಯದೆ, ನಿಂದ ನಿಲವನರಿಯದೆ
ಕೆಮ್ಮನೆ ಅಹಂಕಾರವ ಹೊತ್ತು ಕೊಂಡಿಪ್ಪರ
ನಮ್ಮ ಗುಹೇಶ್ವರಲಿಂಗನೊಲ್ಲ ನೋಡಾ"

—ಎನ್ನುತ್ತಾನೆ. ಅಪ್ಪಣ್ಣ

ಬಸವಣ್ಣನಲ್ಲಿಗೆ ಮರಳಿ ಬಂದು ತನ್ನ ಅಸಹಾಯಕತೆಯನ್ನು ಬಿನ್ನಹವಮಾಡುತ್ತಾನೆ. ಅಷ್ಟು ಹೊತ್ತಿಗೆ ಅಲ್ಲಿಗೆ ಚನ್ನಬಸವಣ್ಣ ಬರುತ್ತಾನೆ. ಸೂಕ್ಷ್ಮಮತಿಯಾದ ಅವನಿಗೆ ಸನ್ನಿವೇಶದ ಅರಿವಾಗುತ್ತದೆ. ಆಗ ಬಸವಣ್ಣನಿಗೆ ಬುದ್ಧಿ ಹೇಳುತ್ತಾನೆ.

"...........ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನೆಂದು
ನಂಬಿದ ನಂಬುಗೆ
ಬಂದ ಶರಣರ ನಿಲವನರಿಯದಿದ್ದಲ್ಲಿ ತಪ್ಪಿತ್ತು, ನೋಡಾ ಗುರುವೆ
ಸಂಗಮನಾಥ ಮನೆಗೆ ಅಂಗವಿಡಿದು ನಡೆದು ಬಂದಡೆ
ದಿಮ್ಮನೆ ಇದಿರೆದ್ದು ವಂದಿಸಬೇಕು ನೋಡಯ್ಯಾ
ಕೂಡಲ ಚೆನ್ನ ಸಂಗನ ಶರಣ ಪ್ರಭುದೇವರೂ ಸಿದ್ಧರಾಮಯ್ಯದೇವರೂ
ಬಂದು ಬಾಗಿಲಲ್ಲಿ ಇರಲು,
'ಕಣ್ಣರಿಯದಿದ್ದಡೂ ಕರುಳರಿಯಬೇಡವೆ ? ಸಂಗನ ಬಸವಣ್ಣಾ.'

ಚನ್ನಬಸವಣ್ಣನ ಮಾತುಗಳಿಂದ ಬಸವಣ್ಣನ ಮರವೆಯ ತೆರೆ ಸರಿಯುತ್ತದೆ. ಅರಿವು ಮೂಡುತ್ತದೆ. ಮುಂದೆ ಬಸವಣ್ಣನನ್ನು ಒರೆದು ನೋಡಿದರೂ ಮುನಿಸಾರದೇ ಇರುವ ಪ್ರಭುವನ್ನು ಕುರಿತು ಚನ್ನಬಸವಣ್ಣ.

"...........ಸಂಗನ ಬಸವಣ್ಣನೊಳಗೆ ನಿಮ್ಮೊಳಗೆ ಭೇದವಿಲ್ಲೆಂಬುದ
ನೀವೆ ಅರಿದು
ಮತ್ತೆ ಬಾರವೆಂಬುದುಚಿತವೆ ?
ಕೂಡಲ ಚೆನ್ನ ಸಂಗನ ಶರಣ ಸಂಗನ ಬಸವಣ್ಣನೆ ನಿಮ್ಮ ಪ್ರಾಣವಾಗಿರಲು
ಇನ್ನಾರೊಡನೆ ಮುನಿವಿರಿ ? ಕೃಪೆಯ ಮಾಡಾಪ್ರಭುವೆ"

—ಎಂದು ಕೇಳಿಕೊಳ್ಳುತ್ತಾನೆ. ಪ್ರಭುವಿನ ಮನದ ಮುನಿಸನ್ನು ನೀಗಿಸುತ್ತಾನೆ.

ಶೂನ್ಯ ಸಂಪಾದನೆಯಲ್ಲಿ ಇದೊಂದು ಶೃಂಗಸನ್ನಿವೇಶ. ಭಕ್ತಿ-ಜ್ಞಾನ-ಕರ್ಮಗಳ ತ್ರಿವೇಣಿ ಸಂಗಮ. ಜ್ಞಾನಮೇರುವಾದ ಪ್ರಭು, ಭಕ್ತಿಭಂಡಾರಿಯಾದ ಬಸವಣ್ಣ, ಕರ್ಮಯೋಗಿಯಾದ ಸಿದ್ಧರಾಮ ಹಾಗೂ ಇನ್ನೂ ಅನೇಕ ಹಿರಿಯ ಕಿರಿಯ ಅನುಭಾವಿಗಳ ಸುಂದರ ಸಮಾಗಮ. ಶರಣಧರ್ಮದ ಇತಿಹಾಸದ ಮಹಾ ಪ್ರಸ್ಥಾನ. ಇಂತಹ ಅಪೂರ್ವ ಸನ್ನಿವೇಶ ವಿರಸದ ತುತ್ತತುದಿಗೆ ಬಂದಾಗ, ಅರಿವಿನ ಸಾಕಾರವಾದ ಚನ್ನಬಸವಣ್ಣನ ಪ್ರವೇಶವಾಗುತ್ತದೆ. ಎಲ್ಲವೂ ಸುಗಮವಾಗುತ್ತದೆ. ಚನ್ನಬಸವಣ್ಣನ ಅರಿವು ಪ್ರಕಾಶಕ್ಕೆ ಬರುತ್ತದೆ. ಬಸವಣ್ಣನ ಭಕ್ತಿ ಮತ್ತಷ್ಟು ಬಣ್ಣವೇರುತ್ತದೆ.

ಸಿದ್ಧರಾಮನ ಗುರುಕರುಣೆಯ ಅಥವಾ ಇಷ್ಟಲಿಂಗ ಪ್ರಾಪ್ತಿಯ ಸನ್ನಿವೇಶ: ಸಿದ್ಧರಾಮ ಕರ್ಮಯೋಗಿ. "ಸಾಕಾರದಲ್ಲಿ ನಿಷ್ಠೆ ಭೂತಂಗಳೊಳಗನುಕಂಪೆ ತಾನೆ ಪರಬೊಮ್ಮ" ಎಂಬುದು ಅವನ ಬಾಳಿನ ಸೂತ್ರ. ಅವನ ಅರಿವಿನ ಕಣ್ಣನ್ನು ಪೂರ್ಣವಾಗಿ ತೆರೆಸಲು, ಅವನ ಸಾಧನೆಗೆ ಸಮಗ್ರತೆಯನ್ನು ಕೊಡಲು ಪ್ರಭು ಕಲ್ಯಾಣಕ್ಕೆ ಕರೆತಂದಿದ್ದಾನೆ. ಒಮ್ಮೆ ಅನುಭವ ಮಂಟಪದಲ್ಲಿ ಚನ್ನಬಸವಣ್ಣನಿಗೂ, ಮಡಿವಾಳ ಮಾಚಯ್ಯನಿಗೂ ಅನುಭಾವಗೋಷ್ಠಿ ನಡೆಯುತ್ತಿರಲು, ಸಿದ್ಧರಾಮ ಅದರಲ್ಲಿ ಪಾಲ್ಗೊಂಡು ಹೀಗೆ ನುಡಿಯುತ್ತಾನೆ.

"ಬೆಳಗು ಬೆಳಗು ಹಳಚುವಲ್ಲಿ ಕತ್ತಲೆ ಉಳಿವುದೆ ಅಯ್ಯಾ ?
ಶರಣರ್ಗೆ ಶರಣರು ಮಹಾನುಭಾವಗೋಷ್ಠಿಯ ಮಾಡುವಲ್ಲಿ
ಸಂಗದೊಳಗಿದ್ದವರ ಅಜ್ಞಾನವಳಿದು ನಿಜವನೈದುವರಯ್ಯಾ
ನಿಮ್ಮ ಮಹಾನುಭಾವದ ಸೆರಗಿನೊಳಗಿದ್ದು ನಾನು ಪರಮ ಸುಖಿಯಾಗಿ
ಮಡಿವಾಳನ ಪಾದದಲ್ಲಿ ಮಗ್ನನಾದೆನು
ಕಾಣಾ ಪ್ರಭುವೆ ಕಪಿಲ ಸಿದ್ಧಮಲ್ಲಿಕಾರ್ಜುನ."

ಸಿದ್ಧರಾಮನ ಮಾತಿಗೆ ಚನ್ನಬಸವಣ್ಣ, "ಅಂಗದ ಮೇಲೆ ಲಿಂಗವಿಲ್ಲದವನು ಶರಣನಾಗಲು ಸಾಧ್ಯವಿಲ್ಲ--ಅಂತಹವನಿಗೆ ಪರತತ್ತ್ವ ನಿಲುಕದು" ಎನ್ನುತ್ತಾನೆ. ಪ್ರತಿಯಾಗಿ ಸಿದ್ಧರಾಮ, "ಎನ್ನ ಕಾಯವೆ ಬಸವಣ್ಣ, ಎನ್ನ ಪ್ರಾಣಲಿಂಗವೆ ಪ್ರಭುದೇವರು ಕಪಿಲ ಸಿದ್ಧಮಲ್ಲಿಕಾರ್ಜುನನಲ್ಲಿ ಒಳಹೊರಗೆಂಬುದಿಲ್ಲ ಕಾಣಾ ಚನ್ನಬಸವಣ್ಣಾ"–ಎನ್ನುತ್ತಾನೆ. ಸಿದ್ಧರಾಮ-ಚನ್ನಬಸವಣ್ಣ ಇವರುಗಳ ಮಾತು ಕತೆ ಹೀಗೆ ಮುಂದುವರೆದಿರಲು, ಪ್ರಭು ಮಧ್ಯೆ ಪ್ರವೇಶಿಸಿ ಚನ್ನಬಸವಣ್ಣನ ಅರಿವನ್ನು ಒರೆದು ನೋಡುವ ಸಲುವಾಗಿ "ಆಕಾಶವನ್ನು ಏರುವವನಿಗೆ ಏಣಿಯ ಅವಶ್ಯಕತೆಯೇನಿದೆ ? ಸಮುದ್ರವನ್ನು ದಾಟಬಲ್ಲವನಿಗೆ ಹರಿಗೋಲ ಹಂಗೇಕೆ ? ....ಗುಹೇಶ್ವರ ಲಿಂಗದಲ್ಲಿ ಬೆರೆತಿರುವ ಸಿದ್ಧರಾಮಯ್ಯದೇವರಿಗೆ ಲಿಂಗದ ಅವಶ್ಯಕತೆ ಏನಿದೆ ?–ಎಂಬುದಾಗಿ ಚನ್ನಬಸವಣ್ಣನನ್ನು ಪ್ರಶ್ನಿಸಿ, ಸಿದ್ಧರಾಮನ ನಿಲುವನ್ನೇ ಸಮರ್ಥಿಸಿಕೊಳ್ಳುತ್ತಾನೆ. ಪ್ರಭುವಿನ ಮಾತಿಗೆ ಚನ್ನಬಸವಣ್ಣ "ಆಕಾಶದಲ್ಲಿ ಆಡುವ ಪಟಕ್ಕಾದರೂ ಮೂಲಸೂತ್ರವಿರಬೇಕು. ಶೂರನಾದರೂ ಕಾದಲು ಪೂರ್ವಾಭ್ಯಾಸಬೇಕು. ಭೂಮಿಯಿಲ್ಲದೆ ಬಂಡಿ ನಡೆಯಲಾರದು. 'ಅಂಗಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗವಾಗಬಾರದು' "– ಎಂದು ಹೇಳುತ್ತಾನೆ. ಮುಂದುವರಿದು,

"ಸತಿಸಂಗವತಿ ಸುಖವೆಂದರಿದಡೇನು, ಗಣ ಸಾಕ್ಷಿಯಾಗಿ ವಿವಾಹವಾಗ
ದನ್ನಕ್ಕರ ?

ಕಣ್ಣು ಕಾಂಬುದೆಂದಡೆ, ಕತ್ತಲೆಯಲ್ಲಿ ಕಾಂಬುದೇ ದೀಪವಿಲ್ಲದನ್ನಕ್ಕರ ?
ಸೂರ್ಯನ ಪ್ರಕಾಶದಿಂದ ಕಂಡು, ತಾನೆ ಕಂಡೆನೆಂಬ ಜಗದ ನಾಣ್ನುಡಿ
ಯಂತಾಯಿತ್ತು !

ಅಂಗವಬಿಟ್ಟು ಆತ್ಮನುಂಟೆ ? ಶಕ್ತಿಯಬಿಟ್ಟು ಶಿವನುಂಟೆ ?
ಇದು ಕಾರಣ ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯವಿರಲು,
ಇಷ್ಟ-ಪ್ರಾಣ-ಭಾವವೆಂಬ ತ್ರಿವಿಧ ಲಿಂಗ ಸಂಬಂಧ ಬೇಡವೆಂದಡೆ.
ಅಸಂಖ್ಯಾತ ಪ್ರಮಥ ಗಣಂಗಳೊಪ್ಪುವರೇ ? ಇದು ಕಾರಣ
ಕೂಡಲ ಚನ್ನಸಂಗಯ್ಯನಲ್ಲಿ ಇಷ್ಟಲಿಂಗ ಸಂಬಂಧವಿಲ್ಲದವರ
ಮುಖವ ನೋಡಲಾಗದಯ್ಯ ಪ್ರಭುವೇ.

ಎಂದು ಇಷ್ಟಲಿಂಗದ ಮಹತ್ವವನ್ನು ಹೇಳುತ್ತಾನೆ. ಚನ್ನಬಸವಣ್ಣನ ಮಾತಿಗೆ ಶರಣರೆಲ್ಲಾ ದನಿಗೂಡಿಸುತ್ತಾರೆ. ಕೊನೆಗೆ "ಗುಹೇಶ್ವರ ಲಿಂಗದಲ್ಲಿ ಇಷ್ಟಲಿಂಗ ಸಂಬಂಧಿಯಾದಲ್ಲದೆ ಪ್ರಾಣಲಿಂಗ ಸಂಬಂಧವಾಗಲಾರದೆಂದು" ಪ್ರಭುವೂ ಒಪ್ಪುತ್ತಾನೆ. ಚನ್ನಬಸವಣ್ಣನ ಮಾತುಗಳು ಸಿದ್ಧರಾಮನಿಗೂ ಒಳತಾಗಿ 'ಶುದ್ಧವನರಿದೆ ಚನ್ನಬಸವಣ್ಣಾ, ನಿಮ್ಮಿಂದ. ಸಿದ್ಧವನರಿದೆ ಚನ್ನಬಸವಣ್ಣಾ, ನಿಮ್ಮಿಂದ. ಪ್ರಸಿದ್ಧವನರಿದೆ ಚನ್ನಬಸವಣ್ಣಾ, ನಿಮ್ಮಿಂದ. ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯಾ, ಚನ್ನಬಸವಣ್ಣ ಗುರುವಾಗಿ ಬಂದು ಎನ್ನ ಜನ್ಮ ಕರ್ಮದ ನಿವೃತ್ತಿಯ ಮಾಡಿದನಯ್ಯಾ"—ಎಂದು ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನ್ನುತ್ತಾನೆ. ಮುಂದೆ ಸಿದ್ಧರಾಮನಿಗೆ ಚನ್ನಬಸವಣ್ಣನಿಂದ ಇಷ್ಟಲಿಂಗ ಪ್ರಾಪ್ತಿಯಾಗುತ್ತದೆ. ಪ್ರಭು ಚನ್ನಬಸವಣ್ಣನ ಪರಿಪೂರ್ಣ ಜ್ಞಾನಕ್ಕೆ ಬೆರಗಾಗಿ ಹೃದಯ ತುಂಬಿ ಹೊಗಳುತ್ತಾನೆ.

ಪ್ರಭುವಿನ ಆರೋಗಣೆಯ ಸನ್ನಿವೇಶ: ಪ್ರಭು ಸಿದ್ಧರಾಮನೊಂದಿಗೆ ಕಲ್ಯಾಣಕ್ಕೆ ಬಂದವನು ಕೆಲವು ದಿನಗಳ ಬಳಿಕ ಶರಣರಿಗೆ ಮತ್ತೆ ಬರುವುದಾಗಿ ಆಶ್ವಾಸನೆ ನೀಡಿ ಲೋಕ ಸಂಚಾರಕ್ಕೆ ನಡೆಯುತ್ತಾನೆ. ಇತ್ತ "ಶೂನ್ಯ ಸಿಂಹಾಸನವ ರಚಿಸಿ ಬಸವರಾಜದೇವರು ಪ್ರಭುದೇವರ ಬರವನ್ನು" ನಿರೀಕ್ಷಿಸುತ್ತಿರುತ್ತಾರೆ. ಪ್ರಭು ಈ ಮಧ್ಯೆ ಕಲ್ಯಾಣದ ಶರಣಸಮೂಹವನ್ನು ಅಗಲಿದ್ದ ಕಾಲ 'ಹನ್ನೆರಡು ವರ್ಷ' ಎಂದು ಬಸವಣ್ಣನವರ ವಚನವೊಂದರಿಂದ ತಿಳಿದು ಬರುತ್ತದೆ.[2] ಈ ಕಾಲದಲ್ಲಿ ಅನುಭವ ಮಂಟಪದ ಶರಣರ ಶಿವಾನುಭವ ಕಲಾಪಗಳೆಲ್ಲವೂ ಚನ್ನಬಸವಣ್ಣನ ನಿರ್ದೇಶನದಲ್ಲಿಯೇ ನಡೆಯುತ್ತಿದ್ದಂತೆ ತಿಳಿದುಬರುತ್ತದೆ.[3] ಪ್ರಭುವಿನ ಪುನರಾಗಮನದ ಸನ್ನಿವೇಶ—ಚನ್ನಬಸವಣ್ಣನ ಅರಿವು ಮತ್ತಷ್ಟು ಬಣ್ಣವೇರುವ ಸನ್ನಿವೇಶ. ಪ್ರಭು ಮುನ್ನಿನಂತಲ್ಲದೆ ಮರುಳಾಟನಾಡುತ್ತಾ ವಿಕೃತವೇಷದಿಂದ ಕಲ್ಯಾಣಕ್ಕೆ ಹಿಂದಿರುಗಿದ್ದಾನೆ, ಬಿಸಿ ಬಿದ್ದಿದ್ದ ಬಸವಣ್ಣನ ಮನಸ್ಸು ಅಲ್ಲಮನನ್ನು ಆ ಸ್ಥಿತಿಯಲ್ಲಿ ತಕ್ಷಣ ಗುರುತಿಸುತ್ತದೆ. ಶರಣರೆಲ್ಲರೂ ಸಡಗರಿಸಿ ಪ್ರಭುವನ್ನು ಸಂಭ್ರಮದಿಂದ ಸ್ವಾಗತಿಸುತ್ತಾರೆ. ಮಹಾಮನೆಗೆ ಕರೆತಂದು 'ಶೂನ್ಯ ಸಿಂಹಾಸನ'ದ ಮೇಲೆ ಕುಳ್ಳಿರಿಸುತ್ತಾರೆ. ಪ್ರಭುವಿನ ಪುನರಾಗಮನದ ಆನಂದದಲ್ಲಿ ಬಸವಣ್ಣ ತನ್ನ ನಿತ್ಯದಾಸೋಹವನ್ನೇ ಮರೆಯುತ್ತಾನೆ. ಬಂದ ಜಂಗಮರೆಲ್ಲಾ ಕೋಪದಿಂದ ಹಿಂದಿರುಗುತ್ತಾರೆ. ಆಗ ಬಸವಣ್ಣ ಕಳವಳಿಸುತ್ತಾನೆ. ಪ್ರಭು ಅವನನ್ನು ಸಮಾಧಾನ ಪಡಿಸುತ್ತಾ :

"...........ಒಂದು ನಿಲವಿಂಗೆ ಪರಿಣಾಮವ ಮಾಡಬಲ್ಲಡೆ,
ನಿನ್ನ ಲಕ್ಷದಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ
ಪರಿಣಾಮವಹುದು ನೋಡಾ........" —ಎನ್ನುತ್ತಾನೆ.

ಅದಕ್ಕೆ ಬಸವಣ್ಣ "ನಿನ್ನೊಳಗೆ ಅನಂತ ಸುಳುಹು ಅಡಗಿಹವು. ನಿಮಗೆ ಮಾಡಿದ ಸುಯಿಧಾನವ ನಿಮಗೆ ನೀಡುವೆನು, ಅವಧರಿಸಬೇಕಯ್ಯಾ"-ಎಂದು ಪ್ರಭುವನ್ನು ಆರೋಗಣೆಗೆ ಆಹ್ವಾನಿಸುತ್ತಾನೆ. ಆಗ ಪ್ರಭು, "ಅಮೃತದ ಪುತ್ಥಳಿ ಹಾಲು ಕುಡಿಯುತ್ತದೆಯೇ ? ಹಾಗೆಯೇ ಗುಹೇಶ್ವರ ಲಿಂಗಕ್ಕೆ ಊಟನೆಂಬುದಿಲ್ಲ"-ಎಂದು ಹೇಳಿ; ಮುಂದುವರಿದು-

"....ಉಂಡೆನೆಂಬ ಬಯಕೆಯಿಲ್ಲ, ಒಲ್ಲೆನೆಂಬ ವೈರಾಗ್ಯವಿಲ್ಲ
ಇದು ಸ್ವಭಾವ ತೃಪ್ತಿಯೊಳಗೆ ಅಡಗಿತ್ತು.
ಇದು ಕಾರಣ,
ನಮ್ಮ ಗುಹೇಶ್ವರಲಿಂಗಕ್ಕೆ ಆರೋಗಣೆಯಿಲ್ಲ
ಕಾಣಾ ಸಂಗನ ಬಸವಣ್ಣಾ" —ಎನ್ನುತ್ತಾನೆ. ಆದರೂ

ಬಸವಣ್ಣನ ಒತ್ತಾಯಕ್ಕೆ ಮಣಿದು ಲೀಲಾ ವಿನೋದವನ್ನು ಕೈಗೊಂಡು ಆರೋಗಣೆಗೆ ಸಿದ್ಧನಾಗುತ್ತಾನೆ. ಮಾಡಿದ್ದ ಭಕ್ಷ್ಯ-ಭೋಜ್ಯಗಳೆಲ್ಲಾ ಬರಿದಾಗುತ್ತವೆ. ಆದರೂ ಅಲ್ಲಮನ ಹಸಿವು ತೀರದೇ ಹೋಗುತ್ತದೆ. "ಸ್ವಾಮಿಯ ಹಸಿವು ಲೋಕಕ್ಕೆ ಹೊಸತು !"-ಎಂದು ಬಸವಣ್ಣ ಬೆರಗಾಗುತ್ತಾನೆ. ಆದರೂ ಬಸವಣ್ಣ ಭೌತಿಕ ಭಕ್ಷ್ಯ-ಭೋಜ್ಯಗಳಿಂದ ಪ್ರಭುವನ್ನು ತೃಪ್ತಿಪಡಿಸುವ ತನ್ನ ಪ್ರಯತ್ನವನ್ನು ಮುಂದುವರಿಸುತ್ತಾನೆ. ಆಗ ಚನ್ನಬಸವಣ್ಣ,

---

2. "ಹಮ್ಮಿ ಹನ್ನೆರಡು ಸಂವತ್ಸರ ಹಿಂದಾಯಿತ್ತು.. ಬಾಯಿನದುಂಡೆಗೆ ತೋಯನಟ್ಟಂತಾಯಿತ್ತು.

3. ಚನ್ನಬಸವಣ್ಣ—ಓ. ಎನ್ ಲಿಂಗಣ್ಣಯ್ಯ.

"...........ನಿತ್ಯ ತೃಪ್ತನುಣ ಕಲಿತನೆಂದಡೆ,
ಆರ್ಪಿಸಲುಂಟೆ ದೇವಾ ಮತ್ತೊಂದನ್ನು?
ಕೂಡಲ ಚನ್ನಸಂಗಮದೇವಾ,
'ನಿಮ್ಮ ಶರಣ ಬಸವಣ್ಣ ಬೋನ, ನಾನೆ ಪದಾರ್ಥ !'
ಸುಚಿತ್ತದಿಂದ ಆರೋಗಿಸಯ್ಯಾ ಪ್ರಭುವೆ"–ಎನ್ನುತ್ತಾನೆ.

ಚನ್ನಬಸವಣ್ಣನ 'ಅರಿವಿನ ನೈವೇದ್ಯ' ಕ್ಕೆ ಪ್ರಭು ತೃಪ್ತನಾಗುತ್ತಾನೆ.

"ಬಸವಾ ನಿನಗೇಳು ಜನ್ಮ, ಎನಗೆ ನಾಲ್ಕು ಜನ್ಮ,
ಚನ್ನಬಸವಣ್ಣಂಗೊಂದು ಜನ್ಮ.

ನೀ ಗುರುವೆನಿಸಿಕೊಳಬೇಡ
ನಾ ಜಂಗಮವೆನಿಸಿಕೊಳಬೇಡ

ನಾವಿಬ್ಬರೂ ಚನ್ನಬಸವಣ್ಣನ ಒಕ್ಕ ಮಿಕ್ಕ ಪ್ರಸಾದವ ಕೊಳ್ಳದಡೆ
ನಮ್ಮ ಗುಹೇಶ್ವರ ಸಾಕ್ಷಿಯಾಗಿ ಭವಂ ನಾಸ್ತಿಯಾಗದು
ಕಾಣಾ ಸಂಗನ ಬಸವಣ್ಣಾ" —ಎಂದು ಪ್ರಭು

ಚನ್ನಬಸವಣ್ಣನ ಮಹತ್ತನ್ನು ಕೈವಾರಿಸುತ್ತಾನೆ. ಬಸವಣ್ಣ ಚನ್ನಬಸವಣ್ಣನ ಅರಿವಿನ ಔನ್ನತ್ಯಕ್ಕೆ 'ನಮೋ ನಮೋ' ಎನ್ನುತ್ತಾನೆ.

ಮೇಲೆ ನಿರೂಪಿಸಿದ ಪ್ರಸಂಗಗಳಲ್ಲಿ ಮಾತ್ರವಲ್ಲ, ಶೂನ್ಯಸಂಪಾನೆಯುದ್ದಕ್ಕೂ ಚನ್ನಬಸವಣ್ಣನ ಪಾತ್ರ ಓತ-ಪ್ರೋತವಾಗಿ ಬರುತ್ತದೆ. ನುಲಿಯಚಂದಯ್ಯನೆಂಬ ಶರಣನಿಗೆ ಪ್ರಭು ಚನ್ನಬಸವಣ್ಣನಿಂದ ಇಷ್ಟಲಿಂಗದ ಮಹತ್ವವನ್ನು ಹೇಳಿಸುವ ಪ್ರಸಂಗವೂ ಚನ್ನಬಸವಣ್ಣನ ಅರಿವಿನ ಹಿರಿತನಕ್ಕೆ ಸಾಕ್ಷಿಯಾಗಿದೆ. ತಾತ್ಪೂರ್ತಿಕವಾಗಿ, ಚನ್ನಬಸವಣ್ಣನ ಜ್ಞಾನದಿವಾಕರ ಪ್ರಭೆ ಶರಣ ಜಗತ್ತನ್ನು ಬೆಳಗಿದೆ. ಕಿರಿಯ ವಯಸ್ಸಿನ ಆ ಹಿರಿಯ ಚೇತನದ ಅನುಭಾವದ ರಸಗಂಗೆ, ಹಿರಿಯ-ಕಿರಿಯ ಅನುಭಾವಿಗಳೆಲ್ಲರ ಹೃದಯಗಳನ್ನು ತಣಿಸಿದೆ. ವಿದ್ವಾಂಸರೊಬ್ಬರ[4] ಅಭಿಪ್ರಾಯದಂತೆ ಚನ್ನಬಸವಣ್ಣ ಒಂದರ್ಥದಲ್ಲಿ 'ಪೀರಶೈವ ಮನು'.

ಚನ್ನಬಸವಣ್ಣ ಹಿರಿಯ ಅನುಭಾವಿಯಾಗಿದ್ದಂತೆ, ಉತ್ತಮ ವಚನಕಾರನೂ ಹೌದು. ಇದುವರೆಗೆ ಆತನ ಸುಮಾರು ಒಂದೂವರೆಸಾವಿರ ವಚನಗಳು ಉಪಲಬ್ಧ

4. ಎಂ. ಚಿದಾನಂದಮೂರ್ತಿ, "ವಚನ ಸಾಹಿತ್ಯ 'ಚೆನ್ನಬಸವಣ್ಣ'

ವಾಗಿವೆ. ಇವನ ವಚನಗಳಲ್ಲಿ ಕೆಲವು ಅತಿ ಸಂಕ್ಷಿಪ್ತವಾಗಿದ್ದರೆ, ಮತ್ತೆ ಕೆಲವು ಅತಿ ದೀರ್ಘವಾಗಿವೆ. "ಇವನಲ್ಲಿ ಸಂಸ್ಕೃತ ಶ್ಲೋಕಗಳ ಉದ್ಧರಣೆ ಹೆಚ್ಚು. ಇವನ ಭಾಷೆಯಲ್ಲಿಯೂ ಲಾಲಿತ್ಯಸಾಲದು. ಬಸವಣ್ಣನವರ ಸೂಕ್ಷ್ಮಸಂವೇದನಾಶೀಲತೆಯಾಗಲಿ, ಅಲ್ಲಮನ ನಿಗೂಢತೆ ಔನ್ನತ್ಯಗಳಾಗಲಿ ಇವನಲ್ಲಿ ತೋರವು. ವಚನಕಾರರಲ್ಲಿ ಬಸವಣ್ಣನ ತೀವ್ರ ಪ್ರಭಾವಕ್ಕೆ ಒಳಗಾಗಿರುವ ಇವನಲ್ಲಿ ನೂರಾರು ಕಡೆ ಬಸವನನ್ನು ನೆನಪಿಗೆ ತರುವ ಮಾತುಗಳು ದೊರಕುತ್ತವೆ".[5]

ಚನ್ನಬಸವಣ್ಣನ ವಚನಗಳಲ್ಲಿ ಕಾವ್ಯಗುಣ ಕಡಿಮೆ ಎಂಬ ಆಕ್ಷೇಪವೂ ಇದೆ. ಆದರೂ ಅನೇಕ ವಚನ ಹಾಗೂ ವಚನ ಭಾಗಗಳಲ್ಲಿ ಕಾವ್ಯದ ಸೊಗಸನ್ನು ಕಾಣಬಹುದು.

"ಪತಿವ್ರತೆಯಾದಡೆ ಅನ್ಯಪುರುಷರ ಸಂಗವೇತಕ್ಕೆ ? ಲಿಂಗಸಂಗಿ
ಯಾದಡೆ ಅನ್ಯಲಿಂಗದ ಸಂಗವೇತಕ್ಕೆ ? ಕಂಡಕಂಡವರ ಹಿಂದೆ
ಹರಿವ ಚಾಂಡಾಲಗಿತ್ತಿಯಂತೆ ಒಬ್ಬರ ಕೈವಿಡಿದು ಒಬ್ಬರಿಗೆ ಮಾತು
ಗೊಟ್ಟು ಮತ್ತೊಬ್ಬರಿಗೆ ಸನ್ನೆಯ ಮಾಡುವ ಜೋಸರಗಿತ್ತಿಯಂತೆ ;
ಪ್ರಾಣಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಹರಸಿ, ಪೊಡಮಡುವ ಕೋಟಲೆ
ಗೊಳಲೇತಕ್ಕೆ ?
ಇದು ಕಾರಣ, ಕೂಡಲಚೆನ್ನಸಂಗಯ್ಯಾ, ಇಂತಪ್ಪ ಪಾಪಿಗಳನೆನಗೆ
ತೋರಿಸದಿರಯ್ಯಾ !"

ಇಂತಹ ವಚನಗಳಲ್ಲಿ ಕಾವ್ಯರಸ ಜಿನುಗುವುದನ್ನು ಕಾಣಬಹುದು. ಚನ್ನಬಸವಣ್ಣನ ಕೆಳಗಿನ ಮಾತುಗಳಲ್ಲಿ ಕಾವ್ಯ ಸೌಂದರ್ಯ ಲಾಸ್ಯವಾಡುವುದನ್ನು ಕಾಣಬಹುದು-

"ಉದಯಾಸ್ತ ಮಾನವೆಂಬ ಕೊಳಗದಲ್ಲಿ ಆಯುಷ್ಯವೆಂಬ ರಾಸಿಯ
ನಳೆವರು"
"ಗೋವಿನ ಹೊಟ್ಟೆಯಲ್ಲಿ ಘೃತವಿದ್ದಡೇನೋ ಆ ಗೋವು ದಿನದಿನಕ್ಕೆ
ಪುಷ್ಟವಾಗಬಲ್ಲುದೆ ?
"ಸತಿಪತಿಯ ಒಲುಮೆಯಮುನಿಸು ಅತಿಬೇಟವೆಂಬುದು ತಪ್ಪದು"
"ಕಬ್ಬುನಗಿದ ಗಾಣ ಬಲ್ಲುದೆ ಹಾಲ ಸವಿಯ"
"ತಾಯಮಾರಿ ತೊತ್ತ ಕೊಂಬದೇನೆಂಬೆನಯ್ಯಾ"
"ಕಣ್ಣರಿಯದಿದ್ದರೂ ಕರುಳರಿಯಬೇಡವೆ ? "

5. ವಚನ ಸಾಹಿತ್ಯ (ಚೆನ್ನಬಸವಣ್ಣ) ಎಂ. ಚಿದಾನಂದಮೂರ್ತಿ

—ಹೀಗೆ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು.

"ಚನ್ನಬಸವನನ್ನು ಬರಿಯ ಸಾಹಿತ್ಯದೃಷ್ಟಿಯಿಂದ ನೋಡಿ ವಿಮರ್ಶಿಸುವುದು ಅವನಿಗೆ ಅನ್ಯಾಯ ಮಾಡಿದಂತೆ............ಅವನ ವಚನಗಳು ನಿಜವಾಗಿಯೂ ವಿಷಯಗಳ ಗಣಿ. ತನ್ನ ಕಾಲದ ಸಾಮಾಜಿಕ ವ್ಯವಹಾರಗಳು, ಮತಗಳು, ಪ್ರಾದೇಶಿಕ ಆಚಾರಗಳು ಇವುಗಳ ಚಿತ್ರ ಅಲ್ಲಿ ದೊರಕುತ್ತದೆ"[6]

"ಚನ್ನಬಸವಣ್ಣ ವಚನಕಾರರ ಅದರಲ್ಲಿಯೂ ಸಮಕಾಲೀನ ಹಿರಿಯ ವಚನಕಾರರ ಬೆಲೆಯನ್ನು ತನ್ನೊಂದು ವಚನದಲ್ಲಿ ದಾಕ್ಷಿಣ್ಯ ರಹಿತನಾಗಿ ತೂಗಿ ಇಟ್ಟಿದ್ದಾನೆ.

"ಆದ್ಯರ ಅರುವತ್ತು ವಚನಕ್ಕೆ ದಣ್ಣಾಯಕರ (ಬಸವಣ್ಣನವರ) ಇಪ್ಪತ್ತು ವಚನ.
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ
ಅಜಗಣ್ಣನ ಐದುವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ ಕಾಣಾ ಸಿದ್ಧರಾಮಯ್ಯಾ"

"ಆಚಾರದಲ್ಲಿ ಅನುಭಾವಿ, ಪ್ರಸಾದದಲ್ಲಿ ಪರಿಣಾಮಿ ; ಗುಹೇಶ್ವರ ಲಿಂಗದಲ್ಲಿ ಚನ್ನಬಸವಣ್ಣನೆಂಬ ಪ್ರಸಾದಿಗೆ ನಮೋನಮೋ ಎನುತಿರ್ದೆನು" ಗುಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನಿಂದ ನಾನು ಬದುಕಿದೆನು" ಎಂದು ಅಲ್ಲಮಪ್ರಭುವೂ ಶಿವಾಚಾರದ ವಿಚಾರವನರಿಯದೆ ಜಗವು ಕೆಟ್ಟಿಹುದೆಂದು. ಪರಮಪುರುಷಾರ್ಥ ಕಾರಣವಾಗಿ ಮರ್ತ್ಯಲೋಕದಲ್ಲಿ ಅವತರಿಸಿ." "ಎನ್ನ ಭ್ರಾಂತಿ ಸೂತಕವ ಬಿಡಿಸಿ, ಲಿಂಗೈಕ್ಯವೆಂಬುದನೆನಗೆ ತೋರಿದೆಯಾಗಿ" "ಎನಗೆ ನೀನು ಪರಮಾರಾಧ್ಯ ಕಾಣಾ ಚನ್ನಬಸವಣ್ಣಾ" "ಕೂಡಲ ಸಂಗಮದೇವಯ್ಯಾ, ಚನ್ನಬಸವಣ್ಣ ನಿಂದಲಾನು ಬದುಕಿದೆನಯ್ಯಾ" ಎಂದು ಬಸವಣ್ಣನೂ, " ಚನ್ನಬಸವಣ್ಣ ತೋರಿದ ಹಾದಿ ಸಫಲವಾಯಿತ್ತಾಗಿ ನಾನು ಚನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು" ಎಂದು ಸಿದ್ಧರಾಮನೂ," "ಎನ್ನ ಪರಿಣಾಮ ಚನ್ನಬಸವಣ್ಣನ ಧರ್ಮ ಚೆನ್ನಮಲ್ಲಿಕಾರ್ಜುನ ದೇವರ ನೆನಹಿನಲ್ಲಿ ನಿನ್ನ ಕರುಣದ ಶಿಸು ನಾನು ಕಾಣಾ, ಚನ್ನಬಸವಣ್ಣಾ ಎಂದು ಮಹಾದೇವಿಯಕ್ಕನೂ, "ಎನಗೆ ಬಲ್ಲ, ತನುವ ತೋರಿದ ಎನ್ನವಲ್ಲಭ ನೀನೇ ಚನ್ನಬಸವಣ್ಣಾ" ಎಂದು ಮೋಳಿಗೆಮಾರಯ್ಯನೂ, "ಬಸವಣ್ಣಂಗೆ ಚನ್ನಬಸವಣ್ಣನೆ ಶೃಂಗಾರ ; ಎನಗೆಯೂ ನಿನಗೆಯೂ (ಪರಮಾತ್ಮನಿಗೆ) ಚನ್ನಬಸವಣ್ಣನೆ ಶೃಂಗಾರ" ಎಂದು ಮಡಿವಾಳ ಮಾಚಯ್ಯನೂ. "ಷಡುಸ್ಥಲ ಚಕ್ರವರ್ತಿಯಯ್ಯಾ ಚನ್ನಬಸವಣ್ಣನು" ಎಂದು ಮರುಳು ಶಂಕರದೇವನೂ' ಚನ್ನಬಸವಣ್ಣನನ್ನು ಹೊಗಳಿರುವುದು ಅವನ ಮಹತ್ತಿಗೆ ನಿದರ್ಶನವಾದರೆ, ಎಲ್ಲರಿಗೂ 'ಶರಣೆನ್ನುವ' ನಡುವಿನಯವನ್ನು ತೋರಿ,

"ಎನ್ನ ಹೊಗಳಲಿಕೆ ನಿಮಗೆ ತೆರಹಿಲ್ಲ.
ನಿಮ್ಮ ಹೊಗಳಲಿಕೆ ಎನಗೆ ತೆರಹಿಲ್ಲ.
ಒಬ್ಬರನೊಬ್ಬರ ಹೊಗಳಲಿಕೆ ಹೊತ್ತು ಹೋಯಿತ್ತಲ್ಲದೆ ಸಂಗಮನಾಥನ
ಆಪ್ಯಾಯಮಾನಕ್ಕೆ ಪದಾರ್ಥವ ನೀಡಲಿಲ್ಲ.
ಕೂಡಲ ಚನ್ನಸಂಗಯ್ಯಂಗೆ ಪದಾರ್ಥವನಳವಡಿಸಿ ನಡೆಯಿಸಿರೆ
ಸಂಗನಬಸವಣ್ಣಾ"

—ಎಂದಿರುವುದು ಚನ್ನಬಸವಣ್ಣನ ದಾಕ್ಷಿಣ್ಯ ದೂರವಾದ, ಹೊಗಳಿಕೆಗೆ ಬಾಯ್ಬಿಡದ ದೃಢ ಚಿತ್ತವನ್ನೂ, ಕರ್ತವ್ಯ ನಿಷ್ಠೆಯನ್ನೂ ಸಾರುತ್ತದೆ.*

6. ವಚನ ಸಾಹಿತ್ಯ (ಚನ್ನಬಸವಣ್ಣ) ಎಂ. ಚಿದಾನಂದಮೂರ್ತಿ.

* ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಓ. ಎಸ್. ಲಿಂಗಣ್ಣಯನವರ 'ಚನ್ನಬಸವಣ್ಣ' ಎಂಬ ಕಿರುಹೊತ್ತಿಯಿಂದ ಉಪಕೃತನಾಗಿದ್ದೇನೆ.

LIVE YOUR LIFE
ನಿಮ್ಮ ಬದುಕನ್ನು ಬಾಳಿ

1. Life is a book — Study it
   ಜೀವನವೊಂದು ಗ್ರಂಥ — ಅದನ್ನು ಅಧ್ಯಯಿಸಿ
2. Life is beauty — Worship it
   ಜೀವನ ಸುಂದರವಾದುದು — ಅದನ್ನು ಆರಾಧಿಸಿ
3. Life is a challenge — Meet it
   ಜೀವನ ಒಂದು ಸವಾಲು — ಅದನ್ನು ಅಂಗೀಕರಿಸಿ

ಬಾಳಬುತ್ತಿ

1. ಭಕ್ತರು ಮತ್ತು ಗುರುಗಳು :

ಧಾರ್ಮಿಕ ಪ್ರಪಂಚದಲ್ಲಿ ಅತಿ ಮುಖ್ಯವಾಗಿ ಬರುವ ಎರಡು ಪಾತ್ರಗಳೆಂದರೆ ಭಕ್ತರು ಮತ್ತು ಗುರುಗಳು. ಇಲ್ಲಿ ನಾನು ಬಳಸುತ್ತಿರುವ ದೃಷ್ಟಿ ಜಾತಿವಾಚಕವಾಗಿ ಅಲ್ಲ. ಅಂದರೆ ಮತ್ತೆ ವರ್ಣ, ವರ್ಗವಾದಗಳ ಕಾಲ್ತುಳಿತಕ್ಕೆ ಸಿಕ್ಕ ಲಿಂಗಾಯತ ಸಮಾಜದಲ್ಲಿ ಭಕ್ತ ಮತ್ತು ಗುರು–ಇವುಗಳನ್ನು ಜಾತಿವಾಚಕ ಪಂಗಡಗಳಾಗಿ ಬಳಸುವರಷ್ಟೆ. ಆ ವಿಷಯದ ಪ್ರಸ್ತಾಪ ಈಗ ನಾನು ಮಾಡುತ್ತಿಲ್ಲ. ಭಕ್ತರೆಂದರೆ ಅನುಯಾಯಿಗಳು, ಗುರುಗಳೆಂದರೆ ಕೆಲವು ಅನುಯಾಯಿಗಳನ್ನಾದರೂ ಪಡೆದಿರುವ ಧಾರ್ಮಿಕ ನೇತಾರರು. ಇದನ್ನು ಹಿಂದೂ ಸಮಾಜಕ್ಕೆ ಅನ್ವಯಿಸಿ ಬರೆಯುತ್ತಲಿರುವೆ.

ಇಂಥ ಗುರು–ಭಕ್ತರ ನಡುವೆ ಒಂದು ಬಾಂಧವ್ಯ ಇರುತ್ತದೆ. ಗುರು ಭಕ್ತರನ್ನು ರೂಪಿಸುವನೋ ಅಥವಾ ಭಕ್ತರು ಗುರುಗಳನ್ನು ರೂಪಿಸುವರೋ, ಎಂಬುದು ವಿಲಕ್ಷಣ ಸಮಸ್ಯೆ. ಯೋಗಿಯೋ, ಪ್ರವಚನಕಾರನೋ, ಸಮಾಜ ಸೇವಕನೋ ತನ್ನ ವ್ಯಕ್ತಿತ್ವ, ವಾಣಿ, ಬರಹ–ಯಾವುದಾದರೊಂದು ಸಾಧನೆಯ ಮೂಲಕ ಕೆಲವರನ್ನು ತನ್ನ ಪ್ರಭಾವ ವಲಯಕ್ಕೆ ತೆಗೆದುಕೊಳ್ಳುವನು. ಆಗ ಆ ವ್ಯಕ್ತಿಯ 'ಮೇಟಿ' ಸುತ್ತಲೂ ಕೆಲವರು ತಿರುಗ ತೊಡಗಿ ಅವನ ಭಕ್ತರಾಗುವರು. ಒಂದು ಶಕ್ತಿಯ ಸಂಚಯ ಅಲ್ಲಿ ಪ್ರಾರಂಭವಾಗುವುದು. ಆದರೆ ಅಂಥ ವಲಯಕ್ಕೆ ಒಮ್ಮೆ ಸೇರಿಕೊಂಡ 'ಗುರು' ತನ್ನ ಸ್ವತಂತ್ರ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದು ಅಪರೂಪ ಮತ್ತು ಕಷ್ಟ ಸಾಧ್ಯ. ಅನೇಕ ಬಾರಿ ಅವನು ಪತನಗೊಳ್ಳಬಹುದು ಅಥವಾ ಪ್ರವಾಹ ಪತಿತನಾಗಬಹುದು. ಎಂಥ ಪ್ರಸಂಗದಲ್ಲೂ ಸ್ವತಂತ್ರ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವವನು ಧೀಮಂತ. ಅಂಥವರು ಬಹು ವಿರಳ.

ಗುರು–ಶಿಷ್ಯ ಬಾಂಧವ್ಯವನ್ನು ಕೇವಲ ಅಧ್ಯಾತ್ಮಿಕವಾಗಿ ಇರಿಸಿಕೊಂಡು, ಆತ್ಮಸಾಧನೆಗೆ ಇರಿಸಿಕೊಳ್ಳುವವರು ಬಹಳಷ್ಟು ವಿರಳ. ಬಹಳಷ್ಟು ಪ್ರಸಂಗಗಳಲ್ಲಿ ಭಕ್ತರ ಕೂಟವೇ ಬಹುದೊಡ್ಡ ಬಲವಾಗಿ, ಗುರುವನ್ನೆ, ಉಪಗ್ರಹವನ್ನಾಗಿ ಸುತ್ತ ತೊಡಗುವಂತೆ ಮಾಡುವ ಜನರ ಕಪಿಮುಷ್ಠಿಯಿಂದ ಪಾರಾಗುವ ಎದೆಗಾರಿಕೆ ಗುರುಗಳಲ್ಲಿರದು. ಆಗ ಆ ವ್ಯಕ್ತಿಯ ಆದರ್ಶಗಳು ಯಾವುವೂ ಕಾರ್ಯರೂಪಕ್ಕೆ ಬರಲು ಅಸದಳ.

ಈ ಸಂಪಾದಕೀಯವನ್ನು ಬರೆಯಲು ಪ್ರೇರೇಪಿಸಿದ ಒಂದು ಪ್ರಸಂಗ ಹೇಳುವೆ. 'ಅ' ಎಂಬ ಗುರುಗಳು ಅನೇಕ ಮುಮುಕ್ಷುಗಳನ್ನು, ತ್ಯಾಗಿಗಳನ್ನು, ಬೋಧಕರನ್ನು ತಯಾರು ಮಾಡುವ ಜ್ಞಾನಿಗಳು. ಅವರ ಅಧ್ಯಾತ್ಮ ಗರಡಿಯಲ್ಲಿ ಅನೇಕ ಶಿಷ್ಯಂದಿರು ತಯಾರಾದರು. ಹೆಚ್ಚಿನ ಶಿಕ್ಷಣವನ್ನೇನೂ ಹೊಂದಿರದ ಸ್ವಭಾವತಃ ಸಾತ್ವಿಕ ವೃತ್ತಿಯ ಓರ್ವ ವ್ಯಕ್ತಿ 'ಇ' ಗಳಿಸಿಕೊಂಡ ಜ್ಞಾನವನ್ನೇ ನಾಲ್ಕು ಜನರಿಗೆ ನೀಡುತ್ತ ಹೊರಟಿತು. (ಒಬ್ಬ ಉತ್ತಮ ಸರ್ಜನನ ಚಿಕಿತ್ಸಾಲಯದಲ್ಲಿ ಎಸ್.ಎಸ್.ಎಲ್.ಸಿ. ಪಾಸಾದ ಓರ್ವ ಒಂದೆರಡು ವರ್ಷಗಳನ್ನು ಕಳೆದು, ಕಾಂಪೌಂಡರನಾಗಿ, ಅಷ್ಟಿಷ್ಟು ಔಷಧಿಯ ಹೆಸರುಗಳನ್ನು ನೆನಪಿರಿಸಿಕೊಂಡು, ನಂತರ ಒಂದು ಸ್ವತಂತ್ರ ಚಿಕಿತ್ಸಾಲಯವನ್ನೇ ಹಳ್ಳಿಗಾಡಿನಲ್ಲಿ ತೆರೆದನು. ಅದೃಷ್ಟ ಚೆನ್ನಾಗಿತ್ತು. ಕೈ ಕುಲಾಯಿಸಿತು, ಕೀರ್ತಿ ಬಂತು. ಅವನಿಗೆ 'ತನ್ನ ಸೀಮೆ ಏನಿದೆ ತಾನಿನ್ನೂ ಕಲಿಯಬೇಕಾದ್ದೆಷ್ಟಿದೆ' ಎಂಬ ಅರಿವಿದೆ. ಆದರೆ ಅವನ ಸುತ್ತಲಿನವರು ಹೇಳುತ್ತಾರೆ : "ಸ್ವಾಮಿ ತಮಗೇನ್ರಿ ಯಾವ ಸ್ಪೆಷಲಿಸ್ಟನ್ನೂ ಮೀರಿಸ್ತಿರಿ ಉನ್ನತ ವ್ಯಾಸಂಗ ಯಾವುದನ್ನು ಮಾಡಬೇಡಿ........" ಎಂದು ಅತಂಕ ಒಡ್ಡುತ್ತಾರೆ. ಈ ದೃಷ್ಟಾಂತವನ್ನು ವಿಸ್ತರಿಸೋಣ.)

ಆಗ ಮಿತವಲಯದಲ್ಲೇ ಆದರೂ ಚಿಂತೆಯಿಲ್ಲ, ತನ್ನದೇ ಆದ ಕೆಲವು ಜನರ ಗುಂಪು ತಯಾರಾಯಿತು. 'ಇ'ಗೆ ಗೊತ್ತಿದೆ 'ತನ್ನ ಜ್ಞಾನ' ಶಕ್ತಿ ಬಹಳ ಸೀಮಿತವಾಗಿದೆ. ಅದನ್ನು ಇನ್ನೂ ವಿಸ್ತರಿಸಿಕೊಳ್ಳಬೇಕು; ಬಲಪಡಿಸಿಕೊಳ್ಳಬೇಕು ; ಆದರೆ ಭಕ್ತರ ಬಳಗ ಬಿಡದು "ತಾವು ಮಹಾಜ್ಞಾನಿಗಳು ಯಾವ ಶಾಸ್ತ್ರವನ್ನೂ ಓದಬೇಕಾಗಿಲ್ಲ, ಯಾರ ಬೋಧೆಯನ್ನೂ ಕೇಳಬೇಕಾಗಿಲ್ಲ; ಸ್ವಯಂಸಿದ್ಧರು". ಈ ಪ್ರಸಂಗದ ಮೇಲೆ ಚಿಂತನೆಯ 'ಕ್ಷ' ಕಿರಣಗಳನ್ನು ಬೀರಿದಾಗ ಕೆಲವು ವಿಚಾರಗಳು ಸ್ಫುರಿಸಿದವು, ಭಕ್ತರು ಗುರುವನ್ನು ಹೇಗೆ Corrupt ಮಾಡಬಲ್ಲರು ಎಂಬ ಬಗ್ಗೆ.

ಗುರುವನ್ನು ಪತನಿಸುವ ಮೊದಲ ಉಪಾಯ ಹೊಗಳಿಕೆ. "ಹೊಗಳಿ ಹೊಗಳಿ ಹೊನ್ನ ಶೂಲದಲ್ಲಿಕ್ಕುವ" ಭಕ್ತರ ಜಾಣ್ಮೆಯನ್ನರಿಯದ ಗುರು ಸುಲಭವಾಗಿ ಬೀಳುವ ಮಿಕ. "ತಾವು ಅಪಾರ ಸಿದ್ಧ ಪುರುಷರು, ಮಹಾಜ್ಞಾನಿಗಳು ನೀವಿನ್ನು ಓದುವದು ಬರೆಯುವುದು ಜ್ಞಾನ ಗಳಿಸುವುದು ಏನೇನೂ ಬೇಡ...."ಎನ್ನುತ್ತಿದ್ದಂತೆಯೇ ಹಿಗ್ಗಿ ಹಿರೇಕಾಯಾಗಿ ಹೊಗಳಿಕೆಗೆ ಬಿದ್ದರೆ ಮಿಕದ ಪರಿಸಮಾಪ್ತಿ. ಅವರ ಹೊಗಳಿಕೆಗೆ ಉದಾಸೀನದ ನಗೆ ನಕ್ಕು, "ಅಯ್ಯಾ, ನನ್ನ ಸೀಮೆ ಏನಿದೆ ನನಗೆ ಗೊತ್ತು. ನೀನು ಹೊಗಳಿದ ಮಾತ್ರಕ್ಕೆ ನಾನೇನು ಸರ್ವಜ್ಞನಲ್ಲ. ನೀನು ಅಜ್ಞಾನದಿಂದ ಹೊಗಳುತ್ತಿರಬಹುದು; ಅಥವಾ ದುರಾಲೋಚನೆಯಿಂದಲೂ ಹೊಗಳುತ್ತಿರಬಹುದು. ನನ್ನ ಪರಿಪೂರ್ಣತೆ ಸಾಧಿಸಿಕೊಳ್ಳುವ ಕರ್ತವ್ಯ ನನಗೆ

ಸೇರಿದ್ದು. ನಿನ್ನ ಮಾತಿಗೆ ಮರುಳಾಗೆ, ಎಂದು ತನ್ನ ಸಾಧನೆಯಲ್ಲಿ ತಾನಡೆದರೆ ಸಾಧಕನಲ್ಲಿ ಪ್ರಗತಿ. ಇದಕ್ಕೆ ವಿರುದ್ಧವಾಗಿ "ನಿಜ, ನನ್ನಲ್ಲಿ ಆ ಶಕ್ತಿ ಇಲ್ಲದಿದ್ದರೆ ಇವರೇಕೆ ಹೊಗಳುತ್ತಿದ್ದರು"ಎಂದು ನಂಬಿ ಬೀಗಿದರೆ ಪ್ರಗತಿ ಸ್ಥಗಿತ; ಇಲ್ಲವೇ ಅವನತಿ ಖಂಡಿತಾ.

ಭಕ್ತರು ಹೊಗಳಿಕೆಯಿಂದ ಸುಲಭವಾಗಿ ಪತನಿಸುವರೆಂಬುದನ್ನು ಅನೇಕ ರೀತಿಯಿಂದ ವಿವರಿಸ ಬಹುದು. ಉ. "ತಾವೇನೂ ಕಡಿಮೆ ಜ್ಞಾನಿಯಲ್ಲ. ನಿಮಗೇಕೆ ಬೇಡ ರಾಜವೈಭವ. ಮಾಡುವವರು ನಾವು, ನಿಮಗೇನಂತೆ ತೆಗೆದುಕೊಳ್ಳಿ ಈ ಕನಕ ಕಿರೀಟ, ಪಟ್ಟೆ ಪೀತಾಂಬರ, ಏರಿರೀ ಪಲ್ಲಕ್ಕಿ..........."ಪಾಪ, ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇವಂತೆ ಇವರ ಪರಿ. ಇದು ತಮಗೆ ಸಲ್ಲುವ ಗೌರವ ಎಂದು ನಂಬಿ ಒಪ್ಪಿದರೆ ಪತನವೇ ಸರಿ; ತಾತ್ತ್ವಿಕ ದೃಷ್ಟಿಯಿಂದ ಆದರ್ಶ ಕುಸಿಯುವುದು. ಒಂದು ಊರಿನಲ್ಲಿ ಈ ಸಮಸ್ಯೆ ಎದುರಾಯಿತು. ಪ್ರವಚನ ಅದ್ದೂರಿಯಾಗಿ, ಅಭೂತ ಪೂರ್ವವಾಗಿ ನಡೆಯಿತು. ಊರಿನ ಭಕ್ತರು . ಒಂದಾಗಿ ಬಂದು "ತಮಗೆ ಅಡ್ಡಪಲ್ಲಕ್ಕಿ' ಉತ್ಸವ ಮಾಡಬಯಸಿದ್ದೇವೆ. ಒಪ್ಪಿಕೊಳ್ಳಿ. ಆಶ್ಚರ್ಯ ಚಕಿತಳಾಗಿ ನಾನು ಕೇಳಿದೆ, "ಇದೇಕಿಂತ ವಿಚಾರ. ನಾನೊಪ್ಪೆನು..........." "ಏಕೆ ಯಾರಾದರೂ ವಿರೋಧಿಸಿಯಾರೆಂದೆ? ಭಯವೇ ಅಂಥವರಾರು ನಮ್ಮನ್ನು ವಿರೋಧಿಸುವವರು ...." ಓರ್ವ ಕಡುಗಲಿ ಭಕ್ತಾಭಿಮಾನಿ ಮೀಸೆ ತಿರುವಿದ. "ಭಯ ಅನ್ನೋ ಶಬ್ದ ನಮ್ಮ ನಿಘಂಟಿನಲ್ಲೇ ಇಲ್ಲ. ಬಸವ ತತ್ತ್ವ ಪ್ರತಿಷ್ಠಾಪನೆಗಾಗಿ, ಸಮತಾವಾದ ಸಾರಲಿಕ್ಕೆ ಪ್ರಗತಿಪರ ವಿಚಾರ ಬಿತ್ತರಿಸಲು ಸ್ತ್ರೀ ಜಗದ್ಗುರು ಪೀಠ ಸ್ಥಾಪಿಸಿಲ್ಲವೆ ? ಧರ್ಮಕ್ಕಾಗಿ ಬಾಳನ್ನೇ ಮುಡುಪಿಟ್ಟವರಿಗೆ ಭಯವೆಂತಹುದು. ಆದರೆ ನಮ್ಮ ಧರ್ಮದ ವಚನ ಶಾಸ್ತ್ರ ಸಂವಿಧಾನಕ್ಕೆ ವಿರೋಧವಾದ ಯಾವ ಕಾರ್ಯಕ್ಕೂ ನಮ್ಮ ಪ್ರೋತ್ಸಾಹವಿಲ್ಲ. ಎಲ್ಲರೂ ಸಮಾನರೆಂದು ಸಾರುವಾಗ ಅವರ ಹೆಗಲ ಮೇಲೆ ಹತ್ತಿ ಹೋಗುವ ಸಮತಾ ವಿರೋಧಿ ಚಟುವಟಿಕೆ ಬೇಡ. ಮೆರವಣಿಗೆ ಮಾಡುವ ಅಪೇಕ್ಷೆಯೇ ನಿಮಗಿದ್ದರೆ ವಾಹನದಲ್ಲಿ, ಎತ್ತಿನ ಗಾಡಿಯಲ್ಲಿ ಮಾಡಿರಿ, ಹೆಗಲನ್ನೇರಲು ಒತ್ತಾಯಿಸಬೇಡಿ." ಕಡೆಗೆ ಭವ್ಯಾಕೃತಿಯ ಎತ್ತುಗಾಡಿಯ ಮಲ್ಲಿಗೆ ಮಂಟಪ ಮಾಡಿ ಮೆರವಣಿಗೆ ಮಾಡಿದರೆನ್ನಿ. ಅವರೇ ಇನ್ನೊಂದು ಪ್ರಸ್ತಾಪ ಮಾಡಿದರು. ಅದು ಮದ್ದು ಸುಡುವ ಬಗ್ಗೆ. "ಮೆರವಣಿಗೆಯಲ್ಲಿ ಐದು ಸಾವಿರ ರೂಪಾಯಿ ಮದ್ದು ಸುಡಲಿದ್ದೇವೆ..........." ನನಗೆ ತೀರಾ ಅಚ್ಚರಿಯಾಯಿತು. ಸಮಾಧಾನಿಸಿಕೊಂಡು ಕೇಳಿದೆ, "ಇದೇಕಿಂತ ವೇಸ್ಟ್" ಹಿಂದೊಮ್ಮೆ ಉತ್ಸವವಾದಾಗ ಬೇರೊಂದು ಗುಂಪಿನವರು 3 ಸಾವಿರ ರೂಪಾಯಿ ಮದ್ದು ಸುಟ್ಟಿದ್ದರು. ತಾವು ಆ ಗುರುಗಳಿಗಿಂತ ಕಡಿಮೆಯಿಲ್ಲ, ನಾವು ಆ ಗುಂಪಿನವರಿಗಿಂತ ಕೀಳಲ್ಲ..........." ನಾನು ಖಡಾಖಂಡಿತವಾಗಿ ನುಡಿದೆ, "ಇಂಥ ಅನಾರೋಗ್ಯಕರ ಸ್ಪರ್ಧೆ ಸರಿಯಲ್ಲ. ಅವರೊಂದು ತಪ್ಪುಮಾಡಿದರು ನಾವೇನು ಕಮ್ಮಿ ಎಂದು ಅದಕ್ಕಿಂತ ಹಿರಿದಾದ ತಪ್ಪು ಮಾಡಲಾಗದು." "ಆ ಗುರುಗಳ ಮೆರವಣಿಗೆ ಅದ್ದೂರಿಯಾಗಿ ಆಯಿತು. ಇವರದು ಅಷ್ಟು ಅದ್ದೂರಿಯಾಗಿ ಆಗಲಿಲ್ಲ ಎನ್ನಬಹುದು ಜನ." ನುಡಿದರು ಭಕ್ತಮಹಾಶಯರು. "ಜನರು ಅಂದರೆ ನಮಗೇನಾಗಬೇಕು. ನಾವು ಹಿಡಿದ ತತ್ತ್ವಕ್ಕೆ ಚ್ಯುತಿ ಬರಬಾರದು. ಜನರಿಂದ ಹೊಗಳಿಸಿಕೊಂಡೂ, ತತ್ತ್ವಭ್ರಷ್ಟರಾದರೆ ಆಗ ಅಂತರಾತ್ಮ ಚುಚ್ಚತೊಡಗುವದು. ಅದನ್ನು ಸಹಿಸುವುದು ಕಷ್ಟಸಾಧ್ಯ. ಐದು ಸಾವಿರ ರೂಪಾಯಿ ಮದ್ದು ಸುಡಬೇಡಿ. ಅದನ್ನೇ ಸಂಸ್ಥೆಗೆ ಕೊಡಿ. ಏನಾದರೂ ಯೋಜನೆಗೆ ಹಾಕುತ್ತೇವೆ. ಅಥವಾ ಅದನ್ನು ಬಡ ವಿದ್ಯಾರ್ಥಿಗಳಿಗೆ ಹಂಚಿ, ನಿರ್ಗತಿಕರಿಗೆ ಬಟ್ಟೆ–ಬರೆ, ಹೊದ್ದಿಕೆ ಕೊಡಿ. ಇಲ್ಲವೇ ಹಣ್ಣು ತಂದು ರೋಗಿಗಳಿಗೆ ಹಂಚಿ..........." ಸಲಹೆ ಸೂಚಿಸಿದೆ. ನಂತರ ಆಲೋಚಿಸಿದೆ : "ಎಷ್ಟು ರೀತಿಯಲ್ಲಿ ಈ ಜನ ಮರುಳು ಮಾಡಲೆತ್ನಿಸುತ್ತಾರೆ. ತತ್ತ್ವನಿಷ್ಠೆಗೆ ಸವಾಲೊಡ್ಡುತ್ತಾರೆ..........."

ಹೊನ್ನು, ಹೆಣ್ಣು, ಮಣ್ಣು ಮೂರರ ಆಮಿಷಗಳನ್ನೊಡ್ಡುವ ಭಕ್ತರಿಂದ ದೂರವಿರುವ ಜಾಣ್ಮೆ ಗುರುವಿಗೆ ಅವಶ್ಯಕ, ಓರ್ವ ಜ್ಞಾನಿಗಳ ಬಗ್ಗೆ ಕೇಳಿದೆ ಇತ್ತೀಚೆಗೆ. ಅವರು ಶುದ್ಧ ಸಾಧಕ ಹೃದಯಿಯಾದ ತಪಸ್ವಿಗಳು. ಮಹಾರಾಜರೋರ್ವರು ಅವರಿಂದ ಪ್ರಭಾವಿತರಾದರು. ಆಹ್ವಾನಿಸಿದರು. "ಬುದ್ಧಿ, ಅರಮನೆಯ ಕೋಟೆಯ ಮಧ್ಯದಲ್ಲೇ ಗುರುಮನೆಯಾದರೆ ಒಳ್ಳಿತು. ನಿತ್ಯದರ್ಶನ ಲಭ್ಯವಾಗುತ್ತದೆ. ಒಪ್ಪಿಕೊಳ್ಳಿ, ಕಟ್ಟಿಸುವೆ." ಗುರುಗಳು ನಿರ್ಲಕ್ಷ್ಯ ನಗೆ ನಕ್ಕರಂತೆ. "ರಾಜಾ, ಅಂಥ ಗುರುಭಕ್ತಿ ಇದ್ದರೆ ನಾನಿದ್ದಲ್ಲಿ ನೀನು ಹುಡುಕಿಕೊಂಡು ಬರಬೇಕೇ ವಿನಾ, ನೀನಿದ್ದಲ್ಲಿಗೆ ನಾನು ಬರಬಾರದು. 'ಅರಸು ವಿಚಾರ, ಸಿರಿಯು, ಶೃಂಗಾರ ಸ್ಥಿರವಲ್ಲ ಮಾನವ' ಎಂದಿಲ್ಲವೇ ಅಪ್ಪ ಬಸವಣ್ಣನವರು. ನಿನ್ನ ಕೋಟೆಯೊಳಕ್ಕೆ ಬಂದರೆ ಶ್ರೀಮಂತನ ಗುರು ನಾನಾಗುವೆ ಶ್ರೀಸಾಮಾನ್ಯನ ಗುರುವಾಗಿ ಉಳಿಯುವುದಿಲ್ಲ. ಅರಮನೆ, ಗುರುಮನೆ ಸಾಮಾನ್ಯರ ಸೊತ್ತಾಗಿದ್ದಾಗಲೇ ಅಲ್ಲಿ ಜೀವಂತಿಕೆ." ಈ ಮಾತುಗಳನ್ನು ಗುರುಗಳ (ಇವರೀಗ ಇಲ್ಲ) ಸಮಕಾಲೀನರ ಬಾಯಿಂದ ಕೇಳಿದಾಗ ಗೌರವ ಉಕ್ಕಿಬಂತು.

ಅಧಿಕಧಿಕ ಕಾಣಿಕೆಯನ್ನಿತ್ತು, ಹೊನ್ನಿನ ಆಮಿಷವೊಡ್ಡಿ ಆಳ ಬಯಸುವವರು ಕೆಲವರಾದರೆ, ಮಾಡಬಾರದ ಕುಕೃತ್ಯಗಳಿಗೆ ಪ್ರೇರೇಪಿಸಿ, ಅವರ ದೌರ್ಬಲ್ಯವನ್ನರಿತು ಕ್ರೂರ ಕಪಿಮುಷ್ಠಿಯಲ್ಲಿ ಸಿಕ್ಕಿಸಿಕೊಂಡು ಒದ್ದಾಡಿಸುವವರು ಕೆಲವರು. ರಾಜಕೀಯ ವಿಷವಲಯಕ್ಕೆಳೆಯಲು ಪ್ರಚೋದಿಸುವವರು ಕೆಲವರು, ಸ್ತ್ರೀ ವ್ಯಾಮೋಹಕ್ಕೆ ಸಿಕ್ಕಿ ಹಾಕಿಸುವವರು ಕೆಲವರು; ಗುಂಪುಗಾರಿಕೆ ಬೆಳೆಸಲು ಮುಖಂಡತ್ವ ಕೊಟ್ಟಂತೆ ಮಾಡಿ ಪತನಿಸುವವರು ಮತ್ತೆ ಕೆಲವರು; ಎಲ್ಲ ವಿಷಜಂತುಗಳ ವಲಯದಿಂದ ದೂರವಿದ್ದು'

ಆತ್ಮಬಲವನ್ನೇ ಬುಡವಾಳವನ್ನಾಗಿ, ತತ್ತ್ವನಿಷ್ಠೆಯನ್ನೇ ಶಸ್ತ್ರಾಸ್ತ್ರವನ್ನಾಗಿ ಮಾಡಿಕೊಂಡು ಬದುಕುವ ಸನ್ಯಾಸಿ ಮಾತ್ರ ಅಖಂಡ ಆತ್ಮವಿಸ್ವಾಸದಿಂದ ಗುರಿಮುಟ್ಟಬಲ್ಲ. ಬಹುಪಾಲು ಜನ ಮಾರ್ಗಮಧ್ಯದಲ್ಲೇ ಕುಸಿಯುವರು.

ಆದರ್ಶವಾದಿ ಸನ್ಯಾಸಿಗೆ ಹಲವಾರು ಅಧ್ಯತೆಗಳನ್ನು ಕಲಿಸುವವರೂ ಕೆಲವೊಮ್ಮೆ ಭಕ್ತರೇನೋ ಎನ್ನಿಸುತ್ತದೆ. ಅವನು ಕಾಯಕ ಮಾಡಬಾರದು; ತಾನು ಗುದ್ದಲಿ ಹಿಡಿದು ಮಣ್ಣನ್ನು ಮುಟ್ಟುವುದಾಗಲಿ, ನೀರನ್ನೆರೆದು ಸಸಿಗಳನ್ನು ಪೋಷಿಸುವುದಾಗಲಿ ಗೌರವಕ್ಕೆ ಧಕ್ಕೆ ಎಂದು ಕೆಲವರ ಭಾವನೆ. ಕಾವಿ ತೊಟ್ಟು ನಾಲ್ಕು ಮಾತನಾಡ ಕಲಿತು ಹಲಕೆಲವು ಶಿಷ್ಯರನ್ನು ಗಳಿಸಿಕೊಂಡು ತನ್ನ ಗುರುದರ್ಶನಕ್ಕೆ ಬಂದಾಗ ಆ ವ್ಯಕ್ತಿ ಗುರುಗಳ ಸೇವೆಯಲ್ಲಿ ತಲ್ಲೀನವಾದರೆ ಈ ಹೊಗಳುಭಟ್ಟಂಗಿ ಶಿಷ್ಯರಿಗೆ ಆತಂಕ. "ತಾವು ಹಾಗೆಲ್ಲ ಸೇವೆ ಮಾಡಬಾರದು. ನೀವೇನೂ ಸಾಮಾನ್ಯರಲ್ಲ." ಇಂಥ ಅಧ್ಯತೆಯನ್ನು ಕಲಿಸುವುದು. "ಒಟ್ಟಾರೆ ಸ್ವಾಮಿತ್ವ, ಗುರುತ್ವವೆಂದರೆ ಸೇವೆ ಮಾಡಿಸಿಕೊಳ್ಳುವದೇ ವಿನಾ ಸೇವೆ ಮಾಡುವುದಲ್ಲ" ಎಂಬ ನಂಬುಗೆಯನ್ನು ಭಕ್ತರು ಗುರುವಿನ ಮೇಲೆ ಹೇರ ತೊಡಗುವರು. ಹೀಗಾಗಿ ಅವರನ್ನು ಸುಪ್ರೀತರನ್ನಾಗಿ ಮಾಡಲು ಆದರ್ಶವಾದಿ ಸಾಧಕ ಸನ್ಯಾಸಿಯು ಸಹ ಧ್ಯೇಯದಿಂದ ದೂರಸರಿಯುವನು. ನಿಂದೆಯ ರೂಪದಲ್ಲಿ ವ್ಯಾಘ್ರದಂತೆ ಬರುವ ವಿಘ್ನ, ಸ್ತುತಿರೂಪದಲ್ಲಿ ಗೋಮುಖ ವ್ಯಾಘ್ರವಾಗಿ ಬರುವ ವಿಘ್ನ ಎರಡರಿಂದಲೂ ಸಾಧಕನು ದೂರವಿದ್ದು ತನ್ನ ಜೀವನದ ಧ್ಯೇಯದತ್ತ ನಡೆಯಬೇಕು.

2. ಪಶ್ಚಾತ್ತಾಪ ಮತ್ತು ಪರಿವರ್ತನೆ :

ಧರ್ಮದ ಮನೋವೈಜ್ಞಾನಿಕ ಅಧ್ಯಯನದಲ್ಲಿ "ಪಶ್ಚಾತ್ತಾಪ ಮತ್ತು ಪರಿವರ್ತನೆ" (Confession and Conversion) ಗೆ ಪ್ರಮುಖವಾದಂತಹ ಸ್ಥಾನವಿದೆ. ಏಕೆಂದರೆ ಹೃದಯಾಂತರಾಳದಿಂದ ಬರುವ ಪಶ್ಚಾತ್ತಾಪ ತದನಂತರ ಹೊಂದುವ ಪರಿವರ್ತನೆ ಎಷ್ಟೋ ದುರಾತ್ಮರನ್ನು ಮಹಾತ್ಮರನ್ನಾಗಿ ಮಾಡಿದೆ, ಕೊಲೆಗಡುಕರನ್ನು ಕಮನೀಯ ಗುಣವಂತರನ್ನಾಗಿ ಮಾಡಿದೆ. ಆದರೆ, ಎಲ್ಲ ದುರಾತ್ಮರೂ ಸಂತರಾಗಿಲ್ಲ, ದುರ್ಜನರೂ ಸದಾಚಾರಿಗಳಾಗಿಲ್ಲ.

ಏಕೆ ? ಅವರನ್ನು ಪರಿವರ್ತಿಸುವವರಾರೂ ಸಿಕ್ಕಿಲ್ಲವೆ ? ಅಥವಾ ಪರಿವರ್ತಿಸುವವರ ಪ್ರಭಾವಕ್ಕೆ ದುರಾತ್ಮರು ಸಿಕ್ಕಿಲ್ಲವೆ ? ಪ್ರಭಾವಕ್ಕೆ ಸಿಕ್ಕಿಯೂ ಪರಿವರ್ತಿತರಾಗಿರದವರ ಸ್ವಭಾವವೇ ಹಾಗೋ ? ಪ್ರಭಾವಕ್ಕೆ ಒಳಗಾಗಿ ಹೃದಯವು ಪರಿವರ್ತನೆಗೊಂಡರೂ ತಾವು ಪರಿವರ್ತನೆಗೊಂಡಿಲ್ಲವೆಂದು ನಟಿಸುವರೋ ? ಈ ವಿಷಯವು ಮನೋವೈಜ್ಞಾನಿಕ ವಸ್ತುವೇ ಆಗಬಲ್ಲುದಷ್ಟೆ. ಅಂಗುಲಿಮಾಲ, ಸೆಂಟ್ ಪಾಲ,

ಮತಂಗತಮ್ಮ ನಂತಹ ಕ್ರೂರಿಗಳು ಪರಿವರ್ತನೆಗೊಂಡರು, ಸಂಪೂರ್ಣ ಪಲ್ಲಟವಾಗಿ ಮಹಾಂತರಾದರು. ಕೊಂಡಿ ಮಂಚಣ್ಣನಂತಹ ಕಡು ದ್ವೇಷಿ, ಬಸವಣ್ಣನವರ ತೀಕ್ಷ್ಣ ನಿಂದಕ, ಕುಹಕಿ ಅಂತೂ ಪರಿವರ್ತನೆಗೊಂಡ ಎಂದು ಕೇಳುತ್ತೇವೆ. ಬುದ್ಧನನ್ನು ಬಾಲ್ಯದಿಂದಲೂ ದ್ವೇಷಿಸಿದ, ನಿಂದಿಸಿದ, ಅಪಹಾಸ್ಯ ಮಾಡಿದ, ಕೊಲ್ಲ ಬಯಸಿದ ದೇವದತ್ತ ಪಶ್ಚಾತ್ತಾಪ ಪಟ್ಟ; ಕ್ಷಮೆ ಕೇಳಬಯಸಿದ. ಅವನ ಪರಿವರ್ತನೆ ತೀರಾ ತಡವಾಯಿತು. ಕೊನೆಗಳಿಗೆಯಲ್ಲಿ ಕೇಳಿ ಬುದ್ಧನ ಪಾದದ ಮೇಲೊರಗಿದ. ಪಶ್ಚಾತ್ತಾಪಾನಂತರ ಏನೂ ಸಾಧಿಸಲಾಗದಿದ್ದರೂ ಕಡೆಗೆ ತನ್ನ ಆತ್ಮಶಾಂತಿಯನ್ನಾದರೂ ಪಡೆದು; ನಿಶ್ಚಿಂತೆಯಾಗಿ ಪ್ರಾಣಬಿಟ್ಟ. ಆದರೆ ಕೆಲವರು ಜಪ್ಪಯ್ಯ ಅಂದರೂ ಬದುಕಿನಲ್ಲಿ ಪರಿವರ್ತನೆಗೊಳ್ಳರು, ತಾವು ಕೈಗೊಂಡ ಮನೆ ಮುರುಕ ಕಾರ್ಯವಿಧಾನ ಬಿಡರು, ಹಾವು ವಿಷದ ಹಲ್ಲುಗಳೊಡನೆಯೇ ಹುಟ್ಟಿ, ಅದರೊಡನೆಯೇ ಬೆಳೆದು, ಅದರೊಡನೆ ಸಾವಂತೆ, ಕೆಲವೊಮ್ಮೆ ಹಾವುಗಾರ ಹಲ್ಲುಗಳನ್ನು ಕಿತ್ತಿದ್ದರೂ ನಿಸ್ಸಹಾಯಕವಾಗಿ ತಾನಿದ್ದರೂ, ಹೆರರನ್ನು ಕಂಡಾಗ 'ಬುಸ್' ಎಂದು ಬರಿದೇ ಹೆಡೆ ಹೊಡೆಯುವಂತೆ ಸ್ವಭಾವತಃ ದುಷ್ಟರಾಗಿ, ಅನ್ಯರನ್ನು ಕಟಕಿಯಾಡೇ ಬದುಕಿ ಜೀವನದಲ್ಲಿ ಸ್ಥಾನಮಾನ ಕಳಕೊಂಡರೂ, ಕಡಿದಾಡುವ ನಟನೆ ಮಾಡಿ, ತಾವೆಂದೂ ಪರಿವರ್ತನೆಗೊಳ್ಳುವವರಲ್ಲವೆಂದು ಸ್ಥಿರೀಕರಿಸುವರು.

ಇಂಥವರ ಪರಿವರ್ತನೆ ಏಕಾಗದು ? ಯಾವ ಪೆಟ್ಟು ಬಿದ್ದರೂ ಆಗದು; ಯಾರು ಬುದ್ಧಿ ಹೇಳಿದರೂ ಆಗದು. ಎಂದರೆ ಅವರ ಹೃದಯ ತೀರಾ ಸಂಸ್ಕಾರ ರಹಿತವಿರಬಹುದೇ ಎನಿಸುವುದು.

ಹಿಟ್ಟು ಕಲ್ಲು, ಗಟ್ಟಿ ಕಲ್ಲು, ಕೃಷ್ಣಶಿಲೆ ಎಂಬ ವಿವಿಧ ಜಾತಿಯ ಶಿಲೆಗಳುಂಟು. ಹಿಟ್ಟು ಕಲ್ಲನ್ನು ಪರಿವರ್ತಿಸಲೆತ್ನಿಸಿದಷ್ಟೂ ಪುಡಿಯಾಗುವುದು, ಗಟ್ಟಿಕಲ್ಲು ಸರಿಯಾಗಿ ಮೂರ್ತಿಯಾಗದೆ ಮುದ್ದೆ ಮುದ್ದೆಯಾಗುವುದು, ಹೇಗೆಂದರೆ ಹಾಗೆ ಸೀಳುವುದು. ಕೇವಲ ಕೃಷ್ಣಶಿಲೆ ಮಾತ್ರ ಬೆಣ್ಣೆಯಂತೆ ಪರಿವರ್ತನೆಗೊಂಡು ರೂಹು ತಳೆಯಬಲ್ಲುದು. ಹಾಗೆಯೇ ಸತ್ವಗುಣ ಪ್ರಧಾನ ವ್ಯಕ್ತಿಗಳಾದರೆ ಬೇಗ ಪರಿವರ್ತನೆಗೊಳ್ಳುವರು. ರಜೋಗುಣ ಪ್ರಧಾನ ವ್ಯಕ್ತಿಗಳ ಪರಿವರ್ತನೆ ತೀರಾ ನಿಧಾನ; ತಮೋಗುಣ ಪ್ರಧಾನರು ಪರಿವರ್ತನೆಗೊಳ್ಳುವುದೇ ಇಲ್ಲ. ಇಂಥ ವ್ಯಕ್ತಿಗಳ ಅದೃಷ್ಟವೇ ಕೆಟ್ಟುದೋ! ಅದು ಅವರನ್ನು ಒಳ್ಳೆಯವರಾಗಿ ಪರಿವರ್ತನೆಗೊಳ್ಳಲು ಬಿಡದೇನೊ! ಪಾಪ, ಅವರಾದರೂ ಏನು ಮಾಡಿಯಾರು. ಆದ್ದರಿಂದ ಈ ಸ್ವಭಾವದ ನಿಂದಕರು, ಶತ್ರುಗಳು, ದ್ವೇಷಿಗಳು, ವಿರೋಧಿಗಳು ಎದುರಾದಾಗ ಆದರ್ಶ ಸಾಧಕ ಅವರನ್ನು ದ್ವೇಷಿಸಲೂಬಾರದು, ಪರಿವರ್ತಿಸಲು ಯತ್ನಿಸಲೂ ಬಾರದು, ತನ ಪಾಡಿಗೆ ತಾನು ನಿರ್ಲಿಪ್ತನಾಗಿ ಕಾರ್ಯಪ್ರವೃತ್ತನಾಗಬೇಕು.

★

ಮೈಸೂರು ನಗರದಲ್ಲಿ ಆದ ಕಲ್ಯಾಣ ಕಿರಣದ ಆಜೀವ ಸದಸ್ಯರು

1. ಶ್ರೀ ಎಸ್. ಶಿವಪ್ಪನವರು,
   ಪ್ರಭು ಸ್ವೀಟ್ ಸ್ಟಾಲ್, ಮೈಸೂರು.
2. ಶ್ರೀ ಬಸವಣ್ಣನವರು, ರಾಮಾನುಜ ರೋಡ್, ಮೈಸೂರು.
3. ಶ್ರೀಮತಿ ಎಚ್. ಬಿ. ಕರಿಬಸಮ್ಮನವರು, ಹಿಂದಿ ಟೀಚರ್, ದಾವಣಗೆರೆ.
4. ಎಲ್. ಎಸ್. ಬಾಲಸುಬ್ರಹ್ಮಣ್ಯನ್, ಕೊಳದ ಸಂದಿ ಬೀದಿ, ಮೈಸೂರು.
5. ಪ್ರಶಿಕ್ಷಕ ಸಂಸ್ಥೆ, ಕನ್ನಡ ಸಾಹಿತ್ಯ ಸಂಘ, ವಸಂತ ಮಹಲ್, ಮೈಸೂರು.
6. ಜಿ. ಆರ್. ಕನಕಲಕ್ಷ್ಮಮ್ಮ, ಮಾಜಿ ಮುನಿಸಿಪಲ್ ವೈಸ್ ಪ್ರೆಸಿಡೆಂಟ್.
7. ಶ್ರೀಬಸವೇಶ್ವರ ಸಂಘ, ಮೈಸೂರು.
8. ಗೌರಮ್ಮ ಶಂಕರಪ್ಪ, ಒಂಟಿಕೊಪ್ಪಲ್ ಫೋರ್ಟ್ ಮೊಹಲ್ಲ, ಮೈಸೂರು.
9. ಲಲಿತಾಂಬ ಮಹಾದೇವಪ್ಪಾ,
10. ಮಹಾದೇವಮ್ಮಾ ಸಂಗ್ರಾಜಪ್ಪಾ,
    ಗುರುಸ್ವೀಟ್ ಮಾರ್ಟ್, ನ್ಯೂ ಸಯ್ಯಾಜಿರಾವ್ ರೋಡ್, ಮೈಸೂರು.

ಮೈಸೂರು ನಗರದಲ್ಲಿ ಇಲ್ಲಿಯುವರೆಗೆ ಬಸವ ಗಂಗೋತ್ರಿ ಕಟ್ಟಡ ನಿಧಿಗೆ ಸಹಾಯಗೈದವರು

1.	ಶರಣ. ಬಸವಣ್ಣ ಮತ್ತು ಕೆಂಪನಂಜಮ್ಮ ಗುರು ಸ್ವೀಟ್ ಮಾರ್ಟ್, ಮೈಸೂರು.	10001-00
2.	ಶರಣೆ. ಲಲಿತಾಂಬ ಮಹಾದೇವಪ್ಪ, ಫೋರ್ಟ್ ಮೊಹಲ್ಲ, ಮೈಸೂರು.	1001-00
3.	ಶರಣೆ. ಸರ್ವಮಂಗಳಮ್ಮ ಗುರುಸಿದ್ಧಯ್ಯ,	1001-00
4.	ಶರಣೆ. ಕನಕಲಕ್ಷ್ಮಮ್ಮ ರಂಗಪಾಪಣ್ಣನವರು,	2001-00
5.	ಶರಣೆ. ಶಿವಶರಣಮ್ಮ, ಮೈಸೂರು.	1001-00

ಆನು ಒಲಿದಂತೆ ಹಾಡುವೆ

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.

ಭಾಗ—೩

ಕೇಡಿಲ್ಲದ ಒಡೆತನ

೧೮. ಅಯ್ಯಾ ನಿಮ್ಮ ವಂಶಾವಳಿಯಲು
ಒಬ್ಬ ತೊತ್ತಿನ ಮಗ ಹುಟ್ಟಿದಾತನ ತೊತ್ತಿನ ಮಗ ನಾನಯ್ಯಾ!
ಒಳಿದೊತ್ತು, ಒಳಗದೊತ್ತು, ವಂಶದೊತ್ತು ನಾನಯ್ಯಾ!
ಕೂಡಲ ಸಂಗಮದೇವಾ,
ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ ಎನ್ನ ತೊತ್ತುತನಕ್ಕೆ ಕೇಡಿಲ್ಲ!

ವ್ಯಾಖ್ಯೆ :—ದೇವನ ದೃಷ್ಟಿಯಲ್ಲಿ ವರ್ಗಭೇದವಿಲ್ಲ. ಅವನದು ಕೇಡಿಲ್ಲದ ಒಡೆತನ. ಉದಾಹರಣೆಗೆ ಒಬ್ಬ ಯಜಮಾನ ಎಲ್ಲರನ್ನೂ ಸಮಾನವಾಗಿ ಕಾಣುವ ದೃಷ್ಟಿಕೋನದವನೆಂದಿಟ್ಟುಕೊಳ್ಳೋಣ. ಅವನ ಸೇವಕ ವೃಂದದಲ್ಲಿ ಹಲವಾರು ಜನರಿದ್ದಾರೆ. ಒಳಿದೊತ್ತು ಅಂದರೆ ಹತ್ತಿರದ ರಕ್ತ ಸಂಬಂಧಿಯೇ ಸೇವಕನಾಗಿದ್ದಾನೆ. ಇನ್ನೊಬ್ಬ ಕುಲ ಬಾಂಧವರಲ್ಲಿನವನು. ರಕ್ತ ಸಂಬಂಧ ದೃಷ್ಟಿಯಿಂದ ಸ್ವಲ್ಪ ದೂರದವನೆ! ಇನ್ನೊಬ್ಬ ಇನ್ನೂ ದೂರದವನು. ವಂಶದ ತಂತು ಬಿಟ್ಟರೆ ಹತ್ತಿರದ ಬಾಂಧವ್ಯವೇ ಇಲ್ಲ. ಆ ಯಜಮಾನ ಇವರೆಲ್ಲರನ್ನು ಒಂದೇ ಭಾವದಿಂದ ಕಂಡರೆ ಅವನದು ಆದರ್ಶ ಒಡೆತನ. ಪರಮಾತ್ಮನೂ ಅಂಥ ಆದರ್ಶ ಒಡೆಯನೇ! ತನ್ನನ್ನು ತಾನು ಸಮರ್ಪಿಸಿಕೊಂಡ ಸಂಪೂರ್ಣ ಸದ್ಭಕ್ತನಾಗಲಿ, ಅಥವಾ ಅಜ್ಞಾನಿಯಾದ ಮೂಢಭಕ್ತನೇ ಆಗಿರಲಿ, ಪಾಂಡಿತ್ಯಪೂರ್ಣ ಜ್ಞಾನಯೋಗಿಯಾಗಲಿ! ಈ ಎಲ್ಲರನ್ನೂ ಇಂಬಿಟ್ಟುಕೊಳ್ಳುವ ವಿಶಾಲ ಹೃದಯಿ. ಬಡತನ_ಸಿರಿತನ, ಅಧಿಕಾರ_ಅಂತಸ್ತು, ಈ ಮುಂತಾದುವನ್ನು ಮಾಪನವಾಗಿರಿಸಿಕೊಳ್ಳುವವನಲ್ಲ. ತೊತ್ತುತನ (Surrender) ಶರಣಾಗತಿಯೊಂದಿದ್ದರೆ ಸಾಕು ; ಬಾಕಿ ಎಲ್ಲ ಅವಗುಣಗಳನ್ನು ಮರೆತು ಅಥವಾ ಕಡೆ ಗಣಿಸಿ ಶರಣಾಗತನಾದವನನ್ನು ಒಳಗೊಳ್ಳುವವನು. ಆದ್ದರಿಂದ ನನ್ನಲ್ಲಿ ಆ ಗುಣವಿಲ್ಲ, ಈ ಗುಣವಿಲ್ಲ, ಎಂದು ಕಳವಳಪಡದೆ ಸದ್ಭಕ್ತನು ನಿರಾಳಮನದಿಂದ ಶರಣಾಗಬಹುದು.

ಜಂಗಮಪ್ರಾಣಿ ಬಸವಣ್ಣ

೧೨. ಗಿಳಿಯ ಹಂಜರನಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ
ಬರವ ಹಾರುತ್ತಿದ್ದೆನೆಲಗವ್ವಾ !
ತರಗೆಲೆ ಗಿರುಕೆಂದೊಡೆ ಹೊರಗನಾಲಿಸುವೆ
ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲಗವ್ವಾ !
ಕೂಡಲ ಸಂಗನ ಶರಣರು ಬಂದು, ಬಾಗಿಲ ಮುಂದೆ ನಿಂದು
'ಶಿವಾ' ಎಂದರೆ, ಸಂತೋಷ ಬಟ್ಟೆನೆಲಗವ್ವಾ !

ಇದೊಂದು ವರ್ಣರಂಜಿತ 'ವಿರಹ ಸಹಿತ' ನಾಟಕೀಯ ಚಿತ್ರಣ. ಪ್ರಿಯನ ಬರವಿಗಾಗಿ ಕಾಯುವ ಪ್ರೇಯಸಿಯಂತೆ ಬಸವಣ್ಣನವರು 'ಜಂಗಮ ವಿರಹ'ವೇ ಮೈ ತಳೆದು ನಿಂತಿದ್ದಾರೆ. ಅಂದಿನ ಕಾಲದ ಕರೆಗಂಟೆ (Calling bell) ಯಾದ ಗಿಳಿಯನ್ನು ತಲೆಬಾಗಿಲ ಮುಂದೆ ಇಳಿಬಿಟ್ಟ ಪಂಜರದಲ್ಲಿರಿಸಿದ್ದಾರೆ. ಯಾರಾದರೂ ಬಂದ ತಕ್ಷಣ ಒಳಗಿನವರಿಗೆ ಸೂಚನೆ ಕೊಡುವ, ಆಗಂತುಕರನ್ನು ಸ್ವಾಗತಿಸುವ ತರಬೇತಿ ಅದಕ್ಕೆ ದೊರೆತಿರಲೇ ಬೇಕು. ಬಂದವರು ಕತ್ತಲಲ್ಲಿ ಎಡವ ಬಾರದೆಂದು, ಅಥವಾ ಮನೆಯೊಳಗಿನವರು ನಿದ್ರಿಸಿದ್ದಾರೆಂದು ಮರಳಿ ಹೋಗಬಾರದೆಂದು ದೀಪವನ್ನಿರಿಸಿದ್ದಾರೆ. ಆ ದೀಪ ಆರಬಾರದೆಂದು ಆಗಾಗ ಎಣ್ಣೆಯನ್ನೆರೆಯುತ್ತಾರೆ, ಬತ್ತಿಯ ಚಾಚುತ್ತಾರೆ. ಮೈಯೆಲ್ಲ ಕಣ್ಣಾಗಿ ಪಥವ ನಿರೀಕ್ಷಿಸುತ್ತಾರೆ, ಬರವ ಹಾರೈಸುತ್ತಾರೆ. ಅವಧಾನದಿಂದ ಕಾಯುತ್ತಾರೆ, ತರಗೆಲೆ ಸರಗುಟ್ಟಿದರೂ ಹೊರಗೆ ಬಂದು ಸರ್ವಾಂಗ ಕಿವಿಯಾಗಿ ಆಲಿಸುತ್ತಾರೆ. "ನಾನು ಬರುವುದು ತಡವಾಯಿತೆಂದು ಯಾರಾದರೂ ಬಂದು ಹೋಗಿಬಿಟ್ಟರೋ ? ಅವರನ್ನು ಅಗಲಿಬಿಟ್ಟೆನೆ ?" ಎಂದು ನೆನೆಪಿಸಿಕೊಂಡು ಮನ ಗೆದಗುಟ್ಟುತ್ತದೆ. ಕೂಡಲ ಸಂಗನ ಶರಣರು ಬಂದು ಬಾಗಿಲ ಮುಂದೆ ನಿಂತು 'ಶಿವಾ' ಎಂದರೆ, ಸಂತೋಷದ ಹೊನಲು ಉಕ್ಕಿ ಹರಿಯುತ್ತದೆ.

ಇಲ್ಲಿ ಬಸವಣ್ಣನವರು ಕಾಯುವುದು ಯಾರಿಗಾಗಿ ? ಪ್ರಧಾನ ಮಂತ್ರಿ ಜನಪ್ರಿಯ ನೇತಾರ ಬಸವಣ್ಣನವರ ಸಹಾಯ ಯಾಚಿಸಿ, ನ್ಯಾಯಬೇಡಿ, ಅಥವಾ ನೆರವನ್ನು ನಿರೀಕ್ಷಿಸಿ ಆಸೆ–ಆಕಾಂಕ್ಷೆಗಳಿಂದ ಬರುವ ಪ್ರಜೆಗಳಿಗಾಗಿಯೋ ? ಮಾತೃ ಹೃದಯಿ ಮಹಾನುಭಾವನ ಆಶ್ರಯಕೋರಿ ಧಾವಿಸುವ ದುಃಖಿತರಿಗೋ ? ಧಾರ್ಮಿಕ ಸಂಸ್ಕಾರ, ಮಾರ್ಗದರ್ಶನಕ್ಕೆ ಹಾತೊರೆದು ಆಗಮಿಸುವ ಸಾಧಕರಿಗಾಗಿಯೋ ? ತಮ್ಮ ಬಾಳನ್ನು ಪರಿಪಕ್ವಗೊಳಿಸಿಕೊಂಡು, ಜ್ಞಾನದೇಗುಲಗಳಾಗಿ ಮುಮುಕ್ಷುಗಳೆಂಬ ದೀವಿಗೆಗಳನ್ನು ಹಚ್ಚಬಲ್ಲ, ಬಸವಣ್ಣನವರ ಕ್ರಾಂತಿಗೆ ಸಹಕಾರಿಗಳಾಗಿ ಬಸವಣ್ಣನೊಡನೆ ಹೆಗಲು

ಜೋಡಿಸಬಲ್ಲ ಸಿದ್ಧಪುರುಷರಿಗಾಗಿಯೋ ? "ಶರಣರು" ಎಂಬ ಈ ಪದ ವಿವಿಧಕ್ಷೇತ್ರಗಳ ಜನರನ್ನೊಳಗೊಂಡಿರಬೇಕೆಂದು ಅನ್ನಿಸದಿರದು. ಇಂಥವರ ಬರವಿಗಾಗಿ 'ವಿರಹಿ'ಯಾಗಿ ಬಸವಣ್ಣನವರು ಕಾಯುವ ಚಿತ್ರಣ ಈ ವಚನದಲ್ಲಿ ಜೀವಂತವಾಗಿ, ಪ್ರಭಾವಶಾಲಿಯಾಗಿ ಮೂಡಿನಿಂತಿದೆ.

ಶರಣಾದ ವೀಣೆ

೧೩. ಎನ್ನ ಕಾಯವ ದಂಡಿಗೆಯ ಮಾಡಯ್ಯಾ ;
ಎನ್ನ ಶಿರವ ಸೋರೆಯ ಮಾಡಯ್ಯಾ ;
ಎನ್ನ ನರವ ತಂತಿಯ ಮಾಡಯ್ಯಾ
ಎನ್ನ ಬೆರಳ ಕಡ್ಡಿಯ ಮಾಡಯ್ಯಾ !
ಬತ್ತೀಸ ರಾಗವ ಹಾಡಯ್ಯ ; ಉರದಲೊತ್ತಿ ಬಾರಿಸು
ಕೂಡಲ ಸಂಗಮದೇವಾ.

ಜೀವನವನ್ನು ಭವ್ಯಗೊಳಿಸುವ ಪ್ರಯತ್ನದಲ್ಲಿ, ದೇಹವನ್ನು ದೈವೀಕರಿಸುವ ಸಾಧನೆಯಲ್ಲಿ ಬಸವಣ್ಣನವರು ಕೊಡುವ ಸುಂದರ ಉಪಮೆಗಳು ಎರಡು ೧. ದೇಹವನ್ನು ದೇವಾಲಯ ಮಾಡುವುದು ಮತ್ತು ೨. ಇದನ್ನು ಸುಂದರ ವೀಣೆಯನ್ನಾಗಿ ಮಾಡಿ ದೇವ ವೈಣಿಕನ ಕೈಗೆ ಸಮರ್ಪಿಸುವುದು.

ವೀಣೆ–ವೈಣಿಕನ ಮಧುರ ಸಂಯೋಗದಲ್ಲಿ ಸಮ್ಮಿಶ್ರ ಭಾವನೆಗಳ ಲಹರಿ ಇದೆ. ವೀಣೆ ತನ್ನನ್ನು ತಾನು ಸಂಪೂರ್ಣವಾಗಿ ವೈಣಿಕನ ಕೈಯಲ್ಲಿ ಸಮರ್ಪಿಸಿಕೊಳ್ಳುವದು. ವೈಣಿಕ ಅತ್ಯಂತ ಮಮತೆಯಿಂದ, ತನ್ಮಯತೆಯಿಂದ ಅದರ ಮೇಲೆ ಬೆರಳಾಡಿಸುವನು. ಅವನು ಮಿಡಿಸುವ ಧ್ವನಿಯಲ್ಲಿ, ನುಡಿಸುವ ಗಾನದಲ್ಲಿ ವ್ಯಕ್ತವಾಗುವುದು ವೈಣಿಕನ ಪ್ರತಿಭೆ–ಪಾಂಡಿತ್ಯಗಳೇ ವಿನಾ ವೀಣೆಯ ವೈಶಿಷ್ಟ್ಯತೆಯಲ್ಲ. (ವೀಣೆಯ ಪಾತ್ರವೂ ಅಷ್ಟೇ ಮಹತ್ವಪೂರ್ಣ. ಅದರ ಸೋರೆ ಸೀಳಿರಬಾರದು, ತಂತಿ ಕಿತ್ತಿರಬಾರದು, ಕಡ್ಡಿ (ಕಿವಿ) ಸಡಿಲಾಗಿರಬಾರದು. ಹಳತಾದ ವೀಣೆ ಸುಮಧುರನಾದದ ತವರು. ಪರಿಪಕ್ವನಾದದ ಗರ್ಭ. ಒಳ್ಳೆಯ ವೀಣೆಯಿಂದ ತನಗೆ ಬೇಕಾದ ಧ್ವನಿಯನ್ನು ವೈಣಿಕ ಮಿಡಿಸಬಲ್ಲನೇ ವಿನಾ ಒಡಕು ವೀಣೆಯಿಂದಲ್ಲ; ಅಪರಿಪಕ್ವ ಹೊಸ ವೀಣೆಯಿಂದಲ್ಲ) ಸಂಪೂರ್ಣವಾಗಿ ಅದೇ ರೀತಿ ಭಕ್ತನು ತನ್ನನ್ನು ತಾನು ದೇವನ ದಿವ್ಯ ಹಸ್ತಕ್ಕೆ ಸಮರ್ಪಿಸಿಕೊಳ್ಳುವನು. ಹೀಗೆ ಶರಣಾಗತನಾದವನನ್ನು ಮಾತ್ರವೇ ದೇವರು ಸ್ವೀಕರಿಸುವನು, ಅವನ ಬಾಳ ವೀಣೆಯಿಂದ ಸುಮಧುರ ಸಂದೇಶ ತರಂಗಗಳನ್ನು ಮಿಡಿಸುವನು.

ವೀಣೆಯ ಮುಖ್ಯಾಂಗ ದಂಡಿಗೆ ; ಅದು ಭದ್ರವಿರಬೇಕು. ಭಕ್ತನ ಮುಖ್ಯಾಂಗ

ಕಾಯ, ಅದು ಸಮ್ಯಕ್ ಚಾರಿತ್ರ ಪಥದಲ್ಲಿರಬೇಕು ; ದೌರ್ಬಲ್ಯದ ತವರಾಗಬಾರದು. ದಂಡಿಗೆಗೆ ವೀಣೆಯ ರೂಪ (form) ಬರುವುದು ಸೋರೆ (ಬುರುಡೆ)ಯಿಂದ. ಭಕ್ತನಿಗೆ ಸ್ವ-ರೂಪ ಒದಗುವುದು ವಿಚಾರವಂತಿಕೆ-ಜ್ಞಾನಗಳಿಂದ. ಅಂತೆಯೇ ಶಿರವು ಸೋರೆಯಾಗುವದು. ವೀಣೆಗೆ ರೂಪವೇನೋ ಬಂದಿತು ; ನಂತರ ನಾದ ಬರುವುದು ತಂತಿಯಿಂದ ತಾನೆ ? ಹಾಗೆ ಭಕ್ತನಿಗೆ ಸತ್ವ ಮೈಗೂಡುವುದು ಭಾವಾರ್ಪಣೆ_ಶರಣಾಗತಿಗಳಿಂದ. ತಂತಿ ಸಡಿಲದಿರಲು, ಶೃತಿಗೆ ಸರಿಯಾಗಿ ನಿಲ್ಲಲು ಕಡ್ಡಿ (ಕಿವಿಗಳು)ಗಳು ಬಿಗಿಯಾಗಿರಬೇಕು. ಹಾಗೆಯೇ ಭಕ್ತನ ಕಾಯವೀಣೆ ಸುಭದ್ರವಾಗಿ ನಿಲ್ಲಲು, ಭಾವದ ತಂತಿ ಸ್ಥಿರವಾಗಿರಲು ಸಮ್ಯಕ್ ಕೃತಿಯ (ಬೆರಳು=ಕ್ರಿಯಾಂಗ) ಕಡ್ಡಿ ಬಿಗಿಯಾಗಿರಬೇಕು. ಈಗ ಸಿದ್ಧವಾಗಿದೆ ಸಾಧಕ ಜೀವನದ ವೀಣೆ. ಕಾರುಣ್ಯನಿಧಿ ಮಂಗಲಾಂಗ ಪರಮಾತ್ಮನ ದಿವ್ಯ ಹಸ್ತದಲ್ಲಿ ಮಲಗಿದೆ. ನುಡಿಸುವುದೀಗ ಅವನ ಕರ್ತವ್ಯ. ಅದರಲ್ಲಿಯೇ ಅವನ ಜಾಣ್ಮೆ, ಬಲ್ಮೆ, ಮೇಲ್ಮೆ. "ಮೂವತ್ತೆರಡು ಮೂಲರಾಗಗಳನ್ನು ಹಾಡು" ಎಂಬಲ್ಲಿ "ನನ್ನ ಬದುಕು ಸಮಗ್ರಗೊಳ್ಳಲಿ ; ಬಾಳಿನ ವಿವಿಧ ಮುಖಗಳಿಗೆ ಬೇಕಾದ ಸಂದೇಶ ನನ್ನಿಂದ ಸಿಗಲಿ" ಎಂಬ ಕಳಕಳಿಯ ಪ್ರಾರ್ಥನೆ ಇದೆ. ಎಷ್ಟೇ ಒತ್ತಿ ಒತ್ತಿ ಬಾರಿಸಿದರೂ 'ಭಕ್ತ ವೀಣೆ' ನೋಯದು, ನಲುಗದು, ಪರಮ ಸಂತೋಷದಿಂದ ಹಾಡುವುದು. ವೀಣೆಯ ತಂತಿಯನ್ನು ಎಡಗೈಯಿಂದ ಆಳವಾಗಿ ಅದುಮಿ; ಹಿಂದೆ_ಮುಂದೆ ಸುದೀರ್ಘವಾಗಿ ಎಳೆದು ಬಲಗೈಯಲ್ಲಿ ಮೀಂಟಿದಂತೆಲ್ಲ ಸೂಕ್ಷ್ಮಾತಿಸೂಕ್ಷ್ಮ ನಾದ, ಕೇಳುಗರ ಮನ ಉದ್ದೀಪಿಸುವ ಮಾಧುರ್ಯ. ವೀಣೆಯ ವ್ಯಥೆ, ಕೇಳುಗರಿಗೆ ನಾದದ ಸುಧೆ. ಹಾಗೆ ದೇವನು ಭಕ್ತನನ್ನು ಕರಗಿಸಿ_ಕೊರಗಿಸಿ, ನೋಯಿಸಿ_ನಲುಗಿಸಿ ಒತ್ತಿ ಬಾರಿಸಿದಂತೆಲ್ಲ ಲೋಕಕ್ಕೆ ಆದರ್ಶಗಾನ, ಮಾರ್ಗದರ್ಶಕ ಸಂದೇಶ. "ನೀನು ಎಷ್ಟೇ ಒತ್ತಿ ಒತ್ತಿ, ಹೃದಯವು ನಲುಗುವಂಥ ಒತ್ತಡ ಹೇರಿದರೂ ಅಪಶೃತಿ ನುಡಿದು, ಪಥದಿಂದ ದೂರಸರಿವ ಅಭದ್ರ ಬಾಳಿದಲ್ಲ, ತತ್ತ್ವನಿಷ್ಠೆಯಿಂದ ಗಟ್ಟಿಗೊಂಡ ನಿಲುವು" ಎಂಬ ಕೆಚ್ಚಿನ ಮನೋಭಾವವೂ "ಉರದ ಲೊತ್ತಿ ಬಾರಿಸು" ಎಂಬ ಉಕ್ತಿಯಲ್ಲಿದೆ. ಒಟ್ಟಾರೆ ಹೇಳಬೇಕೆಂದರೆ ದೇವ-ಭಕ್ತರ ಮಧುರ ಸಂಯೋಗವನ್ನು, ಭಕ್ತನ ಶರಣಾಗತಿಯ ಉತ್ಕಟತೆಯನ್ನು ಇಷ್ಟು ಮಾರ್ಮಿಕವಾಗಿ ಹೇಳಲು ಇನ್ನಾವುದೇ ಹೋಲಿಕೆಯಿಂದ ಸಾಧ್ಯವಿಲ್ಲವೆನಿಸುತ್ತದೆ.

ಅರಿವಿಲ್ಲದ ಭಕ್ತಿ

೧೪. ಗೀಜಗನ ಗೂಡು, ಕೋಡಗದಣಲ ಸಂಚ
ಬಾದುಮೆಯ ಮದುವೆ, ಬಾವುಲ ಬಿದ್ದಿನಂತೆ
ಜೂಜುಗಾರನ ಮಾತು, ಬೀದಿಯ ಗುಂಡನ ಸೊಬಗು,

ಓಡಿನೊಳಗಗೆಯ ಹೊಯ್ದಂತೆ, ಕಾಣಿರೋ !
ಶಿವನಾದಿಯಂತವನರಿಯದವನ ಭಕ್ತಿ
ಸುಖ ಶೋಧನೆಗೆ ಮದ್ದ ಕೊಂಡಂತೆ,' ಕೂಡಲ ಸಂಗಮದೇವಾ !

ಇದು ಜ್ಞಾನರಹಿತ ಉದ್ವಿಗ್ನ ಮೂಢಭಕ್ತಿಯ ಪೊಳ್ಳುತನವನ್ನು ಎತ್ತಿ ತೋರುವ ವಚನ. ಸಾಮಾನ್ಯವಾಗಿ ಗೀಜಗ ಗೂಡು ಕಟ್ಟುವ ಜಾಗ ಹೊಳೆ_ಹಳ್ಳಗಳ, ಕೆರೆ_ಕೊಳಗಳ ದಡೆ. ನೀರಿನ ಮೇಲೆ ಬಾಗಿರುವ ಕೊಂಬೆಯಲ್ಲಿ ಕಷ್ಟಪಟ್ಟು ಗೂಡುಕಟ್ಟಿ ತಾನಲ್ಲಿ ಅತ್ಯಂತ ನೆಮ್ಮದಿಯಾಗಿ, ಸ್ಥಿರವಾಗಿ ಇರುವೆನೆಂದು ಭಾವಿಸುತ್ತದೆ. ಅದರದು ತೂಗಾಡುವ ಅಸ್ಥಿರದ ಗೂಡು, ವೇಗವಾಗಿ ಗಾಳಿಬೀಸಿದರೂ ನೀರಿನ ಪಾಲು, ಪ್ರವಾಹ ಒದಗಿದರೂ ನದಿಗೆ ಆಹಾರ. ಹೀಗಿದ್ದರೂ ಸುಖವಾಗಿರುವೆನೆಂಬ ಭ್ರಮೆ. ಕೋತಿಯು ತನ್ನ ದವಡೆಯೊಳಗಣ ಚೀಲ ಬ್ರಹ್ಮಾಂಡವನ್ನೇ ಅಡಗಿಸಿಕೊಳ್ಳುವುದೇನೋ ಎಂಬ ಭರವಸೆಯಿಂದ, ಆತುರಾತುರವಾಗಿ ಗಬಗಬ ಕೈಗೆ ಸಿಕ್ಕಿದುದನ್ನು ತುರುಕಿಕೊಂಡು, ತಿನ್ನಲಾರಂಭಿಸುತ್ತದೆ. "ಬಾದುಮೆಯ ಮದುವೆ" ಎಂದರೆ ವನದೇವತೆ ಬನಶಂಕರಿಯ ಮದುವೆ ಶೃಂಗಾರ. ವನದೇವತೆ ಚಿರಯುವತಿ. ಸದಾ ವಿವಾಹ ಸನ್ನದ್ಧಳಾಗಿ ಹಸಿರುಡೆಯನ್ನುಟ್ಟು, ಪುಷ್ಪಾಲಂಕೃತಳಾಗಿ ನಿಲ್ಲುವಳು. ಆಕೆಯನ್ನು ವರಿಸುವವರಾರು ? ಭರವಸೆಯಲ್ಲೇ ಕಾಲಯಾಪನೆ. ಬಾವುಲ ಪಕ್ಷಿ ತನ್ನ ಅಮೇಧ್ಯವನ್ನು ಮರಳಿ ತಾನೇ ತಿನ್ನುವದಂತೆ ಅದನ್ನೇ ಅತ್ಯಂತ ರುಚಿ ಎಂದು ಭಾವಿಸುವದಂತೆ.

ಇದೇ ರೀತಿ ಇರುವವು ಜೂಜುಗಾರನ ಸವಿ ಮಾತುಗಳು, ಬೀದಿಯ ಗುಂಡನ ವೈಯ್ಯಾರ. ಅವಕ್ಕೆ ನೆಲೆಯಿಲ್ಲ, ಗುರಿ ಇಲ್ಲ. ಆದರ್ಶ ಮೊದಲೇ ಇಲ್ಲ. ಇವರ ಬದುಕು ಕಬ್ಬಿಣದ ಹೆಂಚಿನ ಮೇಲೆ ಸಸಿಯ ನೆಟ್ಟಂತೆ. 'ಕೆಳಯಿಂಕೆ ಬೇರೂರದು, ಮೇಲೇರಿ ಫಲವಾಗದು.' ಜೂಜುಗಾರರು ಮರುಳ್ಮಾಡುವ ಮಾತುಗಳನ್ನಾಡಿ ಜನರನ್ನು ನಂಬಿಸಿ, ಅವರಿಂದ ಹಣ ಪಡೆದು ಪಾರಾಗುವರು. ಬೀದಿಯ ಗುಂಡನು ಮನೋರಂಜಕ ಮಾತುಗಳನ್ನಾಡುತ್ತ, ಬೀದಿಯ ಗೂಳಿಯಂತೆ ತಿರುಗುತ್ತ, ಹಚ್ಚಗಿದ್ದಲ್ಲಿ ಮೇಯ್ದು, ಬೆಚ್ಚಗಿದ್ದಲ್ಲಿ ಮಲಗಿ ಐಷಾರಾಮ (Easy going) ವಾಗಿ ಕಾಲಕಳೆದು ಬಿಡುವ ಸೊಗಸುಗಾರ.

ಇದೇ ರೀತಿ ಜ್ಞಾನದ ಹಿನ್ನೆಲೆಯಿಲ್ಲದೆ ಭಕ್ತನ ವೇಷ ಹಾಕಿ ಕೊಂಡವನ ಪರಿ. ದೇವನ ಸ್ವರೂಪವೇನು ? ಆತ್ಮದ ಆದಿ ಹೇಗೆ, ಅಂತ್ಯ ಹೇಗೆ ? ಬಾಳಿನ ಗುರಿ ಯಾವುದಿರಬೇಕು ? ಜೀವನದ ಸಾರ್ಥಕತೆ ಏತರಲ್ಲಿದೆ ? ಇದೊಂದನ್ನೂ ಆಲೋಚಿಸದೆ, ಆತ್ಮ ಚಿಂತನೆ ಮಾಡಿಕೊಳ್ಳದೆ ಆವೇಶದಿಂದಲೋ, ಅಜ್ಞಾನದಿಂದಲೋ ಭಕ್ತನ_ವಿರಕ್ತನ

ವೇಷ ಧರಿಸುವುದು "ಮದ್ದು ತಿಂದು ಸುಖ ಪಡೆಯುವೆ" ಎಂಬ ಪ್ರಯತ್ನದಂತೆ. ಮಾನಸಿಕ ನೆಮ್ಮದಿ ಪಡೆಯಬೇಕೆಂಬ ಮನುಷ್ಯ ಅದಕ್ಕೆ ತಕ್ಕ ಜೀವನ ನಡೆಸಬೇಕೇ ವಿನಾ, ಏನಾದರೂ ಮದ್ದು ತಿಂದು ಸುಖ ಪಡೆಯಲು ಸಾಧ್ಯವೆ ? ಅಫೀಮು ಸೇದಿಯೋ, ಸೆರೆಗುಡಿದು ಅವನು ಪಡೆಯುವುದು ಭ್ರಮಾತ್ಮಕ ಮಂಕು, ಶಾಂತಿ ಪ್ರಧಾನ ಸುಖವಲ್ಲ. ಅರಿವಿಲ್ಲದೆ ಅಧ್ಯಾತ್ಮ ಪಥಕ್ಕೆ ಬಂದ ಮೂಢಭಕ್ತನ ಬದುಕು ಗೀಜಗದ ಗೂಡಿನಷ್ಟು ಅಸ್ಥಿರ; ಕೋಡಗದ ಆಹಾರ ಸಂಗ್ರಹದಷ್ಟು ಅಜ್ಞಾನಯುಕ್ತ, ವನದೇವತೆಯ ಮದುವೆಯಷ್ಟು (ನಿ) ಆಶಾದಾಯಕ, ಬಾವುಲ ಬಿದ್ದಿನಂತೆ ಅಸಹನೀಯ. ಜೂಜುಗಾರನ ಮಾತಿನಂತೆ "ತೋರಲು ಇಂಪು ಹೊರವೇಷಕ್ಕೆ, ಅಂತರಂಗದಲ್ಲಿ ಅತ್ಯಂತ ಭೀಕರ ಬೀದಿಯ ಗುಂಡನ ಸೊಬಗಿನಂತೆ ತೋರಿಕೆಯದು (ಒಳ್ಳಿಹ ಪ್ಮೈಲಾರನ ಒಳಗೆಲ್ಲ ಸೆಣಬು, Superficial) ಅವನ ಪಾರಮಾರ್ಥ ಸಾಧನೆ ಹೆಂಚಿನ ಮೇಲೆ ಸಸಿಯನೆಟ್ಟಂತೆ. ಅಧ್ಯಾತ್ಮ ವಿದ್ಯೆಯಲ್ಲಿ ಬೇರೂರಿಲ್ಲ, ಆದರ್ಶ ಗುರಿಯ ಫಲವಿತ್ತಿಲ್ಲ, ಅದರಿಂದ ಅವನಿಗೆ ನೆಮ್ಮದಿಯಿಲ್ಲ, ಲೋಕಕ್ಕೆ ಉಪಕಾರವಿಲ್ಲ.

ಅರ್ಥರಹಿತ ಬದುಕು

೧೫. ಆನೆಯನೇರಿಕೊಂಡು ಹೋದಿರೆ ನೀವು
ಕುದುರೆಯನೇರಿಕೊಂಡು ಹೋದಿರೆ ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣಾ !
ಸತ್ಯದ ನಿಲುವನರಿಯದೆ ಹೋದಿರಲ್ಲಾ !
ಸದ್ಗುಣವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ !
ಅಹಂಕಾರವೆಂಬಸದ ಮದಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ !
ನಮ್ಮ ಕೂಡಲ ಸಂಗಮ ದೇವರನರಿಯದೆ
ನರಕಕ್ಕೆ ಭಾಜನವಾದಿರಲ್ಲಾ !

ಅಧಿಕಾರ, ಸಂಪತ್ತು, ಶೃಂಗಾರಗಳಲ್ಲೇ ನಂಬಿನಚ್ಚಿ ಕಾಲ ಕಳೆಯುವ ಜನರನ್ನು ಉದ್ದೇಶಿಸಿ ಈ ವಚನವನ್ನು ನುಡಿಸಿದ್ದಾರೆ. ಇನ್ನೊಂದೆಡೆ "ಅರಸುವಿಚಾರ, ಸಿರಿಯು, ಶೃಂಗಾರ ಸ್ಥಿರವಲ್ಲ ಮಾನವ" ಎಂದು ಹೇಳಿದ್ದಾರೆ. ಅವನ್ನು ಇಲ್ಲಿ ಅನ್ವಯಿಸಿ ಅರ್ಥೈಸೋಣ. ಆನೆ ಅಧಿಕಾರದ ಸಂಕೇತ; ಕುದುರೆ ಸಂಪತ್ತಿನ ಕುರುಹು, ಕುಂಕುಮ–ಕಸ್ತೂರಿ ಶೃಂಗಾರದ ಸಾಧನಗಳು. ಅಧಿಕಾರವೊಂದೇ ಶಾಶ್ವತವೆಂದು ನಂಬಿ, ಅದರ ಗಳಿಕೆ

ಸಂರಕ್ಷಣೆಗಳಲ್ಲೇ ನಿಮ್ಮ ಬಾಳೆಲ್ಲ ವ್ಯರ್ಥವಾಯಿತು. ಭೌತಿಕ ಸಂಪತ್ತನ್ನು ವರ್ಧಿಸಿಕೊಳ್ಳಬೇಕೆಂಬ ತೀಕ್ಷ್ಣ ದಾಹದಿಂದ ಮಾಡಬಾರದ್ದನ್ನೆಲ್ಲ ಮಾಡಿದ ಸಿರಿವಂತ ವೃಂದವೇ. ನಿಮ್ಮ ಬಾಳೆಲ್ಲ ವ್ಯರ್ಥವಾಗಿ ವ್ಯಯವಾಯಿತು. ದೇಹದ ಸೌಂದರ್ಯವನ್ನೇ ಪ್ರಧಾನವಾಗಿರಿಸಿಕೊಂಡು, ಅದರ ಅಂದ-ಚೆಂದ, ರಕ್ಷಿಸಿ ಒನಪು-ಒಯ್ಯಾರಗಳಲ್ಲಿ ಕಾಲಕಳೆದ ವಿಲಾಸಿಗಳೇ ಯಾವ ಸಾರ್ಥಕತೆ ಸಾಧಿಸಿದಂತಾಯ್ತು ?

ಜೀವಮಾನದಲ್ಲಿ ಸತ್ಯದ ಮೌಲ್ಯವನ್ನರಿಯದೇ ಹೋದಿರಿ. ಬಾಳಿನ ಕ್ಷೇತ್ರದಲ್ಲಿ ಆದರ್ಶಗಳೆಂಬ ಬೀಜವ ಬಿತ್ತಿ, ಸದ್ಗುಣಗಳ ಫಲವ ತೆಗೆಯದೆ ವ್ಯರ್ಥದ ಆಸೆಗಳಿಗೆ ಬಲಿಯಾದಿರಿ. 'ನಾನು ಅಧಿಕಾರ ಉಳ್ಳವ', 'ನಾನು ಅಧಿಕ ಸಂಪತ್ತಿಗೊಡೆಯ', 'ನಾನು ಅಪೂರ್ವ ಚೆಲುವ' ಎಂಬ ರಾಜ್ಯಮದ, ಧನಮದ, ರೂಪಮದಗಳೆಂಬ ಉನ್ಮತ್ತ ಸಲಗವನ್ನೇರಿ ಸಾಗಿದಿರಿ. ಈ ಮದೋನ್ಮತ್ತ ಸಲಗದ ಕಾಲ್ತುಳಿತಕ್ಕೆ ಸಿಕ್ಕಿ, ಆನೆಯ ಕಾಲಿಗೆ ಸಿಕ್ಕ ಬಾಳೆ ಗಿಡಗಳಂತೆ, ಅನೇಕ ಮುಗ್ಧ ಜೀವಗಳು ಹತವಾದವು. ಒಂದು ಬಗೆಯ ಭ್ರಾಂತಿ ಆವರಿಸಿರುವಾಗ, ಮಾಡುವ ಪಾಪಕಾರ್ಯಗಳ ಅರಿವೂ ಸಹ ಇಲ್ಲದೆ ಸಾಗುವ ನೀವು ವಿಧಿಯ ಕ್ರೂರ ದೃಷ್ಟಿಗೆ ಸಿಕ್ಕಿರುವಿರೆಂಬುದನ್ನು ಅರಿಯದೆ ಹೋದಿರಿ.

ಯಾವ ಪರಮಾತ್ಮನ ಕೊಡುಗೆಗಳಾಗಿ ಅಧಿಕಾರ, ಸಂಪತ್ತು, ದೇಹಸೌಂದರ್ಯ ಕೊಟ್ಟ ಆ ದಾತನನ್ನೇ ಮರೆತು, ಅವನನ್ನು ಅರಿಯದೆ ಸ್ವಾರ್ಥ–ಅಜ್ಞಾನಗಳ ಪಥದಲ್ಲಿ ಸಾಗಿದ್ದೀರಲ್ಲ. ಸಾರ್ಥಕ ಬಾಳಿಗೆ ಸಾಧನವಾದ ಮಾನವ ಜೀವನವನ್ನು ವ್ಯರ್ಥಗೈದುಕೊಂಡು ನರಕಕ್ಕೆ ಪಾತ್ರರಾದಿರಲ್ಲ" ಎಂದು ಬಸವಣ್ಣನವರು ಅಂಥವರನ್ನು ಕಂಡು ವಿಷಾದಿಸುತ್ತಾರೆ. (ಸಶೇಷ) ★

ನಗೆ ಹನಿ

ಖಗೋಲ ಶಾಸ್ತ್ರದ ಪಾಠವನ್ನು ಹೇಳಿಕೊಡುತ್ತಾ ಶಿಕ್ಷಕರು ಕೇಳಿದರು :
"ಮಗು, ನಿನ್ನೂರು ಯಾವುದು ?"
"ಬೆಳಗಾಂ ಸರ್...."
"ನಿನ್ನ ಊರು ದೂರವೋ ಚಂದ್ರಗ್ರಹ ದೂರವೋ ?
"ನನ್ನೂರು ದೂರ, ಚಂದ್ರಗ್ರಹ ಹತ್ತಿರ...."
"ಅದ್ಹೇಗ...." ವಿಸ್ಮಿತರಾಗಿ ಕೇಳಿದರು.
"ಬೆಳಗಾಂ ಇಲ್ಲಿಂದ ಕಣ್ಣಿಗೆ ಕಾಣದು; ಚಂದ್ರಲೋಕ ಕಣ್ಣಿಗೆ ಕಾಣುತ್ತದೆ...."

ದಿನಾಂಕ 20-11-78 ರಂದು ಪುರಭವನದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ

ಮಾತೆಯವರು ಮಾಡಿದ ಭಾಷಣದ ಸಂಕ್ಷಿಪ್ತ ವರದಿ

ಓಂ ಶಾಂತಿಃ ಶಾಂತಿಃ ಶಾಂತಿಃ

ಕನ್ನಡ ಕುಲಬಾಂಧವರೇ ಇಂದು ಕನ್ನಡ ರಾಜ್ಯೋತ್ಸವವನ್ನಾಚರಿಸಲು ತಾವುಗಳು ಸಮಾವೇಶವಾಗಿದ್ದೀರಿ. ಕನ್ನಡ ಚಳುವಳಿಗಾರರು ಉತ್ಸಾಹಿಗಳಾಗಿ ಈ ಸಮಾರಂಭ ವನ್ನು ಏರ್ಪಡಿಸಿದ್ದಾರೆ. ಅತ್ಯಂತ ಸಾಂಕೇತಿಕವಾದ ನಾಡಹಬ್ಬವಿದು. ಹಬ್ಬಗಳಲ್ಲಿ ಅನೇಕ ವಿಧ. ಕೆಲವು ಧಾರ್ಮಿಕ ಸಂಕೇತ ಉಳ್ಳವು, ಮತ್ತೆ ಕೆಲವು ಸಾಂಸ್ಕೃತಿಕ ಹಿನ್ನೆಲೆಯುಳ್ಳವು. ಕನ್ನಡ ರಾಜ್ಯೋತ್ಸವವು ಕನ್ನಡ ನಾಡು-ನುಡಿಗಳನ್ನು ವಿಶೇಷವಾಗಿ ಪ್ರತಿನಿಧಿಸುವ ಹಬ್ಬ.

ಒಂದು ಕಾಲದಲ್ಲಿ ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿದ್ದ ಕನ್ನಡನಾಡು ಕಾಲಾನಂತರದಲ್ಲಿ ಹರಿದು ಹಂಚಿ ಹೋಯಿತು. ರಾಜಮಹಾರಾಜರ ಆಳ್ವಿಕೆಗೆ ಸಿಕ್ಕಾಗ ಒಂದು ಬಗೆಯಲ್ಲಿ ರೂಪುಗೊಂಡಿದ್ದರೆ, ಬ್ರಿಟಿಷ್ ಆಡಳಿತದಲ್ಲಿ ಬೇರೊಂದು ರೂಪು ತಳೆದಿತ್ತು. ಸ್ವಾತಂತ್ರ್ಯ ಸಿಕ್ಕಾನಂತರ ರಾಷ್ಟ್ರೀಯ ಮುಖಂಡರು ಭಾಷೆಯನ್ನು ಬಲಗೊಳಿಸಲು, ಭಾಷೆಯ ಬಲದ ಮೇಲೆ ನಾಡನ್ನು ಒಂದುಗೂಡಿಸಲು ನಿರ್ಧರಿಸಿ ವಿವಿಧ ಭಾಷೆಗಳ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡಣೆ ಮಾಡಲು ಯೋಚಿಸಿದರು. ಆಗ ಮಹಾರಾಷ್ಟ್ರ, ತಮಿಳುನಾಡು, ಆಂಧ್ರ, ಕೇರಳ ಮುಂತಾದ ರಾಜ್ಯಗಳಿಗೆ ಸೇರಿದ್ದ ಕನ್ನಡ ಪ್ರಾಂತ್ಯಗಳು ಒಂದುಗೂಡಿ ಸ್ವತಂತ್ರ ರಾಜ್ಯವಾಗಲು ಅನುವಾಯಿತು. ಹೀಗೆ ಮಾತೃಭಾಷೆಯ ಸೂತ್ರದ ಮೇಲೆ ಕನ್ನಡಿಗರ ಒಕ್ಕೂಟ ರಚನೆಯಾಯಿತು.

ನಂತರದ, ಮಹತ್ವದ ಮತ್ತೊಂದು ಸಾಧನೆಯೆಂದರೆ 'ಕರ್ನಾಟಕ' ಎಂಬ ನೂತನ ನಾಮಕರಣ. ಕೋಟಿ ಕೋಟಿ ಕನ್ನಡಿಗರ ಹಂಬಲ ಈಡೇರಿ ವಿಶಾಲ ಮೈಸೂರು-ರಾಜ್ಯ ಕರ್ನಾಟಕವೆಂಬ ಅಭಿಧಾನ ತಾಳಿತು. ಕರ್ನಾಟಕ ಸಂಗೀತ ಎಂದು ದಕ್ಷಿಣಭಾರತದ ಸಂಗೀತ ಶೈಲಿಗೆ ನಾಮಾಂಕಿತವಿರುವಾಗ ದಕ್ಷಿಣ ಭಾರತದಲ್ಲಿ ಕರ್ನಾಟಕದ ಸಾಂಸ್ಕೃತಿಕ, ಮತ್ತು ಸಾಹಿತ್ಯಕ ಪರಂಪರೆಗೆ ಎಂಥ ಸ್ಥಾನವಿದೆ ಎಂದು ಅರ್ಥವಾಗದಿರದು.

ಕರ್ನಾಟಕ ನೆಲದ ಭಾಷೆ ಕನ್ನಡ. ದ್ರವಿಡ ಭಾಷೆಗಳಲ್ಲಿ ಒಂದಾದ ಈ ಕನ್ನಡವು ಅತ್ಯಂತ ಮೃದುವಾದ, ಮುದ್ದಾದ ಬರವಣಿಗೆಯ ಮತ್ತು ಪರಿಪೂರ್ಣ ವರ್ಣ ಮಾಲಿಕೆಯ ಸೊಗಸನ್ನುಳ್ಳ ಭಾಷೆ. ಇದು ಕನ್ನಡಿಗರ ಮಾತೃಭಾಷೆಯಾದ್ದರಿಂದ ರಾಜ್ಯದಲ್ಲಿ ಎಲ್ಲ ಹಂತಗಳಲ್ಲೂ ಭಾಷೆಯು ಬಳಕೆಯಾಗಬೇಕು ಮತ್ತು ಇದಕ್ಕೆ ಅಗ್ರ ಸ್ಥಾನ ಸಿಗಬೇಕು. ಏಕೆಂದರೆ, ಓರ್ವ ವ್ಯಕ್ತಿ ತನ್ನ ಮಾತೃಭಾಷೆಯಲ್ಲಿ ಎಷ್ಟು ಚೆನ್ನಾಗಿ ತನ್ನ ಭಾವನೆಗಳನ್ನು ವ್ಯಕ್ತಪಡಿಸಬಲ್ಲನೋ ಅಷ್ಟು ಕಲಿತ ಭಾಷೆಗಳಲ್ಲಿ ವ್ಯಕ್ತ ಪಡಿಸಲಾರ. ವೈದ್ಯಕೀಯ ಕ್ಷೇತ್ರ, ವೈಜ್ಞಾನಿಕ ರಂಗ, ನ್ಯಾಯಾಲಯ, ಸರ್ಕಾರಿ ವಲಯ, ವ್ಯವಹಾರ ಈ ಎಲ್ಲವುಗಳಲ್ಲಿ ಆಡಳಿತ ಭಾಷೆ ಕನ್ನಡವಾಗಬೇಕು.

ಒಂದು ಭಾಷೆ ಬಲಗೊಳ್ಳುವುದರಲ್ಲಿ ಆ ನಾಡಿನ ಸುಭದ್ರತೆ ಇದೆ. ಮತ್ತು ಸಂಸ್ಕೃತಿಯು ಉಳಿಯುತ್ತದೆ. ಸುಪ್ರಸಿದ್ಧ ಶಿಕ್ಷಣ ತಜ್ಞ ಜಾನ್ ಮೆಕಾಲೆ ಹೇಳುತ್ತಾನೆ. If you want to kill the culture, you kill the langvage. ಏಕೆಂದರೆ ಒಂದು ನಾಡಿನ ಪರಂಪರೆ, ಸಂಸ್ಕೃತಿ ಮತ್ತು ಭಾಷೆಗಳು ಅವಿನಾಭಾವ ಸಂಬಂಧದಿಂದ ಕೂಡಿವೆ.

ನಾವು ನಮ್ಮ ಭಾಷೆಯನ್ನು ಬೆಳೆಸಬೇಕು, ಬಲಗೊಳಿಸಬೇಕು ಎಂದರೆ ಅನ್ಯ ಭಾಷೆಯನ್ನು ಅಗೌರವಿಸಬೇಕೆಂದಾಗಲೀ, ದ್ವೇಷಿಸಬೇಕೆಂದಾಗಲಿ, ಭಾರತೀಯತೆಯ ಭಾವೈಕ್ಯತೆಗೆ ಹೊರಗಾಗಬೇಕೆಂದಾಗಲಿ ಅಲ್ಲ. ತಮ್ಮ ಅಸ್ತಿತ್ವ, ವ್ಯಕ್ತಿತ್ವ, ವೈಶಿಷ್ಟ್ಯ ಉಳಿಸಿಕೊಂಡೂ ಸಹ ಭಾರತೀಯತ್ವದ ಏಕತೆಯನ್ನು ಕನ್ನಡಿಗರು ಪ್ರತಿಪಾದಿಸಲು ಬರುವುದು. ವಾದ್ಯವೃಂದದಲ್ಲಿ ವಿವಿಧ ರೂಪ, ರಚನೆಯ ಬೇರೆ ಬೇರೆ ವಾದ್ಯಗಳು ತಮ್ಮ ಅಸ್ತಿತ್ವ ಉಳಿಸಿಕೊಂಡೇ ಏಕ ತಾನತೆಯ ಸಂಗೀತ ನೀಡುವಂತೆ ಸಂಕೀರ್ಣ ದೇಶವಾದ ಭಾರತದಲ್ಲಿ ತಮ್ಮ ತಮ್ಮ ಭಾಷೆಗಳ, ರಾಜ್ಯಗಳ ವೈಶಿಷ್ಟ್ಯ ಉಳಿಸಿಕೊಂಡೇ ರಾಷ್ಟ್ರೀಯತೆಯ ಭಾವೈಕ್ಯಗಾನವನ್ನು ಹಾಡಲು ಸಾಧ್ಯವಿದೆ.

ಕನ್ನಡಿಗರು ತಮ್ಮ ಭಾಷೆ, ಸಂಸ್ಕೃತಿಯನ್ನು ಬೆಳೆಸಲು, ಬಲಗೊಳಿಸಲು ಪ್ರಯತ್ನಿ ಸಲೇಬೇಕು. ಇದರರ್ಥ ಅವರು ದುರಭಿಮಾನಿಗಳಾಗಿ ಅನ್ಯ ಭಾಷೆಗಳನ್ನು ತಿರಸ್ಕರಿಸಬೇ ಕಾಗಿಲ್ಲ. ಅವರವರ ಮಕ್ಕಳನ್ನು ಪ್ರೀತಿಸಬೇಕಾದ್ದು ಕರ್ತವ್ಯ. ಇನ್ನೊಬ್ಬರ ಮಕ್ಕಳನ್ನು ಗೌರವಿಸಬೇಕಾದ್ದು ಮಾನವೀಯತೆ. ತಮ್ಮ ತಾಯಿಯನ್ನು ಗೌರವಿಸಬೇಕಾದ್ದು ಕರ್ತವ್ಯ. ಇತರ ಮಾತೆಯರನ್ನು ಗೌರವಿಸಬೇಕಾದ್ದು ಮಾನವೀಯತೆ. ಹಾಗೆ ತನ್ನ ನೆಲದ ಸಂಸ್ಕೃತಿ, ಭಾಷೆಯನ್ನು ಆದರಿಸಿ, ಗೌರವಿಸಬೇಕಾದ್ದು ಆದ್ಯ ಕರ್ತವ್ಯ, ಇತರರ ಭಾಷೆ, ಸಂಸ್ಕೃತಿಗಳನ್ನು ಗೌರವಿಸಬೇಕಾದ್ದು ಮಾನವೀಯತೆ. ಈ ದೃಷ್ಟಿಕೋನ ಕನ್ನಡಿಗರಲ್ಲಿ ಬರಲಿ, ಭಾವೈಕ್ಯ ಸುಮಧುರಗಾನ ಹೊರಬರಲೆಂದು ಹಾರೈಸಿ ಸಮಾರಂಭವನ್ನು ಉದ್ಘಾಟಿಸುವೆ.

★

"ಪಂಚ ಪುಷ್ಪ ಮಾಲಿಕೆ"

—ರಚನೆ : ಪಿ. ದೊಡ್ಡಮಾದಯ್ಯ, ಹೆ. ಈ. ಬಿ., ಮೈಸೂರು

೧. ಮಾತಾ ಸ್ತುತಿ

ಶ್ರೀ ಗಿರಿಜೆಯರಸನೆ ಮಹೋನ್ನತ ।
ತ್ಯಾಗಿಗಳ ಹೃದಯದಲಿ ನಲಿವನೆ ।
ಭೋಗಿ ಭೂಷಣ ವೃಷಭವಾಹನನಾಗಿ ಮೆರೆಯುವನೆ ॥

ರಾಗ ರಹಿತನೆ ಯೋಗಿವಂದ್ಯನೆ ।
ಬಾಗಿ ನಿನ್ನಯ ಪದಕೆ ನಮಿಸುವೆ ।
ಬೇಗ ಬಂದೊಲಿದು ಸಲಹೈ ಮಹದೇವಿ ಮಾತೆಯನು ॥ ॥೧॥

ಮಾತೆ ಗುರು ಮಹದೇವಿ ಜಗದೊಳು ।
ಖ್ಯಾತಿ ಗಳಿಸಿದವರು ತಮ್ಮಯ ।
ನೀತಿ ವಚನಗಳಿತ್ತು ಭವಿಗಳ ಜಾಗೃತೀಗೊಳಿಸೆ ॥

ಈ ತೆರದಿ ಹಗಲಿರುಳು ದುಡಿಯುತ ।
ನಾಸ್ತಿಕರ ಮನವ ಬದಲಿಸಿ ಜಗ ।
ಜ್ಯೋತಿ ಬಸವೇಶನನು ನುತಿಸುತ ತನುವ ಸವೆಸುವರು ॥ ॥೨॥

ಸಕಲ ವೇದ ವಿಶಾರದರೆನಿಸಿ ।
ಅಖಿಳ ಶಾಸ್ತ್ರದ ತಿರುಳ ಸವಿಯುತ ।
ನಿಖಿಳ ಪಾಪ ನಿವಾರಣೆಗೆ ನವವಿಧಾನವನುಡುಕುತ ॥

ಭಕುತಿ ಎಂಬುವುದೊಂದೇ ಜನರಿಗೆ ।
ಮುಕುತಿ ಮಾರ್ಗಕ್ಕೆ ಒಯ್ವುದೆಂದತಿ ।
ಯುಕುತಿ ರೀತಿಯನರುಹಿ ಪೇಳಿದ ಮಾತೆ ಮಾದೇವಿ ॥ ॥೩॥

ಇಂತಿರುವ ಮಹದೇವಿ ಜನರಿಗೆ ।
ಕಂತುಹರ ಶಿವಶರಣ ಮಹಿಮೆಯ ।
ನಿಂತು ಬೋಧಿಸಿ ಅರಿವು ಮೂಡಿಸಿ ಜನರ ಮನದೊಳಗೆ ।
ಸಂತ ಸಾಧುಗಳಂತೆ ಹೊಳೆಯುತ ।
ಅಂತರಂಗದಿ ಗುರುವ ಭಜಿಸುತ ।
ಚಿಂತೆ ತಳೆದಿಹ ನರರ ಮನವನು ಶುದ್ಧಿಗೊಳಿಸುವರು ॥೪॥

ಮಂಗಳವು ಮಹದೇವಿ ಮಾತೆಗೆ ।
ಮಂಗಳವು ಶಿವಶರಣ ವೃಂದಕ್ಕೆ ।
ಮಂಗಳವು ಮಹದೇವ ಗೌರಿಗೆ ಸಾಧು ಸಂತರಿಗೆ ।
ಮಂಗಳವು ವಾಗೀಶ ಗುರುವಿಗೆ ।
ಮಂಗಳವು ಜಗಜ್ಯೋತಿ ಬಸವನಿಗೆ ।
ಮಂಗಳವು ಮಾದೇಶ್ವರನಿಗೆ ಮಾತೆ ಭಾರತಿಗೆ ॥ ॥೫॥

೨. ಲೋಕೋದ್ಧಾರಕ್ಕಾಗಿ, ಸೇವೆ ಸಲ್ಲಿಸುತ್ತಿರುವ ಜಗದ್ಗುರುಗಳ ಶ್ರೇಯಸ್ಸಿಗಾಗಿ ಭಗವಂತನನ್ನು ಪ್ರಾರ್ಥಿಸುವ ಗೀತೆ

೧. ಸಚ್ಚಿದಾನಂದ ಕಾಪಾಡು । ಶಿವಾನಂದ ಕಾಪಾಡು ।
ಸದಾನಂದ ಕಾಪಾಡು । ಮಾತಾಜಿಯ ॥

ಮೆಚ್ಚಿಗೆ ಗಳಿಸಿದ । ಮಹಿಳಾ । ಭಕ್ತರೊಳಗೆ ।
ಹೆಚ್ಚಿನ ಕೀರ್ತಿಯ । ಪಡೆದ । ಮಾತಾಜಿಯ ॥ ॥ಪ॥

೨. ಹಗಲಿರುಳೂ ನಿನ್ನ । ನೆನೆಯುವರಯ್ಯ ।
ಬಗೆ ಬಗೆ ಪುಷ್ಪವ । ಮುಡಿಸುವರಯ್ಯ ॥

ಜಗದೊಳು ಜನರನು । ಸಲಹು ನೀನೆನುತಲಿ ।
ಜಗದ್ಗುರು ಮಾತಾಜಿ । ಬೇಡುವರಯ್ಯ ॥ಸ॥

೩. ಸತ್ಯವು ಕೀಳಾಗಿ । ಮಿಥ್ಯವು ಮೇಲಾಗಿ ।
ಎತ್ತಲೂ ಜನರು । ಕಷ್ಟಪಡುವರೆಂದು ॥

ಚಿತ್ತ ಜಾರಿಯೆ ನಿನ್ನ | ಕಾಪಾಡಿ ಸಲಹೆಂದು |
ನಿತ್ಯ ಮಹದೇವಿಯು | ನುತಿಸುವರಯ್ಯ ||ಸ||

೪. ಪಾಪವು ಹೆಚ್ಚಾಗಿ | ಪುಣ್ಯವು ಹಾಳಾಗಿ |
ತಾಪದಿ ಜನರು | ಬಳಲುವರೆಂದು ||
ಕಾಪಾಲಧರ ಶಿವ | ಸತತ ನೀ ಪೊರೆ ಎಂದು |
ತಾಪಸಿ ಮಾತಾಜಿ | ಬೇಡುವರಯ್ಯ ||ಸ||

೫. ಕಾಪಾಡು ಶಿವನೇ | ಕಾಪಾಡು ದೇವನೇ |
ಕಾಪಾಡು ಹರನೆ | ಮಾತಾಜಿಯ ||
ಕಾಪಾಡು ಶಿವರೂಪ | ನಾಗಿ ಮೆರೆಯುವ |
ಭೂಪ ಮಾದೇಶ್ವರ | ಮಾತಾಜಿಯ || ||ಸ||

೬. ವಂದಿಸೆ

ರಾಗ– ಸಿಂಧೂಭೈರವಿ ತಾಳ–ಆದಿ

ಸಚ್ಚಿದಾನಂದ | ನಿತ್ಯ ಆನಂದ |
ಮೆಚ್ಚಿದೆ ಮುದದಿಂದ | ಮಾತಾಜಿಯ ||
ನಿಶ್ಚಲ ಭಕ್ತಿಯುಳ್ಳ | ಸಕಲ ಸದ್ಗುಣವುಳ್ಳ |
ಇಚ್ಛೆಯುಳ್ಳಂತಹ | ಗುರು ಮಾತಾಜಿಯ || ||ಸ||

ಭೋಗಭಾಗ್ಯ ಬಯಸದ | ರಾಗ ರಹಿತೆ ಎನಿಸಿಹ |
ಯೋಗಿನಿಯಾಗಿ | ಪೂಜಿಸಿಕೊಂಬುವರ ||
ತ್ಯಾಗಿನಿ ಎನಿಸೀ | ಕಾವಿಯ ಧರಿಸೀ |
ಆಗಮ ಶಾಸ್ತ್ರವ | ನರಿತು ಭೋದಿಪರ || ||ಸ||

ಇಂತಪ್ಪ ಸತಿಯ | ಪಡದ ನೀ ಭಾಗ್ಯವಂತ |
ಸಂತರ ಗುರುವರ | ಸಚ್ಚಿದಾನಂದ ||
ಕುಂತಲ್ಲಿ ನಿಂತಲ್ಲಿ | ಹಗಲಲ್ಲಿ ಇರುಳಲ್ಲಿ |
ಚಿಂತನೆ ಮಾಡುತ | ಮಾತೆಯ ವಂದಿಸೆ || ||ಸ||

ಗಾಂಪರೊಡೆಯರು (ಹಾಸ್ಯಕಥೆಗಳು)

—ತ್ರಿನೇತ್ರಿ

ತಿಮಿರ ರಾಜ್ಯ ಎಂಬ ಒಂದು ದೇಶವಿತ್ತು. ಆ ದೇಶಕ್ಕೊಬ್ಬ ರಾಜ ಅಜ್ಞಾನಿದೇವ. ಅವನ ಮಂತ್ರಿ ಅವಿವೇಕಪ್ಪ. ಅವರ ರಾಜಧಾನಿ ದಡ್ಡೂರು. ಅಲ್ಲಿ ಬುದ್ಧಿಹೀನ ಭವನ ಎಂಬ ಮಠವಿತ್ತು. ಅದಕ್ಕೆ ಗುರುಗಳಿದ್ದರು, ಗಾಂಪರೊಡೆಯರೆಂಬವರು. ಅವರ ಬಳಿ ಇದ್ದರು ಐದು ಜನ ಮಹಾಶಿಷ್ಯರು, ಮಂಕ, ಮಡೆಯ, ಮಡ್ಡ, ಮುಠ್ಠಾಳ, ಮೂರ್ಖ. ಇವರು ಒಂದು ಹೇಳಿದರೆ ಒಂದು ಮಾಡುವಂಥವರು. ಅವರ ಪ್ರಸಂಗಗಳು ಬಹಳ ಸ್ವಾರಸ್ಯಕರ. ಒಂದೊಂದಾಗಿ ಅವರ ಕಥೆ ಕೇಳಿರಿ.

೧. ಸೂಜಿ ತಂದುದು.

ಮಹಾಗುರು ಗಾಂಪರೊಡೆಯರಿಗೆ ಒಂದು ಸೂಜಿ ಬೇಕಾಗಿತ್ತು. ಆಶ್ರಮದಲ್ಲಿ ಐದೂ ಜನ ಶಿಷ್ಯರು ಗದ್ದಲ ಮಾಡುತ್ತಿದ್ದರಿಂದ, ಕೆಲವು ಸಮಯವಾದರೂ ಶಾಂತವಾಗಿರಬೇಕೆಂದು ಅವರನ್ನು ಕರೆದು ಹಣ ಕೊಟ್ಟು ಹೇಳಿದರು : "ಐದೂ ಜನರು ಹೋಗಿ ಒಂದು ಸೂಜಿಯನ್ನು ತನ್ನಿರಿ." ಹೊರಟರು ಐದೂ ಜನರು. ಅಂಗಡಿಗೆ ಹೋಗಿ ಸೂಜಿ ಕೊಂಡಾಗ ಒಂದು ಸಂದೇಹ ಬಂತು ಮಂಕನಿಗೆ. ಗುರುಗಳು ಅಪ್ಪಣೆ ಮಾಡಿದ್ದಾರೆ 'ಐದೂ ಜನ ತನ್ನಿ' ಎಂದು. ಇಷ್ಟು ಸಣ್ಣ ವಸ್ತುವನ್ನು ಐದೂ ಜನ ಒಟ್ಟಿಗೆ ಒಯ್ಯುವದು ಹೇಗೆ ? ಚಿಂತಾಕ್ರಾಂತನಾದ. ಆಗ ಮೂರ್ಖನಿಗೆ ಹೊಸ ವಿಚಾರ ಹೊಳೆಯಿತು. ಸಂತೋಷದಿಂದ ಕೂಗಿದ. "ಉಪಾಯ ಹೊಳೆಯಿತು, ಹೊಳೆಯಿತು." "ಏನು ಏನು, ಬೇಗ ಹೇಳು" ಕುತೂಹಲದಿಂದ ಎಲ್ಲರೂ ಕೂಗಿದರು. "ನೋಡಿ, ಒಂದು ದೊಡ್ಡ ಈಚಲ ದಿಮ್ಮಿ ತೆಗೆದುಕೊಳ್ಳುವಾ ಅದರ ಮೇಲೆ ಸುಣ್ಣ ಸ್ವಲ್ಪ ಭಾಗಕ್ಕೆ ಹಚ್ಚಿ ಅಲ್ಲಿ ಈ ಸೂಜಿ ಚುಚ್ಚಿ, ಐದೂ ಜನ ಹೊರೋಣ......."

ಈ ಉಪಾಯ ಎಲ್ಲರಿಗೂ ಸಂತೋಷತಂದಿತು. ಅವರು ಕುಣಿದು ಕುಪ್ಪಳಿಸಿದರು. ಅಲ್ಲಿ ಬಿದ್ದಿದ್ದ ಈಚಲ ಕೊರಡು ತೆಗೆದುಕೊಂಡು ಸುಣ್ಣ ಬಳಿದು ಅದರ ಮೇಲೆ ಸೂಜಿ ಚುಚ್ಚಿ ಜಯಘೋಷ ಮಾಡುತ್ತ ಕೊರಡನ್ನು ಹೊತ್ತರು. ಆಶ್ರಮದ ಮುಂದೆ ಬರುವಷ್ಟರಲ್ಲಿ ಬೆವರು ಹರಿಯುತ್ತಿತ್ತು. ಇಳಿಸಿ ಬೆವರು ಒರೆಸುತ್ತ, ಸಂಭ್ರಮದಿಂದ ಒಳಗೆ ಬಂದು "ಗುರುಗಳೇ ಸೂಜಿ ತಂದೆವು. ಭಾರ ಹೊರುವಷ್ಟರಲ್ಲಿ ತುಂಬಾ ಸುಸ್ತಾಯಿತು." ಎಂದರು. ಗುರುಗಳು ಆಶ್ಚರ್ಯ ಚಕಿತರಾದರು. ಹೊರಗೆ ಬಂದು ನೋಡುವಾಗ ತಲೆ ಬಾಗಿಲ ಮುಂದೆ ಈಚಲ ಕೊರಡು ಬಿದ್ದಿತ್ತು. ಗುರುಗಳನ್ನು ಕರೆದೊಯ್ದು ಸುಣ್ಣ ಹಚ್ಚಿದ ಭಾಗದಲ್ಲಿ ಚುಚ್ಚಿದ್ದ ಸೂಜಿ ತೋರಿಸಲೆತ್ನಿಸಿದರು ಆದರೆ ಸೂಜಿ ಅಲ್ಲಿರಲಿಲ್ಲ. ಇವರ ಅವಾಂತರದಲ್ಲಿ ಸೂಜಿ ಎಲ್ಲೋ ಬಿದ್ದುಹೋಗಿತ್ತು.

೨. ಗುರುಗಳು ತೀರಿಕೊಂಡ ದುಃಖ

ಒಮ್ಮೆ ಗುರುಗಳು ಪ್ರವಚನದ ಸಲುವಾಗಿ ಸಂಚಾರ ಹೋಗಿದ್ದರು. ತಮ್ಮೊಡನೆ ಮಡೆಯನನ್ನು ಮಾತ್ರ ಕರೆದುಕೊಂಡು, ಉಳಿದವರನ್ನು ಆಶ್ರಮದ ಉಸ್ತುವಾರಿಗೆ ಬಿಟ್ಟು ಹೋಗಿದ್ದರು. ಕೆಲವೇ ದಿನಗಳಲ್ಲಿ ಗುರುಗಳ ಸಾನ್ನಿಧ್ಯವಿಲ್ಲದೆ ಶಿಷ್ಯರು ಚಟಪಟಿಸಿ ಬಹಳಷ್ಟು ಸ್ಮರಿಸಿಕೊಳ್ಳತೊಡಗಿದರು. ಒಂದು ರಾತ್ರಿ ಎಲ್ಲರೂ ಎಳೆಗುರು ತಾಯಿಯನ್ನು ಕುರಿತು ಹಂಬಲಿಸುವಂತೆ ಹಂಬಲಿಸಿ ಮಲಗಿದರು. ಅಂದು ರಾತ್ರಿ ಮಂಕನಿಗೆ ಒಂದು ಕನಸು ಬಿತ್ತು. ಅದರಲ್ಲಿ ಗುರುಗಳು ಕಾಣಿಸಿಕೊಂಡು ಬಹಳ ಹೊತ್ತು ಚರ್ಚಿಸಿದರು. ಬೆಳಿಗ್ಗೆ ಎದ್ದ ಅವನು ಆನಂದಭರಿತನಾಗಿ ತನ್ನ ಅನುಭವಗಳನ್ನು ಸಹಪಾಠಿಗಳಿಗೆ ಹೇಳತೊಡಗಿದನು. ಎಲ್ಲರೂ ಸಂತೋಷಭರಿತರಾಗಿ ಆಲಿಸಿದರು. ದಿನನಿತ್ಯ ಬೇರೆ ಬೇರೆ ಅನುಭವಗಳನ್ನು, ತನಗೆ ಕನಸಿನಲ್ಲಿ ಬಂದು ಗುರುಗಳು ಹೇಳುವ ವಿಚಾರಗಳನ್ನೂ ರಸವತ್ತಾಗಿ ಬಣ್ಣಿಸತೊಡಗಿದ.

ಒಂದು ದಿನ ಗುರುಗಳ ಸಂಬಂಧದ ಕನಸು ಬೀಳಲೇ ಇಲ್ಲ. ಬೆಳಿಗ್ಗೆ ಹಾಸಿಗೆ ಬಿಟ್ಟೆದ್ದವನೇ ಭೋರಾಡಿ ಅಳತೊಡಗಿದ. ಉಳಿದವರು ಅವನ ಸುತ್ತ ಸೇರಿದರು. ಅವನು ಬಿಕ್ಕಿ ಬಿಕ್ಕಿ ಅಳುತ್ತಾ ಹೇಳಿದ: "ನಿನ್ನೆ ನನಗೆ ಕನಸಿನಲ್ಲಿ ಗುರುಗಳು ಬರಲಿಲ್ಲ. ಅವರು ತೀರಿಕೊಂಡಿದ್ದಾರೆ. ಅದಕ್ಕೇ ಬರಲಿಲ್ಲ." ಉಳಿದವರ ಅಳು ಜೋರಾಯಿತು. ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು. ಅಜ್ಞಾನಿ ದೇವರಸರು ದುಃಖಸೂಚಕವಾಗಿ ಧ್ವಜ ಹಾರಿಸಿ' ಸಂತಾಪ ಸೂಚಕ ಸಭೆ ನಡೆಸಿದರು. ಅನೇಕರು ಸಾಂತ್ವನಿಸಲು ಮಠಕ್ಕೆ ಬಂದರು. ನೆರೆಯೂರಿನಿಂದ ದಡ್ಡೂರಿಗೆ 'ಸಂದರ್ಶನಕ್ಕೆ ಬಂದ ಅರಿವೆಪ್ಪನೆಂಬೊಬ್ಬ ನಾಗರಿಕ ಗಾಂಪರೊಡೆಯರ ಮಠಕ್ಕೆ ಬಂದ. ಕುತೂಹಲ ಭರಿತನಾಗಿ ಎಲ್ಲಾ ವಿವರಗಳನ್ನು ತಿಳಿದುಕೊಂಡು ಆಶ್ಚರ್ಯ ಚಕಿತನಾದ. ಈ ಮೂರ್ಖರ ಟೋಳಿಯನ್ನು ಹೇಗೆ ಸಂತೈಸುವದೆಂಬ ಬಗ್ಗೆ ಚಿಂತನೆ ಮಾಡಿ ನುಡಿದ: "ಅಯ್ಯೋ, ಇಷ್ಟಕ್ಕೆ ಅಳುವಿರಾ ?"

"ಗುರುಗಳು ಸತ್ತರೆ ಅಳಬಾರದೆ ?"........ಕೆರಳಿ ಕೇಳಿದರು.

"ಅವರು ಸತ್ತುದು ನಿಮಗೆ ಹೇಗೆ ಗೊತ್ತಾಯ್ತು........?"

"ಜೀವಂತವಿದ್ದಿದ್ದರೆ ಕನಸಿನಲ್ಲಿ ಬರುತ್ತಿರಲಿಲ್ಲವೆ ?"

"ಅಯ್ಯೋ, ಪೆದ್ದಣ್ಣಗಳಿರಾ ಗುರುಗಳು ನಿಜಕ್ಕೂ ಜೀವಂತವಿದ್ದಾರೆ........"

"ಸುಳ್ಳು, ಜೀವಂತವಿದ್ದಿದ್ದರೆ ಖಂಡಿತಾ ಕನಸಲ್ಲಿ ಬರುತ್ತಿದ್ದರು........"

"ಅವರಿಗೆ ಪುರುಸೊತ್ತಿರಲಿಲ್ಲ. ಏಕೆಂದರೆ ನಿನ್ನೆ ಇಡೀ ರಾತ್ರಿ ನನ್ನ ಕನಸಿಗೆ ಬಂದು, ನನ್ನೊಡನೆ ಮಾತಾಡುತ್ತಿದ್ದರು........"

ಅಳು ನಿಂತಿತು. ಶಿಷ್ಯರುಗಳು ಮತ್ತೆ ಆನಂದ ಭರಿತರಾದರು. ರಾಜಧಾನಿಯಲ್ಲಿ ಆನಂದದ ವಾದ್ಯಗಳು ಮೊಳಗಿದವು. ಧ್ವಜವು ಸಂಭ್ರಮದಿಂದ ಹಾರಾಡಿತು.

ಓಂ ಶ್ರೀ ಗುರುಬಸವಲಿಂಗಾಯನಮಃ

ನುಡಿ ಕಿರಣ

ಸೋದರಿ ಉಮಾದೇವಿ, ಎಂ.ಎ.ಎ. ಇಡಿ

1. ಗುರುಕಾರುಣ್ಯಕ್ಕೆ ಹಂಬಲ

ಹೆತ್ತವರ ಮನೆಯಂಗಳದಿ ಬೆಳೆದ ಶಿವನನೊಗ್ಗೆಯ ಶಿವಸುಮವಿದಮ್ಮಾ
ತವನಿಧಿ, ತಪಸ್ವಿನಿ ತಮ್ಮಡಿಗೆ ಅರ್ಪಿಸಿಹರಮ್ಮಾ
ತನ್ನನರಿಯದೀ ಪುಷ್ಪ ಪರಮಗುರು ಕಾರುಣ್ಯಕ್ಕೆ ತಪಿಸುತಿಹುದಮ್ಮಾ
ಎನ್ನಮ್ಮ ಮಹಾಮಾತೆ, ಕಾರುಣ್ಯನಿಧಿಯೇ
ಬೆಂದಕಾಳೂರಿನಿಂದ ನಿಜಗುರುವನರಸಿ ತಲೆವಾಗಿ ನಿಂದಿಹುದಮ್ಮಾ
ಬೆಂದು ಬಸವಳಿದು ನಿಡುಸುಯ್ಯುತಿರುವುದು ಗುರುವೇ
ಗುರುಕಾರುಣ್ಯ ಜಲದಲಿ ನೀನೆನ್ನ ಮೀಯಿಸಿ
ಶೂನ್ಯ ಸಂಪಾದನೆಯ ಬಟ್ಟೆಯ ನೀನೆನಗೆ ತೋರಮ್ಮಾ.
ಸಚ್ಚಿದಾನಂದನ ಮಹಾಸತಿ ಜಗದ್ಗುರು ಮಾತಾಜಿಯೆ.

2. ಅಂತರಂಗದ ಮೊರೆತ

ಮನವೆಂಬ ಮರಳುಗಾಡಿನಲಿ ಭಕ್ತಿಯ ಸೆಲೆ ಬತ್ತದಿರಲಿ ;
ಮುದುಡಿರುವ ಮನದಲಿ ತೃಪ್ತಿಯ ಚಿಲುಮೆ ಚಿಮ್ಮುತಿರಲಿ ;
ಕಗ್ಗತ್ತಲೆಯ ಈ ಗವಿಯಲಿ ಜ್ಞಾನದೀವಿಗೆ ಅನವರತ ಬೆಳಗುತಿರಲಿ :
ಅಡಿಗಡಿಗೆ ಈ ಮನ ನಿನ್ನ ನೆನೆಯುತಿರಲಿ ದೇವಾ ನಿನ್ನ ನೆನೆಯುತಿರಲಿ.

3. ಅಂತರಂಗದ ಮೊರೆತ

ಆತ್ಮಕೆ ಮೂಲನ ಸೇರುವ ಚಿಂತೆ ;
ನಯನಕೆ ನಿನ್ನ ದರುಶನದ ಚಿಂತೆ ;

ಮನಕೆ ನಿನ್ನನೆಡೆಬಿಡದೆ ನೆನೆಯುವುದೇ ಚಿಂತೆ ;
ಮುಕ್ತಿಮಾರ್ಗದ ಮಾರ್ಗದರ್ಶಕ ನೀನೆ
ಮತಿಯು ಮಂಕಾಗುವ ಮುನ್ನ ನಿನ್ನ
ಪಾದಾರವಿಂದ ಸೇರುವ ಪರಮ ಸುಖವ ನೀಡೆನಗೆ ತಂದೆ.

4. ಬಿಡುಗಡೆಗಾಗಿ ಬೇಡಿಕೆ

ಬಾ ಬಾ ಎಂದು ಕರೆಯುತಿರೆ ಎನ್ನಮ್ಮ 'ಶಾರದೆ'
ಹರುಷದ ಹೊನಲು ಹರಿಯುತಿದೆ ಮೌನದೆ ||

ಭುವಿಯ ಬಂಧುಗಳು ಬಿಗಿದಿರೆ ಒಲುಮೆಯ ಜಾಲದಿ
ಸಕಲ ಸಂಕೋಲೆಗಳು ಬಿಗಿಯುತಿವೆ ಭವದ ಕಾಲದಿ
ಬದುಕಿನ ಬಂಧನವ ಬಿಡಿಸಲು ಬೇಡುತಿಹೆ
ಕಣ್ಣೀರ ಕೋಡಿ ಹರಿಸುತ ಹಾಡುತಿಹೆ ||೧||

ಮಮಕಾರದ ಮಾಯೆಯು ಮನಸಿನಲಿ ಮನೆ ಮಾಡಿ
ಮಾತೆಯ ಮಹಾಮನೆಯು ಕಾಣದಂತೆ ಕಾಡೆ
ಬಂಧನವ ಹರಿಯುವ ಪರಿಯ ನಾ ಕಾಣದೆ
ದೂರದಾಸೆಯಿಂ ನಸುನಗುತ ಅಭಯವೀವ ಮಾತೆಯ ನೋಡುವೆ ||೨||

5. ಸಮರ್ಪಣೆ

ಬಡಬಂಧು ನಾನಣ್ಣಾ ಬಸವಣ್ಣ ನಿನ್ನ ಸೇವೆಗೇನ ತರಲಣ್ಣಾ ?
ಹೃದಯದಲಿ ಭಕುತಿಯ ಬಿಲ್ವಪತ್ರೆಯಿದೆ
ಮತಿಯಲ್ಲಿ ವಿರತಿಯ ಮೊಗ್ಗು ಅರಳುತಿದೆ
ಶರಣಾಗತಿಯ ವಸ್ತ್ರದಲ್ಲಿಟ್ಟು ಬಹು ಜತನದಿಂದ
ನಾ ಹೊತ್ತು ತರುತಿಹೆನಯ್ಯಾ ನಿನ್ನಡಿಗೆ ಮಹಾಗುರು ಬಸವಣ್ಣ.

6. ಒಳತೋಟ

ಕರುಣೆ ಬಾರದೆ....ನಿನಗೆ ಕರುಣೆ ಬಾರದೆ |
ಓ ತಂದೆ, ಓ ಗುರುವೆ ಮಹಾದೇವನೆ ||

ನಿನ್ನ ಕರುಣೆಯ ಕಂದ ನಾನಯ್ಯ
ನಿನ್ನ ಪಾದ ಪಂಕಜದ ದುಂಬಿ ಕಾಣಯ್ಯ
ನಿನ್ನೊಲುಮೆಯು ಮಹಾಪೂರವೆನಗೆ ಸಾಕಯ್ಯ
ನಿನ್ನ ನಾಮಸ್ಮರಣೆಯೇ ಕಾಯಕವೆನಗಯ್ಯಾ ||೧||

ಎನ್ನ ಹೃದಯದ ಅಳಲನೀನರಿಯೆಯಾ ?
ಸಾಕಿನ್ನು ಈ ಪಯಣ ಎಂದು ನಾ ಬೇಡುವೆ
ಭವರೋಗ ವೈದ್ಯನ ಕಾಣಲು ನಿಂದಿಹೆ
ದಯೆ ತೋರು ಮಹಾಗುರು ಮಹಾದೇವನೆ ||೨||

7. ಗುರುಕರುಣೆ

ಕಲ್ಲು ಸುಮನಾಗರಳಿತು ಕೊರಡಿದು ಕೊನರಿತು
ಜ್ಞಾನರವಿ ಅಜ್ಞಾನದಾಕಾಶದಲಿ ಮೂಡಿದನಲ್ತೆ ?
ಸದ್ಗುರು ಶ್ರಿ ಮಾತೆಯು ಕರುಣೆಯಿಂ ಅನುಗ್ರಹಿಸಲು
ಹೃತ್ಕಮಲದಲಿ ಪವಡಿಸಿರ್ದ ಮಹಾ ಘನಲಿಂಗವೇ
ಪರಮಾನಂದಪ್ರಭುವಾಗಿ ಬಂದೆನ್ನ ಕರಕಮಲದಲಿ ನೆಲೆಸಿದನಲ್ತೆ ?

8. ಕಂಡೆ ನಾನಿಂದು ಬಸವ ಮಂಟಪವ

ಅಣ್ಣನ ಅನುಭವ ಮಂಟಪ ಮನೋನಯನದಿ ಮರೆಯಾಗುವ ಮುನ್ನ
ಕಂಡೆ ನಾನಿಂದು ಅಕ್ಕನ ಬಸವ ಮಂಟಪವ
ಬಸವ ಜ್ಯೋತಿಯ ಬೆಳಗುತ ಉರಿಯುತಿಹ ನಿಜ ದೀಪ್ತಿಯ.
ಭವದ ಕವಚವ ಕಳಚಿ ಪುನರ್ಜನ್ಮವೆನಗಿತ್ತ ಮಾತೆಯ ದೇಗುಲವ,
ಎನಗೂ ಎನ್ನ ಪರಿವಾರಕ್ಕೂ ಸಂಕೋಲೆ ಬಿಗಿದ ಸದ್ಗುರುವ
ಶಾಂತಿಧಾಮವಿದು, ಭಕ್ತಿಭಂಡಾರವಿದು, ಸುಯಿಧಾನ ಸುಜ್ಞಾನದಾಗರವಿದು
ಸಚ್ಚಿದಾನಂದನ ಸತಿಯ ತವರು ಮನೆಯಿದು
ಕಂಡೆ ನಾನಿಂದು ಎನ್ನ ಬಾಳಹಣತೆಯ ಅಜ್ಞಾನ ತಿಮಿರವ ಕಳೆಯುವ ಜ್ಯೋತಿಯ ;

ಶಿರದಲಿ ಕರವಿಟ್ಟು ಗುರುಕಾರುಣ್ಯವ ಧಾರೈಸಿ,
ಪರಮಾನಂದಪ್ರಭುವ ಕರುಣಿಸಿದ ಕಾರುಣ್ಯಮೂರ್ತಿ ಶ್ರೀಮಾತೆಯ.

ಓಂ

ಮಹಾ ಮಹಿಮ ಮಾದಾರ ಚೆನ್ನಯ್ಯ

(೧೪_೧೨_೭೮ ರಂದು ಬರುವ ಜಯಂತಿಗಾಗಿ)

—ಸ್ವಯಂಸೇವಕ ಷಡಕ್ಷರಿ

ಸ್ವತಂತ್ರ ಭಾರತದ ಸರ್ವಾಂಗೀಣ ಪ್ರಗತಿಗೆ, ಕಂಟಕಪ್ರಾಯವಾಗಿರುವ ಅತ್ಯಂತ ದೊಡ್ಡ ಅಡ್ಡಿ ಎಂದರೆ, ಅಸ್ಪೃಶ್ಯತಾ ಸಮಸ್ಯೆ. ಇದೊಂದು ಹಳೆರೋಗ ತಾರ್ಕಿಕವಾಗಿಯಾಗಲೀ, ಧಾರ್ಮಿಕವಾಗಿಯಾಗಲೀ ಇದು ಸಮರ್ಥನೀಯವಾಗಿಲ್ಲ. ಮಾನವೀಯವಾಗಿಯಂತೂ ಇದು ಅತ್ಯಂತ ಪಾಪಕರವಾದ ಆಚರಣೆ. ಎಲ್ಲಾ ಅನುಭಾವಿಗಳೂ, ಮಹಾತ್ಮರೂ, ಸಮಾಜಸುಧಾರಕರೂ, ಈ ಸಮಸ್ಯೆಯನ್ನು ನಿವಾರಿಸುವುದಕ್ಕೆ ಪ್ರಬಲ ಹೋರಾಟ ನಡೆಸಿದರೂ, 'ಅಸ್ಪೃಶ್ಯತೆ'ಯನ್ನು ತೊಡೆದು ಹಾಕಲಿಕ್ಕೆ ಸಾಧ್ಯವಾಗಿಲ್ಲ.

ಇಂತಹ ಒಂದು ಸಮಸ್ಯೆಯನ್ನು ತೊಡೆದು ಹಾಕುವ ಒಂದು ಪ್ರಾಮಾಣಿಕ ಪ್ರಯತ್ನ ಹನ್ನೆರಡನೆಯ ಶತಮಾನದಲ್ಲಿ ನಡೆಯಿತು. ಮತ್ತು ಪೂರ್ಣ ಯಶಸ್ವಿಯೂ ಆಗಿತ್ತು. ಯಾರು ಸಮಾಜದಲ್ಲಿ ಅಂತ್ಯಜರೆಂದು ಕರೆಸಿಕೊಳ್ಳುತ್ತಿದ್ದರೋ, ಅವರೇ ಅನುಭಾವಿಗಳಾದರು, ಮಹಾತ್ಮರಾದರು, ಧಾರ್ಮಿಕ ಗುರುಗಳಾದರು, ಆಧ್ಯಾತ್ಮ ಸಾಹಿತ್ಯ [illegible],

ಇಂತಹ ಮಹಾತ್ಮರಲ್ಲಿ ಒಬ್ಬ ಮಾದಾರ ಚೆನ್ನಯ್ಯ. ಕುಲದಿಂದ ಮಾದಿಗರವನು, ಅಂತ್ಯಜ. ಕಾಯಕದಿಂದ ಕಾಂಚಿಪುರದ ಅರಮನೆಯ ಕುದುರೆಗಳಿಗೆ ಹುಲ್ಲು ಸರಬರಾಜು ಮಾಡುವವನು. ಲಿಂಗ ಸಂಸ್ಕಾರದ ನಂತರ ಆತನಲ್ಲಿ ಬಹಳಷ್ಟು ಮಾರ್ಪಾಟಾಯಿತು. ಅಂತರಂಗದಲ್ಲಿ ಸದಾ ದೇವರನ್ನೇ ನೆನೆಯುತ್ತಾ ಪೂರ್ಣ ಮನಸ್ಸಿನಿಂದ ತನ್ನ ಕಾಯಕವನ್ನು ನಡೆಸುತ್ತಿದ್ಧ. ಆತ ಕಂಡುದುದ ಶಿವಲಿಂಗಕ್ಕೆ, ಕೊಂಡುದುದ ಗುರುಲಿಂಗಕ್ಕೆ, ಕೇಳಿದುದ ಪ್ರಸಾದಲಿಂಗಕ್ಕೆ, ಸ್ಪರ್ಶಿಸಿದುದ ಜಂಗಮಲಿಂಗಕ್ಕೆ, ನೆನೆದುದ ಮಹಾಲಿಂಗಕ್ಕೆ, ಅರ್ಪಿಸುವುದನ್ನು ಅಳವಡಿಸಿಕೊಂಡಿದ್ದ. ಆತನ ಭಾವನೆ, ನುಡಿ ಪ್ರತಿಯೊಂದೂ ಅನುಕ

ರಣೀಯವಾಗಿತ್ತು. ಆತ ಹೇಳುತ್ತಿದ್ದ "ನಡೆ-ನುಡಿ ಸೂತಕವಾದಲ್ಲಿ ಕುಲಹೊಲೆ ಸೂತಕವಿಲ್ಲ. ನುಡಿಲೇಸು, ನಡೆಯಧಮವಾದಲ್ಲಿ ಅದೇ ಹೊಲೆ. ಇಲ್ಲವೇ ಹೊಲೆ ಪರದಾರಂಗಳಲ್ಲಿ? ಹೊಲಬ ನಡೆಯದೆ ಕೆಟ್ಟು ನಡೆಯುತ್ತ ಮತ್ತೆ ಕುಲಜರೆಂಬ ಒಡಲವಘುಂಟೆ? ಆಚಾರವೇ ಕುಲ. ಅನಾಚಾರವೇ ಹೊಲೆ. ಇಂತೀ ಉಭಯವ ತಿಳಿದು ಅರಿಯಬೇಕು, ಕಯ್ಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ. ಅರಿ ನಿಜಾತ್ಮರಾಮ ರಾಮನ."

ಚೆನ್ನಯ್ಯನ ವ್ಯಕ್ತಿತ್ವ ಎಷ್ಟು ಉನ್ನತವೆಂದರೆ, ಒಂದೆಡೆ ಬಸವಣ್ಣನವರು ಹೇಳುತ್ತಾರೆ. "ಅಪ್ಪನು ನಮ್ಮ ಮಾದಾರ ಚೆನ್ನನು. ಅವನ ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದೊಡೆ ಚೆನ್ನ, ಪ್ರಮಥರೊಳಗೆ ಚೆನ್ನ ಪುರಾತನರೊಳಗೆ ಚೆನ್ನ."

ಚೆನ್ನಯ್ಯನದು ಗುಪ್ತ_ಮುಗ್ಧ ಭಕ್ತಿ. ಈತನ ಭಕ್ತಿಯನ್ನು ಲೋಕಕ್ಕೆ ಪ್ರಕಾಶಿಸಲೋಸುಗವೇ, ಶಿವನು ಈತನ ಮನೆಯ ಅಂಬಲಿಯನ್ನು ಕುಡಿದನಂತೆ. ಬಸವಣ್ಣನವರು, ಈ ಸಂದರ್ಭವನ್ನು ಹೀಗೆ ವರ್ಣಿಸುತ್ತಾರೆ, "ಮಹಾದಾನಿ ಕೂಡಲ ಸಂಗಯ್ಯನೊಲಿದು ಮಾದಾರ ಚೆನ್ನಯ್ಯನ ಮನೆಯಲುಂಡ"

ಚೆನ್ನಯ್ಯನದು ಬಡತನದ ಸಂಸಾರ. ಅಂಬಲಿ ಊಟ. ಆದರೆ ಚೆನ್ನಯ್ಯ ಆ ಅಂಬಲಿಯಲ್ಲಿ ತನ್ನ ಭಕ್ತಿಯ ಅಮೃತವನ್ನು ಬೆರೆಸಿ ಶಿವನಿಗರ್ಪಿಸಿ ತಾನೂ ಸೇವಿಸುತ್ತಿದ್ದ. ಆ ರುಚಿಗೆ ದೇವನ ಬಾಯಲ್ಲಿ ನೀರೂರುತ್ತಿತ್ತು.

ಕಾಂಚಿಪುರದ ರಾಜ ಕರಿಕಾಲ ಚೋಳ. ಆತನಿಗೆ ಒಮ್ಮೆ ಚಿಂತೆಯುಂಟಾಗಿದ್ದಿತಂತೆ_ನಾನು ಮುದುಕನಾದೆ, ನನ್ನ ತರುವಾಯ ಶಿವನಿಗೆ ಸಕಲ ನೈವೇದ್ಯಗಳನ್ನು ಸಲ್ಲಿಸುವರಾರೆಂದು! ಆತನ ಮಮಕಾರ ನಿರಸನಕ್ಕಾಗಿ ಚೆನ್ನಯ್ಯನ ಮನೆಯಲ್ಲಿ ಉಂಡನಂತೆ ಶಿವನು. ಇದನ್ನು ತಿಳಿದ ಕರಿಕಾಲ ಚೋಳ, ಚೆನ್ನಯ್ಯನ ಗುಡಿಸಿಲಿಗೆ ನಡೆದು ಬಂದು, ಆತನ ಪಾದಕ್ಕೆ ನಮಸ್ಕರಿಸಿದನಂತೆ. ಅನಂತರ ಚೆನ್ನಯ್ಯನನ್ನು ಆನೆಯ ಮೇಲೆ ಅಂಬಾರಿಯಲ್ಲಿ ಕುಳ್ಳಿರಿಸಿ ನಗರದಲ್ಲೆಲ್ಲ ಮೆರೆಸಿದನಂತೆ.

ಮಾದಿಗರ ಜಾತಿಯಲ್ಲಿ ಹುಟ್ಟಿ, ಶಿವನಿಗೆ ಅಂಬಲಿಯನ್ನು ಕುಡಿಸಿದ ಚೆನ್ನಯ್ಯನ ಬಗ್ಗೆ ಬಸವಣ್ಣನವರು ಹೇಳುತ್ತಾರೆ "ಹಾಲನೇಮ, ಹಾಲಕೆನೆಯ ನೇಮ_ಅಂಬಲಿಯ ನೇಮದವರಾರನೂ ಕಾಣೆ. ಕೂಡಲಸಂಗನ ಶರಣರಲ್ಲಿ ಅಂಬಲಿಯ ನೇಮದಾತ ಮಾದಾರಚೆನ್ನಯ್ಯ."

ವೇದನಡುಗಿತ್ತು. ಶಾಸ್ತ್ರವಗಲಿ ಕೆಲಕ್ಕೆ ಸಾರಿದುದಯ್ಯ।
ತರ್ಕ ತರ್ಕಿ ಸಲರಿಯಗೆ. ಮೂಗುನಟ್ಟಿದ್ದಿತಯ್ಯಾ, ಆಗಮ

ಹೊರತೊಲಗಿ ಅಗಲಿದ್ದಿ ತಯ್ಯ–ನಮ್ಮ ಕೂಡಲ ಸಂಗಯ್ಯನು
ಚನ್ನಯ್ಯನ ಮನೆಯಲುಂಡ ಕಾರಣ.

ಇದೆ ಡಿಸೆಂಬರ್ ಹದಿನಾಲ್ಕರಂದು ಮಾದಾರ ಚೆನ್ನಯ್ಯನ ಜಯಂತಿಯನ್ನು ಆಚರಿಸುತ್ತಿದ್ದೇವೆ. ಆತನ ಬದುಕು, ಸಾಧನೆಯನ್ನು ಅರಿತುಕೊಂಡರೆ ಅಸ್ಪೃಶ್ಯತಾ ಸಮಸ್ಯೆ ನಿವಾರಣೆ ಅಸಾಧ್ಯವಾದುದೇನಲ್ಲ ಎಂದೆನಿಸುತ್ತದೆ.

ಹನ್ನೆರಡನೆಯ ಶತಮಾನದಲ್ಲಿಯೇ ಶಿವಶರಣರು ಅಸ್ಪೃಶ್ಯತೆಯ ಈ ರೋಗಕ್ಕೆ ಮದ್ದು ನೀಡಿದ್ದರು. ಅದು ಯಾವುದೆಂದರೆ ಪ್ರತಿಯೊಬ್ಬನಿಗೂ ಧಾರ್ಮಿಕ ಸಂಸ್ಕಾರವನ್ನು, ಸಮಾನವಾಗಿ ನೀಡುವುದು. ಅದು ಪೂರ್ಣ ಯಶಸ್ವಿಯೂ ಆಯಿತು. ಆ ಮದ್ದಿನ ಮಹತ್ವವನ್ನು ನಾವು ಎಷ್ಟು ಬೇಗ ಅರ್ಥ ಮಾಡಿಕೊಳ್ಳುವೆವೋ, ಅಷ್ಟು ಬೇಗ ನಮ್ಮ ದೇಶದ ಒಂದು ಮಹಾನ್ ಸಮಸ್ಯೆಯಾದ ಅಸ್ಪೃಶ್ಯತೆಯನ್ನು ಪರಿಣಾಮಕಾರಿಯಾಗಿ ನಿವಾರಿಸಬಹುದು.

ವರ್ಗ, ವರ್ಣ ಸಂಘರ್ಷದ (ಹಿಂಸಾಯುತ) ಮಾತುಗಳು ಕೇಳಿಬರುತ್ತಿರುವ ಈ ಕಾಲದಲ್ಲಿ ಶಿವ-ಶರಣರು ಹಾಕಿಕೊಟ್ಟ ಹಾದಿಯಲ್ಲಿ ಸಾಗುವುದರಿಂದ ದೇಶಕ್ಕೆ ಕ್ಷೇಮವಿದೆ ಎಂಬುದರಲ್ಲಿ ಸಂಶಯವಿಲ್ಲ. ★

"ಬಸವ ಗಂಗೋತ್ರಿ" ನಿರ್ಮಾಣಕಾರ್ಯಕ್ಕಾಗಿ ವಿಶ್ವಕಲ್ಯಾಣ ಮಿಷನ್‌ಗೆ ಧನ ಸಹಾಯಗೈದವರು

೧.	ಶರಣೆ. ಸರಸ್ವತಿಬಾಯಿ ತುಕಾರಾಂ ರಾವ್, ಮೈಸೂರು	2001-00
೨.	ಶರಣೆ. ಪೊನ್ನಮ್ಮ, ಬೆಂಗಳೂರು	2001-00
೩.	ಶರಣೆ. ಸಾಧನಾದೇವಿ ಗೋಪಾಲಕೃಷ್ಣ ದಿನೇಕರ್ ಶಿವಮೊಗ್ಗ (ಮೈಕ್ ಸೆಟ್‌ಗಾಗಿ)	2051-00
೪.	ಶರಣೆ. ಚಿಕ್ಕಮ್ಮ ಪಿ. ಚಂದ್ರು, ಮೈಸೂರು	1001-00
೫.	ಶರಣೆ. ಗೌರಮ್ಮ ರಂಗಪ್ಪ, ಮೈಸೂರು	501-00
೬.	ಶರಣೆ. ರಾಜಣ್ಣನವರು, ಮೈಸೂರು	1001-00
೭.	ಶರಣೆ. ಸಾವಿತ್ರಮ್ಮ ಡಾ|| ಗೋಪಾಲ್	501-00
೮.	ಶರಣೆ. ಪಾರ್ವತಮ್ಮ ಎಂ. ಸಿ. ಪುಟ್ಟಸ್ವಾಮಿಯವರು ಒಂದು ಗೋದ್ರೆಜ್ ಅಲ್ಮೈರಾ ಮತ್ತು 2 ಬೆಂಚುಗಳನ್ನು ಶಾಲೆಗಾಗಿ ದಾನಮಾಡಿದ್ದಾರೆ.	

ಸ್ಫುರಣ-ಕಿರಣ

—ಜಗದ್ಗುರು ಮಾತಾಜಿ

ಮೈಸೂರು ಮೃಗಾಲಯದಲ್ಲಿ ಘೇಂಡಾಮೃಗದ ಮರಿಯೊಂದಿದೆ. ಹೆಸರು ಇಂದಿರಾ 'ತಾಯಿ' ರಾಣಿ ಮತ್ತು ತಂದೆ 'ಕಾಶಿ', ಈ ಎರಡರಿಂದ ಹುಟ್ಟಿದ ಇಂದಿರೆಯನ್ನು ವಿನಿಮಯದ ಒಪ್ಪಂದದ ಮೇಲೆ ಜರ್ಮನಿಗೆ ಕಳಿಸಬೇಕಂತೆ. ಅದಕ್ಕಾಗಿ ಹಿಡಿಯಲು ಸರ್ವ ಸಿದ್ಧತೆ ನಡೆದಿದೆ. ಆದರೆ ಬುದ್ಧಿವಂತೆ ಇಂದಿರಾ ಅಧಿಕಾರಿಗಳೊಡ್ಡಿದ ಬೋನಿಗೆ ಬೀಳುತ್ತಿಲ್ಲ. ಬೋನಿನಲ್ಲಿ ಆಕೆಗೆ ಬೇಕಾದ ಅನೇಕ ಆಮಿಷಗಳನ್ನೊಡ್ಡಿದ್ದರೂ ಬಂಧನದ ಮುನ್ಸೂಚನೆಯರಿತ ಇಂದಿರಾ ಅವನ್ನು ತಿನ್ನದೇ ತಾಯಿಯ ಸುತ್ತಲೇ ಸುಳಿದಾಡುವಳಂತೆ ಪಾಪ ಅಧಿಕಾರಿಗಳು ಒಂದೆರಡು ತಿಂಗಳಿಂದ ಕಾಯುತ್ತಿದ್ದಾರೆ ಇಂದಿರೆಯ ಬಂಧನವನ್ನು.

ದಿನ ಪತ್ರಿಕೆಯಲ್ಲಿ ಓದಿದಾಗ ಆ ಮೂಕ ಪ್ರಾಣಿಯ ಬುದ್ಧಿವಂತಿಕೆಗೆ ಸಂತೋಷ-ಆಶ್ಚರ್ಯವೆನಿಸಿತು, ಮಾನವನ ದಡ್ಡತನಕ್ಕೆ ವಿಷಾದವೆನಿಸಿತು, ಏನೇ ಇರಲಿ ಸ್ಫುರಣ-ಕಿರಣವೊಂದು ಸ್ಫುರಿಸಿತು. ಪರಮಾತ್ಮನೆಂಬ ತಾಯಿಯಿಂದ ದೂರ ಮಾಡಿ, ವಿಲಾಸ ಪ್ರಪಂಚವೆಂಬ ವಿದೇಶಕ್ಕೆ ರವಾನಿಸಲು ಮಾಯೆಯು ಕಾಯುತ್ತಿರುತ್ತದೆ. ವಿಷಯಾಸಕ್ತಿಯ ಬೋನನೊಡ್ಡಿ ಹೆಣ್ಣು, ಹೊನ್ನು, ಮಣ್ಣುಗಳ ಆಮಿಷಗಳನ್ನಿಟ್ಟು ಮನವೆಂಬ "ಇಂದಿರೆ"ಯನ್ನು ಹಿಡಿಯಲು ಮಾಯೆ ಹೂಡಿರುವ ಜಾಲ ಬಹುದೊಡ್ಡದು. ಈ ಮನವೆಂಬ ಇಂದಿರೆ "ಶಿವಧ್ಯಾನ"ವೆಂಬ ತಾಯಿಯ ಸುತ್ತಲೂ ಅಂಟಿಕೊಂಡೇ ತಿರುಗುತ್ತಾ ಹೆಣ್ಣು, ಹೊನ್ನು, ಮಣ್ಣುಗಳ ಆಮಿಷಕ್ಕೆ ಬೀಳದಿದ್ದರೆ ಸರ್ವಸ್ವತಂತ್ರ; ಅದಕ್ಕೆ ಪಾರಮಾರ್ಥ ಪ್ರಪಂಚದ ಮಾತೃಭೂಮಿ. ಅದಲ್ಲದೆ "ಶಿವಧ್ಯಾನ"ವೆಂಬ ಮಾತೃಸಾನ್ನಿಧ್ಯ ತೊರೆದು ವಿಷಯಾಸಕ್ತಿಯ ಬೋನಿಗೆ ಬೀಳುತ್ತಿದ್ದಂತೆಯೇ "ಆತ್ಮ"ನಿಗೆ ವಿದೇಶವಾದ "ಭವದೇಶ"ಕ್ಕೆ ರವಾನೆ.

ದೊಡ್ಡವರ ಕಡೆಗೆ ದೃಷ್ಟಿ

ಒಂದು ದಿನ ಕಾರಿನಲ್ಲಿ ಸಾಗುತ್ತಿರುವಾಗ ಬೃಹತ್ತಾದ ಗೋಪುರ ಗಡಿಯಾರವೊಂದು ಕಣ್ಣಿಗೆ ಬಿದ್ದಿತು. ತಕ್ಷಣ ಕೈಗಡಿಯಾರದತ್ತ ದೃಷ್ಟಿಬಿದ್ದಿತು. ಕೈಗಡಿಯಾರ ಮತ್ತು ಗೋಪುರ ಗಡಿಯಾರಗಳು ತೋರಿಸುತ್ತಿದ್ದ ವೇಳೆಯಲ್ಲಿ ವ್ಯತ್ಯಾಸ ಕಾಣಬರು

ತ್ತಿತ್ತು. ತಕ್ಷಣ ಸ್ವಾಭಾವಿಕವಾಗಿ ಅನೇಕರು ತಮ್ಮ ತಮ್ಮ ಸಮಯಗಳನ್ನು ಗೋಪುರ ಗಡಿಯಾರವನ್ನನುಸರಿಸಿ ಸರಿಪಡಿಸಿಕೊಳ್ಳತೊಡಗಿದರು. ಆಗ ನಾನು ನುಡಿದೆ ; "ನಿಮ್ಮ ಗಡಿಯಾರಗಳೇ ಸರಿಯಾಗಿ ವೇಳೆ ತೋರಿಸುತ್ತಿಲ್ಲ. ಗೋಪುರ ಗಡಿಯಾರವೇ ಸರಿ ಇದೆ" ಎಂಬುದು ಹೇಗೆ ಗೊತ್ತು. ಆದ್ದರಿಂದ ರೇಡಿಯೋ ವೇಳೆಯನ್ನು ನೋಡಿ ಸರಿಪಡಿಸಿಕೊಳ್ಳಬೇಕು......."

ತಕ್ಷಣ ಒಂದು ವಿಚಾರ ಸ್ಫುರಿಸಿತು. ಜನಸಾಮಾನ್ಯರು ತಮ್ಮ ಆಚಾರ ವಿಚಾರಗಳನ್ನು ತಿದ್ದಿಕೊಳ್ಳಲು, ಸರಿಪಡಿಸಿಕೊಳ್ಳಲು ಧರ್ಮಾಧಿಕಾರಿಗಳನ್ನು, ಮಠ ಪೀಠಾಧಿಪತಿಗಳನ್ನು ನಿರೀಕ್ಷಿಸುವರು. ಅವರು ದೊಡ್ಡವರಾದ ಕಾರಣ ಅವರ ಆಚಾರ-ವಿಚಾರಗಳು ಅನುಕರಣೀಯ ಎಂದೇ ನಂಬುವರು. ಆದರೆ ಅವರ ಆಚಾರ-ವಿಚಾರಗಳೇ ಸರ್ವಮಾನ್ಯ, ಧರ್ಮಸಮ್ಮತ ಎಂದು ನಂಬುವುದು ಹೇಗೆ ? ಆದ್ದರಿಂದ ಕೆಲವೊಮ್ಮೆ ತಮ್ಮ ಆಚಾರಣೆಗಳೇ ಸರಿ ಇದ್ದು, ನಂತರ ತಪ್ಪು ಆದರ್ಶಗಳನ್ನು ಅನುಕರಿಸಿ ತಪ್ಪು ದಾರಿಗೆ ಹೋಗುವ ಸಂಭವ ಉಂಟು ಆದ್ದರಿಂದ ವೇಳೆಯನ್ನು ಸರಿಪಡಿಸಿಕೊಳ್ಳಲು ರೇಡಿಯೋವನ್ನು ಅವಲಂಬಿಸುವಂತೆ ಧರ್ಮಾಚರಣೆಗಳನ್ನು ರೂಢಿಸಿಕೊಳ್ಳಲು ಅನುಭಾವಿಗಳ ಸ್ವಾನುಭವೋಕ್ತಿಗಳನ್ನು ಸತ್ಯನಿಷ್ಠ ಶಾಸ್ತ್ರಗಳನ್ನು ಅವಲಂಬಿಸಬೇಕು.

ಸ್ನೇಹ, ಯಾರು ಯಾರಲ್ಲಿ ?

ಒಂದು ದಿನ ಬುಟ್ಟಿಗಳಲ್ಲಿ ಮೋಸುಂಬಿ, ಸೇಬುಹಣ್ಣುಗಳ ಜೊತೆ ಬಾಳೆಹಣ್ಣು ಇಡುತ್ತಿದ್ದರು. ನಾನಾಗ ಸ್ವಾಭಾವಿಕವಾಗಿ ಹೇಳಿದೆ : "ಎರಡನ್ನೂ ಬೆರಸಬೇಡಿ ಎರಡರ ಸ್ವಭಾವ, ಗುಣಧರ್ಮ ಬೇರೆ ಇರುವುದರಿಂದ ತೊಂದರೆಯಾಗುತ್ತೆ. ಬಾಳೆ ಹಣ್ಣಿಗೆ ಏಟು ತಾಗುತ್ತೆ. ಮೋಸುಂಬಿ ಮತ್ತು ಸೇಬು ಬೇಕಾದರೆ ಒಟ್ಟಿಗಿದ್ದರೆ ಏನಾಗದು. ಆಗ ತಕ್ಷಣವೇ ಒಂದು ವಿಚಾರ ಸ್ಫುರಿಸಿತು. ಶ್ರೀಮಂತ, ಶ್ರೀಮಂತರಲ್ಲಿ ಸ್ನೇಹವಾದರೆ ಕಷ್ಟವಾಗದು. ಬಡವ ಬಡವರಲ್ಲಿ ಸ್ನೇಹವಾದರೆ ಕಷ್ಟವಾಗದು. ಶ್ರೀಮಂತ ಬಡವರಲ್ಲಿ ಸ್ನೇಹವಾದರೆ ಬಹಳ ಕಷ್ಟ. ಏಕೆಂದರೆ ಶ್ರೀಮಂತರ ಆಸೆ ಆಕಾಂಕ್ಷೆ, ಆದರ್ಶ ಆಡಂಬರಗಳಿಗೆ ಹೊಂದಿಕೊಳ್ಳುವುದು ಬಡವರಿಗೆ ಕಷ್ಟಸಾಧ್ಯವಾಗುತ್ತದೆ. ಅದ್ದರಿಂದ ಸ್ನೇಹವು ಸಮಾನಗುಣಧರ್ಮಗಳವರಲ್ಲಿ ಇದ್ದರೆ ಹಿತಕಾರಿ.

ಜೊತೆಗೆ ಇನ್ನೂ ಒಂದು ವಿಚಾರ ಹೊಳೆಯಿತು. ಹಣ್ಣುಗಳನ್ನು ಇಡುವಾಗ ತೆಂಗು, ಸೇಬು, ಮೋಸುಂಬಿ ಮುಂತಾದುವನ್ನು ಕೆಳಗೆ ಇಟ್ಟು ಬಾಳೆಹಣ್ಣುಗಳನ್ನು ಮೇಲೆ ಇರಿಸಬೇಕು. ಬಾಳೆಹಣ್ಣು ಕೆಳಗಿದ್ದು, ಮೇಲೆ ಗಡುಸು ಹಣ್ಣುಗಳನ್ನು ಇಟ್ಟರೆ ಬಾಳೆ ಹಣ್ಣು ಅಪ್ಪಚ್ಚಿ. ಹಾಗೆಯೇ ಶ್ರೀಮಂತಗೆ ಬಡವರ ಆದರ್ಶ, ಸರಳತನ ಇತ್ಯಾದಿ ಅಳವಡಿಸಿಕೊಳ್ಳುವುದು ಸುಲಭ. ಅದೇ ಬಡವರ ಆದಾಯಕ್ಕೆ ಶ್ರೀಮಂತರ ಆಢ್ಯತೆಗಳು, ಆಡಂಬರಗಳು ಹೇರಲ್ಪಟ್ಟರೆ ಅವರ ಬದುಕು ನಜ್ಜುಗುಜ್ಜು. ★


ವಿ ಶ್ವ ಕ ಲ್ಯಾ ಣ ಮಿ ಷ ನ್ನಿ ನ

ಸುಯಿಧಾನ ಸುಗ್ರಂಥ ಮಾಲೆಯ ಲಭ್ಯವಿರುವ ಗ್ರಂಥಗಳು

1.	ದೇವ ಪೂಜಾ ವಿಧಾನ	ಸ್ವಾಮಿ ಲಿಂಗಾನಂದ	2-50
2.	ವಿರಹ ತರಂಗ	ಮಾತೆ ಮಹಾದೇವಿ	3-00
3.	ಬಸವ ತತ್ತ್ವ ದರ್ಶನ	,,	18-00
4.	ಚಿನ್ಮೂಲಾದ್ರಿಯ ಚಿತ್ಕಳೆ	ಸ್ವಾಮಿ ಲಿಂಗಾನಂದ	6-00
5.	ಸಾಮೂಹಿಕ ಪ್ರಾರ್ಥನೆ	ಸಂ: ಮಾತೆ ಮಹಾದೇವಿ	0-50
6.	ಹಿಂದೂ ಯಾರು ?	ಮಾತೆ ಮಹಾದೇವಿ	0-50
7.	ಬಸವ ವಚನ ಸುಧಾ	ಸಂ: ಮಾತೆ ಮಹಾದೇವಿ	2-00
8.	ವಚನಾಮೃತ	ಸ್ವಾಮಿ ಲಿಂಗಾನಂದ	2-00
9.	ಕಲ್ಯಾಣ ಕ್ರಾಂತಿ	ಮಾತೆ ಮಹಾದೇವಿ	3-50
10.	ದೇವರ ಮಕ್ಕಳು	,,	2-50
11.	ಪತಿತೋದ್ಧಾರಕ	,,	1-50
12.	ಲಿಂಗಾಯತ ಧರ್ಮ ಕೈಪಿಡಿ	,,	2-50
13.	ಲಿಂಗಾಯತ ಧರ್ಮ ಸ್ಥಾಪಕರಾರು ?	ಬಿ. ಸಿ. ಜವಳಿ	4-00
14.	ಬಸವಣ್ಣನವರ ವಚನ ಪದ ಪ್ರಯೋಗ ಕೋಶ	ಎಸ್. ಆರ್. ಗುಂಜಾಳ	50-00
15.	ದೇವನೆಡೆಗೆ	ಮಾತೆ ಮಹಾದೇವಿ	1-00
16.	ಹೆಪ್ಪಿಟ್ಟ ಹಾಲು (ಸಾ. ಕಾದಂಬರಿ)	,,	16-00
17.	Revolution in Kalyana	Mate Mahadevi	5-00
18.	A Guide to Lingayatism	,,	6.00
19.	Emblem of God	Swami Lingananda	6-00
20.	ಅಧ್ಯಾತ್ಮ ಮತ್ತು ಮಹಿಳೆ	ಮಾತೆ ಮಹಾದೇವಿ	1-00
21.	ತರಂಗಿಣಿ (ಅಕ್ಕಮಹಾದೇವಿಯ ಕಾದಂಬರಿ)	,,	33-00
22.	ವಿಶ್ವ ವಿಭೂತಿ ಬಸವಣ್ಣ	,,	4-00
23.	Ligayatism	,,	3-00
24.	ವಿಶ್ವ ಕಲ್ಯಾಣ ಗೀತೆ	ಸಂ : ,,	3-00
25.	ಮಾತೃ ಹರಕೆ	,,	3-00
26.	Mataji A Profile	,,	0-50
27.	ವಿಶ್ವಕಲ್ಯಾಣ ಮಿಷನ್ ಸಿಂಹಾವಲೋಕನ ಮತ್ತು ಪಕ್ಷಿನೋಟ	ಶಿ. ಚಂದ್ರಕಂಠಿ	0-50
28.	ಧರ್ಮಕ್ರಾಂತಿಯ ದಿವ್ಯಜ್ಯೋತಿ	ಗೋ.ರು.ಚ.	0-50

ಬಸವಣ್ಣ, ಅಕ್ಕಮಹಾದೇವಿ, ಗುರೂಜಿ, ಮಾತಾಜಿಯವರ ಭಾವಚಿತ್ರಗಳು ಪ್ರತಿಯೊಂಕ್ಕೆ . 1-50

ಲಿಂಗಾಯತ ಯಾರು ? (0-25) ವಿಶ್ವ ವಿಭೂತಿ ಬಸವಣ್ಣ (ಚಾರ್ಟ್) 0-50



ಮೈಸೂರು ನಗರದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆಮಹಾದೇವಿಯವರಿಂದ ಪ್ರವಚನಾರಂಭ.
ಉದ್ಘಾಟಕರು : ಶಾಸಕ ಹೆಚ್. ಗಂಗಾಧರನ್, ಅಧ್ಯಕ್ಷತೆ : ಪಿ. ಮಲ್ಲಿಕಾರ್ಜುನಯ್ಯ

Correspond to :

BASAVA MANTAPA

No. 24, Chord Road, 2nd Block, Rajajinagar
BANGALORE - 560 010